Sri C. J. MUCKANNAPPA.—The Chief Minister is a wise Chief Minister. I do not know when he was practising as a lawyer. Why not you allow the Revenue Minister to move that Demand ?

Mr. SPEAKER.—I wish to state that all the Demands are before the House.

*ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಇಂದಿನ ಬೇಡಿಕೆಯಲ್ಲಿ ಬರಗಾಲದ ಪರಿಸ್ಥಿತಿಗೋಸ್ಕರ ಕಷ್ಟವನ್ನು ನಿವಾರಣೆ ಮಾಡುವುದಕ್ಕೋಸ್ಕರ, ಮೀಸಲಾಗಿಟ್ಟರ ತಕ್ಕ ಮೊಬಲಗಿನಲ್ಲಿ ಸ್ಯಾಲರೀಸ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಎಂಬುದಾಗಿ 22 ಸಾವಿರದ 200 ರೂಪಾಯಿಗಳ ಪೈಕಿ 7 ಸಾವಿರದ 900 ರೂಪಾಯಿಗಳನ್ನು ಖರ್ಚುಮಾಡಿದೆ. 1959–60ನೇಯ ಸಾಲಿಗೆ ಮತ್ತು ರಿಲೀಫ್‌ವರ್ಕ್ಸ್‌ಗೆ 13 ಲಕ್ಷ 25 ಸಾವಿರ ರೂಪಾಯಿಗಳ ಪೈಕಿ 6 ಲಕ್ಷ 26 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗ ಮತ್ತು ಎಲ್ಲಿಂದ ?

ಶ್ರೀ ಕೆ. ಕೆಂಚಪ್ಪ.—1959–60ನೆಯ ಇಸವಿಯಲ್ಲಿ ಅದು ಪೇಜ್ 420ರಲ್ಲಿ ಎಕ್ಸ್‌ಪೆಂಡಿಚರ್‌ಫ್ಯಾರ್ಮ್ ಎಂಬ ಐಟಂನಲ್ಲಿದೆ. ಇದನ್ನು ನೋಡಿದರೆ ತಾವು ಮೀಸಲಾಗಿಟ್ಟಿರತಕ್ಕ ಹಣ 59—60ನೆಯ ಸಾಲಿಗೆ 25 ಸಾವಿರದ 200 ರೂಪಾಯಿಗಳು ಇದರಲ್ಲಿ ⅓ಭಾಗವೂ ಖರ್ಚು ಮಾಡಲಿಲ್ಲ. ರಿಲೀಫ್ ವರ್ಕ್ಸ್‌ನಲ್ಲಿ 13 ಲಕ್ಷ 25 ಸಾವಿರಕ್ಕೆ 6 ಲಕ್ಷ 26 ಸಾವಿರ ಮಾತ್ರ ಖರ್ಚುಮಾಡಿದ್ದಾರೆ. ಅದರಲ್ಲಿ ಸುಮಾರು ಅರ್ಧಕ್ಕೆ ಅರ್ಧ ಕೂಡ ಖರ್ಚುಮಾಡಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ ಕಡಮೆ ಮಾಡಬೇಕಾಗಿತ್ತೋ ಅಥವಾ ಹೆಚ್ಚು ಮಾಡಬೇಕಾಗಿತ್ತೋ ?

ಶ್ರೀ ಕೆ. ಕೆಂಚಪ್ಪ.—ತಾವು ಸ್ವಲ್ಪ ನಿಧಾನ ಮಾಡಬೇಕು. ಏತಕ್ಕೆಂದರೆ ಖರ್ಚು ಮಾಡಿದ್ದರೆ ಒಂದಿಷ್ಟು ಹೆಚ್ಚಿಗೆ ಮಾಡಿ ಎಂದು ಹೇಳುತ್ತೇವೆ. ಖರ್ಚು ಮಾಡದೆ ಹೋದರೆ ಏನಾದರೂ ತಪ್ಪು ಕಂಡು ಹಿಡಿಯುವುದರಲ್ಲಿ ನಾವು ಇದ್ದೇವೆಂದು ಯಾರೂ ತಿಳಿಯಬಾರದು. ಅವಶ್ಯಕವಾಗಿ ಜನಗಳಿಗೋಸ್ಕರವಾಗಿ ಖರ್ಚುಮಾಡುವುದೇ ಸರ್ಕಾರದ ಜವಾಬ್ದಾರಿ. ಅದಕ್ಕೋಸ್ಕರವಾಗಿ ಈ ಹಣವನ್ನು ಬಡ್ಜೆಟ್ಟಿನಲ್ಲಿ ಮೀಸಲಾಗಿಟ್ಟಿದ್ದು. ಅಸೆಂಬ್ಲಿಯಲ್ಲಿ ಒಂದು ಸಾರಿ ಮೀಸಲಾಗಿಟ್ಟ ಹಣದಲ್ಲಿ ಕಡಮೆ ಖರ್ಚು ಮಾಡಬಾರದು, ಹೆಚ್ಚಿಗೆ ಖರ್ಚು ಮಾಡಬಾರದು. ಒಂದು ವೇಳೆ ಉಳಿತಾಯವಾದರೆ, ಅಸೆಂಬ್ಲಿಯ ಸದಸ್ಯರಿಗೆ ಸಮಂಜಸವಾಗುವ ರೀತಿಯಲ್ಲಿ ಅದಕ್ಕೇನಾದರೂ ಒಂದು ಸಮಜಾಯಿಷಿ ಕೊಡಬೇಕು. ಆದರೆ ಮುಖ್ಯವಾಗಿ ಈ ಒಂದು ವ್ಯವಸಾಯ ಬಾಬಿನಲ್ಲಿ ಸುಮಾರು ⅓ ಭಾಗ ಖರ್ಚು ಮಾಡದೇ ಇರುವುದಕ್ಕೆ ಅಥವಾ ಅರ್ಧಕ್ಕಿಂತ ಹೆಚ್ಚಿಗೆ ಖರ್ಚು ಮಾಡಿರುವುದಕ್ಕೆ ಕಾರಣವಿಲ್ಲ. ಒಟ್ಟಿನಲ್ಲಿ ಬರಗಾಲ ಇಲ್ಲವೆಂದು ಈ ರೀತಿ ಖರ್ಚು ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದರೆ ಚೆನ್ನಾಗಿತ್ತು. ತಮ್ಮ ಎಕ್ಸ್‌ಪ್ಲನೇಟರಿ ನೋಟಿನಲ್ಲಿ ಈ ಸಮಾಚಾರವೇ ಇಲ್ಲ. ಇನ್ನು ಮುಂದೆ ನೋಡುತ್ತಾ ಹೋದರೆ ನಾನು ಕೊಟ್ಟಿರುವ ಅನೇಕ ಪ್ರಶ್ನಾವಳಿಗೆ ಉತ್ತರ ಕೊಡುವಾಗ ಉದಾಹರಣೆಗಾಗಿ 512ನೆಯ ಪ್ರಶ್ನೆಯಲ್ಲಿ ಈ ರೀತಿ ಉತ್ತರ ಕೊಟ್ಟಿದ್ದಾರೆ—ಗುಲ್ಬರ್ಗ, ರಾಯಚೂರ್, ಬೀದರ್, ಧಾರವಾಡದ ಸ್ವಲ್ಪ ಭಾಗ, ಬೆಳಗಾಂ, ಬಳ್ಳಾರಿ, ಚಿತ್ರದುರ್ಗ ತುಮಕೂರು ಈ ಭಾಗಗಳಲ್ಲಿ ಯಾವಾಗಲೂ ಬರಗಾಲ ಇರುತ್ತದೆ ಎಂದು. ಹಿಂದೆ ಅನೇಕ ಸ್ಥಳಗಳಲ್ಲಿ ಬರಗಾಲವಿತ್ತು. ಆದುದರಿಂದ 1958-59 ಮತ್ತು 1959-60ನೆಯ ಸಾಲುಗಳಲ್ಲಿ ಕೆಲವು ಕಡೆ ಬರಗಾಲವಿತ್ತು ಎಂದು ಹೇಳಬಹುದು. ಇವು ಬಹಳ ಮುಖ್ಯವಾದ ಸ್ಥಳಗಳಾದುದರಿಂದ, ಇಲ್ಲಿ ಅನುಕೂಲವಾದಂಥ ಕೆಲಸಗಳನ್ನು ಮಾಡಿಸಬೇಕು ಎಂಬ ಭಾವನೆ ಬರಬೇಕು. ಈ ವಿಚಾರ ಒಂದನ್ನು ತೆಗೆದುಕೊಂಡು ನೋಡಿದರೆ ನನ್ನ ಪ್ರಶ್ನೆ 533ರಲ್ಲಿ 10–3–59ನೇ ತಾರೀಖಿನ ದಿವಸ ಎಲ್ಲ ಉತ್ತರಗಳನ್ನು ಕೊಟ್ಟಿತ್ತು. ಅದರಲ್ಲಿ ಎಷ್ಟೆಷ್ಟು ಕೆಲಸಗಳನ್ನು ಮಾಡಿದ್ದೀರಿ ಎಂಬುದನ್ನು ಹೇಳಿದ್ದೀರಿ. ತುಮಕೂರು ಜಿಲ್ಲೆಯಲ್ಲಿ 22 ಕೆಲಸಗಳಿಗೆ 17 ಸಾವಿರ 236 ರೂಪಾಯಿ 76 ನಯಾ ಪೈಸೆ, ಕೋಲಾರ ಜಿಲ್ಲೆಯಲ್ಲಿ 149 ಕೆಲಸಗಳಿಗೆ 57 ಸಾವಿರ 325 ರೂಪಾಯಿ 20 ನಯಾ ಪೈಸೆಗಳು, ಚಿತ್ರದುರ್ಗಕ್ಕೆ 11 ಕೆಲಸಗಳಿಗೆ 3389 ರೂಪಾಯಿಗಳು, ಬಿಜಾಪುರ ಜಿಲ್ಲೆಯೊಳಗೆ 32 ಕೆಲಸಗಳಿಗೆ 50 ಸಹಸ್ರ ರೂಪಾಯಿಗಳು ಹೀಗೆ ಖರ್ಚಾಗಿವೆ. ಆದರೆ 1958–59 ಮತ್ತು 1959-60ನೆಯ ಸಾಲಿಗೆ ಸಮಂಜಸವಾಗಿ ಉತ್ತರವನ್ನೇ ಕೊಡಲಿಲ್ಲ. 1958-59ನೆಯ ಸಾಲಿಗಿಂತ 1959–60ನೆಯ ಸಾಲಿನಲ್ಲಿ ಹೆಚ್ಚಿಗೆ ಬರಗಾಲವಿತ್ತು. ಈಗಲೂ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು, ಮತ್ತು ಸಿರಾ ತಾಲ್ಲೂಕುಗಳಲ್ಲಿ ಬರಗಾಲ ಹೆಚ್ಚಾಗಿದೆ. ದನಗಳಿಗೆ ಮೇವು ಇಲ್ಲ. ಜನಗಳಿಗೆ ಅನ್ನವಿಲ್ಲ. ನಾನು ಈ ವಿಚಾರವನ್ನು ಪ್ರಸ್ತಾಪಿಸುವಾಗ ಸ್ವಲ್ಪ ಸಾಧ್ಯವಾದ ಮಟ್ಟಿಗೂ ಕಡಮೆ ತರಹದಲ್ಲಿ ಹೇಳಬೇಕಾಗಿದೆ. ಈ ವಿಚಾರದಲ್ಲಿ ತಮಗೆ ಅನೇಕಾನೇಕ ಕಾಗದಗಳು ಬಂದಿವೆಯೆಂದು ಕಾಣುತ್ತದೆ. ಆ ರೀತಿ ಕಾಗದಗಳು ಬಂದಿದ್ದರೂ ಇಂದು ಉತ್ತರವಿಲ್ಲ. ಇನ್ನೂ ನನ್ನ ಪ್ರಶ್ನೆ ಮತ್ತು ಉಪಪ್ರಶ್ನೆಗಳಿಗೆ ಉತ್ತರ ಕೊಡ

(ಶ್ರೀ ಕೆ. ಕೆಂಚಪ್ಪ)

ಬೇಕಾಗಿದೆ. ಈ ಬಾಬಿಗೆ ಎಷ್ಟು ರೆಮಿಷನ್ ಕೊಟ್ಟಿದ್ದೀರಿ ? 1959-60ನೆಯ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ರೆಮಿಷನ್ ಕೊಟ್ಟಿದ್ದೀರಿ. ಆದರೆ ಕೆಲವು ಭಾಗಗಳಲ್ಲಿ ಕೊಟ್ಟಿಲ್ಲ. ಸುಮ್ಮನೆ ಅಲ್ಪಾವಧಿ ಸಾಲ ಹಾಗೆ, ಹೀಗೆ ಎಂದು ತೇಲಿಸಿದ್ದೀರಿ. ಚಿತ್ರದುರ್ಗದಲ್ಲಿ ಕೇವಲ ಈ ಬಾಬಿಗೆ ರೂಪಾಯಿ 3379.34 ನಯೇ ಪೈಸೆ ಮಾತ್ರ ಖರ್ಚುಮಾಡಿ ಬಾಕಿ ಕಡೆಗಳಿಗೆ ಹೆಚ್ಚಿಗೆ ಖರ್ಚುಮಾಡಿದ್ದು ಏಕೆ? ಹಾಗಾದರೆ ಚಿತ್ರದುರ್ಗದಲ್ಲಿ ಬರಗಾಲವಿರಲಿಲ್ಲವೇ ? ನಾನು ಹೇಳಿದ ತಾಲ್ಲೂಕುಗಳಲ್ಲಿ 3 ಸಾವಿರ ಚಿಲ್ಲರೆ ಮಾತ್ರ ಖರ್ಚು ಮಾಡಿದ ಕಾರಣವೇನು ? ನನಗೆ ತಿಳಿದ ಪ್ರಕಾರ ಕೆಲಸ ಮಾಡುವುದಕ್ಕೆ ಜನ ಬರುವುದಿಲ್ಲವೆಂದು ಯಾರೋ ರಿಪೋರ್ಟ್ ಮಾಡಿದ್ದರಲ್ಲವೇ ? ಕೆಲಸಕ್ಕೆ ಜನಗಳೇ ಬರುವುದಿಲ್ಲವೆಂದರೆ ಏನು ಅರ್ಥ ? ಇದರಿಂದೇನು ಗೊತ್ತಾಗುತ್ತದೆಂದರೆ ಉದ್ದೇಶ ಪೂರ್ವಕವಾಗಿ ಕೆಲಸವಾಗಬಾರದು ಎಂಬುದಾಗಿ ಇಂತಹ ವರದಿ ಬಂದಿದೆಯೆಂದು ಕಾಣುತ್ತದೆ. ಅಥವಾ ಉದ್ದೇಶವೇನಿರಬಹುದೋ, ಅಥವಾ ಏತಕ್ಕೆ ಇದನ್ನು ಖರ್ಚು ಮಾಡದೆ ಉಳಿಸಿರಬಹುದೋ ಗೊತ್ತಿಲ್ಲ. ಇಲ್ಲದಿದ್ದರೆ ಬಿಜಾಪುರ ಜಿಲ್ಲೆಯಲ್ಲಿ ಎಲ್ಲಾ ನಮೂನೆಯ ಕೆಲಸಗಳನ್ನು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಕೆಲಸ ಮಾಡಿಸಿರುವ ಕಾರಣವೇನು ? ಈ ಜಿಲ್ಲೆಯಲ್ಲಿ ಬಿಟ್ಟಿರುವ ಕಾರಣವೇನು ? ಇದನ್ನು ಅವಶ್ಯವಾಗಿ ಕೇಳುತ್ತಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಿ ಬರಗಾಲವಿದೆ. ಇಲ್ಲಿ ಮುಂಗಾರು ಮಳೆ ಬರುವುದಿಲ್ಲ. ಹಿಂಗಾರು ಮಳೆ ಬಂದರೆ ನೀರು ನಿಲ್ಲುವುದಿಲ್ಲ. ಇಂತಹ ಸ್ಥಳಗಳಲ್ಲಿ ಒಳ್ಳೆಯ ಬೆಳೆ ಆಗುವಾಗ ಕೇವಲ 3 ಸಾವಿರ ಚಿಲ್ಲರೆ ದುಡ್ಡು ಖರ್ಚು ಮಾಡುವುದು ಅಷ್ಟು ಸಮಂಜಸವಾಗಿಲ್ಲ. ಸಿರಾ ತಾಲ್ಲೂಕಿಗೆ ಮೂರು ಕಾಸು ಕೂಡ ಖರ್ಚು ಮಾಡದೇ ಇರುವುದು ಇದು ಎಷ್ಟು ಸಮಂಜಸವಾಗಿದೆ? ಇದರ ಅರ್ಥವೇನು ? ಈಗ ಏನಾಗಿದೆಯೆಂದರೆ ಕೇಂದ್ರ ಸರ್ಕಾರ ಕೊಡತಕ್ಕ ಗ್ರಾಂಟು ಕೂಡ ಖರ್ಚಾಗದೆ ಲ್ಯಾಪ್ಸ್ ಆಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಯಾವತ್ತು ಕೇಂದ್ರ ಸರ್ಕಾರದಿಂದ ಬರಗಾಲ ಕೆಲಸಕ್ಕೇ ಗ್ರಾಂಟು ಬಂದದ್ದು ?

ಶ್ರೀ ಕೆ. ಕೆಂಚಪ್ಪ.—ಸ್ವಲ್ಪ ನಿಧಾನ ಮಾಡಿ. ಆ ಪಾಯಿಂಟಿಗೆ ಆಮೇಲೆ ಬರುತ್ತೇನೆ. ಏಕೆಂದರೆ ನಾನು ಹೇಳತಕ್ಕ ವಿಷಯಗಳು ಬಹಳ ಇವೆ. ಕಾಗದಗಳು ಬಹಳ ಜಾಸ್ತಿಯಾಗಿವೆ. ಸುಮ್ಮನೆ ವೇಸ್ಟ್ ಮಾಡುವುದು ಸರಿಯಲ್ಲ. ಅದು ಬಹಳ ಕಷ್ಟ. ಈಗ ಸದ್ಯಕ್ಕೆ ಈ ಬಗ್ಗೆ ತಮ್ಮ ಸಮಜಾಯಿಷಿ ಏನು ? 1959-60ನೆಯ ಸಾಲನಲ್ಲಿ ಒಂದು ತಾಮ್ರದ ದಮಡಿ ಕೂಡ ಚಿತ್ರದುರ್ಗ ಜಿಲ್ಲೆಗೆ ಖರ್ಚು ಮಾಡದೇ ಇರಲು ಕಾರಣವೇನು ? ಏನಾದರೂ ಸಮಜಾಯಿಷಿ ಕೊಟ್ಟಿದ್ದರೆ ಚೆನ್ನಾಗಿತ್ತು. ಅದು ಸುಳ್ಳೋ ಖಾತರಿಯೋ ಎಂಬುದು ಗೊತ್ತಾಗುತ್ತಿದ್ದಿತು. ಡೆಪ್ಯೂಟಿ ಕಮಿಷನರಿಗೆ ನಿಜವಾಗಿ ಕಾನೂನು ವ್ಯಾಪ್ತಿಯನ್ನು ಬಿಟ್ಟು ಕೊಡುತ್ತಿದ್ದೀರಿ. ಈ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದ್ದೇನೆ. ಆಗಾಗ ವಿಚಾರ ಮಾಡಿದ್ದೇನೆ. ಅನೇಕ ಕಾಗದಗಳು ತಮಗೆ ಈ ಬಗ್ಗೆ ಬಂದಿವೆ. ಅವೊಂದಕ್ಕೂ ಉತ್ತರವಿಲ್ಲ. ಆಫೀಸಿನಲ್ಲಿ ಅವೆಲ್ಲವೂ ಕಸದ ಬುಟ್ಟಿಗೇನಾದರೂ ಹೋದುವೋ ಏನೋ ಗೊತ್ತಿಲ್ಲ. ದನಗಳಿಗೆ ಮೇವು ಇಲ್ಲದೆ, ಅವು ದಿಕ್ಕು ಪಾಲಾಗಿ ಹೋಗಿವೆ. ಮಲೆನಾಡಿನ ಕಡೆಗೆ ಈ ಪರಿಸ್ಥಿತಿಯಾಗಿದೆ. ಆದರೆ ಬೆಂಗಳೂರಿನಲ್ಲಿ ಸುಖವಾಗಿರತಕ್ಕವರಿಗೆ ಇವೆಲ್ಲಾ ಏನು ಗೊತ್ತಾಗುತ್ತದೆ? ಆಫೀಸಿನಲ್ಲಿ ಕಾಗದಗಳು ಕಸದ ಬುಟ್ಟಿಯಲ್ಲಿ ಬಿದ್ದಿವೆ ಎಂದು ಹೇಳಿದರೆ ಸರ್ಕಾರದಲ್ಲಿ ಇನ್ನೆಷ್ಟರ ಮಟ್ಟಿಗೆ ನ್ಯಾಯವಿದೆಯೆಂದು ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ.

ಇದೆಲ್ಲ ಏನೆಂದರೆ ಸರ್ಕಾರದವರು ಈಗ ಹೇಳುತ್ತಿರುವ ಈ ಪಂಚವಾರ್ಷಿಕ ಯೋಜನೆಗಳು ಏನಿವೆ ಇವುಗಳ ಮುಖೇನ ಮಂತ್ರಿಗಳು ಅಗದೀ ಹಿಂದುಳಿದಿರತಕ್ಕ ಪ್ರದೇಶಗಳಿಗೆ ಎಂದರೆ ನಾನಾಗಲೇ ತಿಳಿಸಿದ ಸ್ಥಳಗಳಿಗೆ ಹೆಚ್ಚಿನ ನಿಗಾ ಕೊಟ್ಟು ಆ ಸ್ಥಳಗಳಿಗೆ ಕ್ಷಾಮ ಬಾರದಿರುವಂತೆ ಏನಾದರೂ ಪರಿಹಾರ ಮಾರ್ಗಗಳನ್ನು ಕಂಡು ಹಿಡಿದು ಅಲ್ಲಿಯ ಜನರ ಜೀವನೋಪಾಯಕ್ಕೊಂದು ಮಾರ್ಗ ಕಲ್ಪಿಸಿಕೊಡಬೇಕಾದುದು ಅಗತ್ಯ. ನಾನಾಗಲೇ ಹೇಳಿದ ಜಿಲ್ಲೆಗಳಲ್ಲಿ ಯಾವಾಗ್ಲೂ ಹೆಚ್ಚು ಕಡಮೆ ಬರಗಾಲವಿದ್ದೇ ಇರುತ್ತದೆಂದು ಮಂತ್ರಿಗಳೇ ಜವಾಬ್ ಕೊಟ್ಟಿದ್ದಾರೆ. ಹಾಗೆ ಅವರಿಗೆ ಈ ಸ್ಥಳಗಳೆಲ್ಲ ಬರಗಾಲಕ್ಕೀಡಾದ ಪ್ರದೇಶಗಳೆಂದು ಗೊತ್ತಿದ್ದರೂ ಅವರೇಕೆ ಆ ಸ್ಥಳಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಿಲ್ಲ? ಅದಕ್ಕೆ ಕಾರಣವೇನೆಂಬುದನ್ನು ಈಗ ಅವರೇ ಹೇಳಲಿ. ಈ ಪ್ರದೇಶಗಳನ್ನು ಸರ್ಕಾರದವರು ಇಷ್ಟೊಂದು ಉಪೇಕ್ಷೆ ಮಾಡಲು ಕಾರಣಗಳೇನಿದ್ದುವು ಹೇಳಲಿ. ಇನ್ನು ಮೂರನೆಯ ಪಂಚವಾರ್ಷಿಕ ಯೋಜನೆ ಕಾರ್ಯಾಚರಣೆಗೆ ಬರುವುದರಲ್ಲಿದೆ. ಈ ಯೋಜನೆಯಲ್ಲಾದರೂ ಸರ್ಕಾರದವರೇನಾದರೂ ಆ ಕ್ಷಾಮಪೀಡಿತ ಪ್ರದೇಶಗಳಲ್ಲಿ ಬರ ತಲೆ ಹಾಕದಂತೆ ತಡೆಗಟ್ಟಲು ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಯೇ? ಹಾಗಿದ್ದರೆ ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಆಲೋಚಿಸಿದ್ದಾರೆ ತಿಳಿಸಲಿ. ಏತಕ್ಕೆಂದರೆ ಈ ಬರಗಾಲವೆಂಬುದು ಏಕಕಾಲಕ್ಕೇ ಎಲ್ಲ ಪ್ರದೇಶಗಳಿಗೂ ಬರುವುದಿಲ್ಲ. ಈ ಬರಗಾಲಗಳು ಬಾರದಂತೆ ತಡೆಗಟ್ಟಬೇಕೆಂಬ ಯೋಜನೆಗಳ ಬಗ್ಗೆ ಈ ಪಂಚವಾರ್ಷಿಕ ಯೋಜನೆಗಳಲ್ಲಿ ಬಹಳವಾಗಿ ಹೇಳಲಾಗಿದೆ. ಈಗ ಬರಲಿರುವ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಸರ್ಕಾರದವರು ಯಾವ ಯಾವ ಸ್ಥಳಗಳಲ್ಲಿ ಬರಬಹುದೆಂದು ನಿರೀಕ್ಷಿಸಿದ್ದಾರೋ ಅಂಥ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಏನೇನು ಪ್ರಯತ್ನಗಳನ್ನು ಮಾಡಿದ್ದಾರೆಂದು ನೋಡಿದರೆ ಏನೊಂದೂ ಕಂಡು ಬರುತ್ತಿಲ್ಲ. ಇದನ್ನೆಲ್ಲ ನೋಡಿದರೆ ನನಗೇನೋ ತುಂಬಾ ವ್ಯಸನವಾಗುತ್ತಿದೆ. ತಾವು ಹೀಗೆಲ್ಲ ಉಪೇಕ್ಷೆಯಿಂದಿದ್ದರೆ ಈ ಹಿಂದುಳಿದ ಪ್ರದೇಶಗಳನ್ನೆಲ್ಲ ಯಾವ ರೀತಿ ಅಭಿವೃದ್ಧಿ ಮಾಡುತ್ತಾರೋ ಅದು ದೇವರಿಗೇ ಗೊತ್ತಾಗಬೇಕು. ಆದರೆ ಇಲ್ಲಿಯವರೆಗೂ ಆ ಕ್ಷಾಮಪೀಡಿತ ಪ್ರದೇಶಗಳಲ್ಲಿರತಕ್ಕ ಜನರ ಹೊಟ್ಟೆ ಪಾಡನ್ನು ಜರುಗಿಸಲು ಅನುಕೂಲವಾದ ಅವಕಾಶಗಳೇನನ್ನೂ ಈ ಪಂಚವಾರ್ಷಿಕ ಯೋಜನೆಗಳಲ್ಲಿ ಇಲ್ಲಿಯವರೆಗೂ ಮಾಡಿರುವಂತೆ ನನಗೆ ಕಂಡು ಬರುತ್ತಿಲ್ಲ. ಆದರೆ ಇಲ್ಲಿಯವರೆಗೂ ಆಗಿ ಹೋಗಿರತಕ್ಕ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಕ್ಷಾಮಪೀಡಿತ ಪ್ರದೇಶಗಳ ಅನುಕೂಲಕ್ಕಾಗಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಉಲ್ಲೇಖಿಸಲಾಗಿದೆ. ಈ ಬರಗಾಲಕ್ಕೀಡಾಗತಕ್ಕ ಯಾವ ಯಾವ ಪ್ರದೇಶದ ಅನುಕೂಲಕ್ಕಾಗಿ ಸೆಂಟ್ರಲ್ ಆಫೀಸಿನವರು ಯಾವ ಯಾವ ಬಾಬಿಗೆ ಎಷ್ಟೆಷ್ಟು ದುಡ್ಡನ್ನೊದಗಿಸಿದ್ದಾರೆಂಬುದಕ್ಕೆ ಸರ್ಕಾರದವರು

ತಮ್ಮ ವಶದಲ್ಲಿರತಕ್ಕ ರಿಕಾರ್ಡನ್ನೇ ನೋಡಲಿ. ಆಗ ಅವರಿಗೇ ಗೊತ್ತಾಗುತ್ತದೆ. ಈ ಬಾಬಿಗೆ ಅವರೆಷ್ಟರ ಮಟ್ಟಿಗೆ ಶ್ರದ್ಧೆವಹಿಸಿದ್ದಾರೆ ಎಂಬುದು.

ಇನ್ನು ಎರಡನೆಯ ವಿಚಾರವೆಂದರೆ ಕಮ್ಯುನಿಟಿ ಡೆವಲಪ್‌ಮೆಂಟ್ ಬಾಬುಗಳೂ, ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಮುಗಳೂ ಮತ್ತು ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್. ಈ ಶಬ್ದಗಳೆಲ್ಲ ಭಾರಿ ಭಾರಿ ಶಬ್ದಗಳೇನೋ ಹೌದು. ಈ ಶಬ್ದಗಳನ್ನು ನೋಡಿದ ಮಾತ್ರಕ್ಕೆ ಆ ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳಲ್ಲಿದ್ದಂತೆ, ಬರಡಾಕಳೂ ಸಹ ಇಲ್ಲದಂಥಾ ಈ ಭಾರತದಲ್ಲಿ ಏನೋ ಕಾಮಧೇನುವನ್ನೇ ತಂದು ಮಂತ್ರಿಗಳು ಮನೆ ಮನೆಗೂ ನುಗ್ಗಿಸಿ ಬಿಟ್ಟಿದ್ದಾರೇನೋ ಎನ್ನುವ ಹಾಗೆ ಈ ಶಬ್ದಗಳು ಇರುತ್ತವೆ. 1959-60ಕ್ಕೆ ಕಮ್ಯುನಿಟಿ ಡೆವಲಪ್‌ಮೆಂಟ್ ಬಾಬಿಗೆ ರೆವಿನ್ಯೂ 81.38 ಲಕ್ಷ ತೋರಿಸಿದ್ದೀರಿ. ಆದರೆ ತಮಗೆ ಖರ್ಚು ಬಂದಿರುವುದು 11 ಲಕ್ಷ 22 ಸಾವಿರ ಮಾತ್ರ. ಲೋಕಲ್‌ಡೆವಲಪ್‌ಮೆಂಟ್ ವರ್ಕ್ಸ್‌ಗಳ ಬಗ್ಗೆ ತಾವು ಮೀಸಲಾಗಿಟ್ಟಿದ್ದುದು 16 ಲಕ್ಷ 66 ಸಾವಿರ. ಅದಕ್ಕೆ ಖರ್ಚು ಮಾಡಿರುವುದು ಮಾತ್ರ 11 ಲಕ್ಷ 70 ಸಾವಿರ. ಇದೆಲ್ಲ ಕೇಂದ್ರ ಸರ್ಕಾರದ ಹಣ. ಇದೇ ರೀತಿ ನ್ಯಾಷನಲ್ ಎಕ್ಸ್‌ಟೆನ್ಷನ್ ಬಾಬಿಗೆ 147.12 ಲಕ್ಷ ತೋರಿಸಿ 21.94 ಲಕ್ಷ ಮಾತ್ರ ಖರ್ಚು ಮಾಡಲಾಗಿದೆ. ಅಲ್ಲಿಗೆ ತೋರಿಸಿರುವ ಹಣಕ್ಕೂ ಖರ್ಚು ಮಾಡಿರುವ ಮೊಬಲಗಿಗೂ ಎಷ್ಟು ವ್ಯತ್ಯಾಸವಿದೆ. ಅವರೇ ನೋಡಲಿ. ಮೊದಲು ಈ ಬಾಬಿಗೆ ಬಡ್ಜೆಟ್ಟಿನಲ್ಲಿ 25 ಲಕ್ಷ ತೋರಿಸಿ ರಿವೈಸ್ಡ್ ಬಡ್ಜೆಟ್ಟಿನಲ್ಲಿ 15 ಲಕ್ಷ ತೋರಿಸಿದ್ದಾರೆ. ಇದೆಷ್ಟು ವ್ಯತ್ಯಾಸವಾಗಿದೆ ನೋಡಲಿ. ಇಲ್ಲಿಯವರೆಗೂ ನಮ್ಮ ಸರ್ಕಾರದವರೇನು ಖರ್ಚು ಮಾಡುವುದಾಗಿ ಹೇಳಿದ್ದಾರೋ ಆ ಪೈಕಿ 81 ಲಕ್ಷಕ್ಕೆ 11 ಲಕ್ಷ ಮಾತ್ರ ಬಂದಿದೆ. 16.66 ಲಕ್ಷಕ್ಕೆ 11.70 ಲಕ್ಷ ಬಂದಿದೆ. ಹೀಗಾಗಿ ಇದನ್ನು ಒಳಹೊಕ್ಕು ನೋಡಿದರೆ ಸರ್ಕಾರದವರೇನು ಈ ಬಾಬುಗಳಿಗೆ ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೋ ಆ ಹಣವೆಲ್ಲ ಕೇವಲ ಅವರ ಸಿಬ್ಬಂದಿಗಾಗಿ ವೆಚ್ಚವಾಗಿರುತ್ತದೆಯೇ ಹೊರತು ಅಲ್ಲಿ ಕಾರ್ಯತಃ ಕೆಲಸಗಳೇನೂ ಆಗಿರುವುದಿಲ್ಲ. ಯಾರಾದರೂ ಮಂತ್ರಿಗಳು ಅಲ್ಲಲ್ಲೆ ಸಂಚಾರ ಹೊರಟಾಗ ರಸ್ತೆಗಳಿಗೆ ಮಣ್ಣು ಹಾಕಿ, ಬಣ್ಣ ಬಳಿಯುತ್ತಾರಲ್ಲ ಎಂದರೆ ಇದು ಕೇವಲ ಜನರ ಕಣ್ಣಿಗೆ ಮಣ್ಣು ಹಾಕುವ ಬದುಕೇ ವಿನಾ ಬೇರೆಯೇನೂ ಇಲ್ಲವೆಂದು ಹೇಳಿದರೇನು ತಪ್ಪಾಗುತ್ತದೆ? ಸರ್ಕಾರದಲ್ಲಿ ಈ ಪ್ರಶ್ನೆಗೆ ಯಾರಾದರೂ ಉತ್ತರ ಕೊಡಬಲ್ಲರಾ ? ಈ ಲೋಕಲ್ ಡೆವಲಪ್‌ಮೆಂಟ್ ಬಾಬಿನಲ್ಲಿ ಈ ದಿವಸ ಕೆಲಸಗಳೇ ಇಲ್ಲವೆಂದು ಹೇಳುತ್ತಿದ್ದಾರೆ. 1953-54, 1954-55 ಮತ್ತು 1955-56ನೆಯ ಸಾಲುಗಳಲ್ಲಿ ಲೋಕಲ್ ಡೆವಲಪ್‌ಮೆಂಟ್ ಬಾಬಿನಲ್ಲಿ ಇಂತಿಂಥ ಕೆಲಸಗಳನ್ನು ಇಂತಿಂಥ ಕಂಟ್ರಾಕ್ಟರುಗಳಿಗೆ ಕೊಡಲಾಗಿದೆ ಎಂದು ಹೇಳಿದ್ದರು. ಆದರೆ ಅಲ್ಲಿ ಕೆಲಸಗಳು ಮಾತ್ರ ಏನೂ ನಡೆದಿಲ್ಲ. ಆದರೆ ಆ ದುಡ್ಡು ಎಲ್ಲಿ ಮಾಯವಾಗಿ ಹೋಯಿತೋ ದೇವರಿಗೇ ಗೊತ್ತು. ಈ ಕೆಲಸ ಕಾರ್ಯಗಳ ಬಗ್ಗೆ ಆ ದಿವಸ ಯಾವ ಬಣ್ಣವಿತ್ತು ? ಈ ದಿವಸ ಯಾವ ಬಣ್ಣವಿದೆ ? ಸರ್ಕಾರದ ಈ ಬೇಜವಾಬ್ದಾರಿ ಕೆಲಸಗಳನ್ನೆಲ್ಲ ನೋಡಿ ನನಗಂತು ತುಂಬ ಬೇಜಾರಾಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹಾಗೆ ಬೇಜಾರಾಗಿದ್ದರೆ ಮಾನ್ಯ ಸದಸ್ಯರು ನನ್ನ ಜೊತೆಯಲ್ಲಿ ಹಳ್ಳಿಗಳ ಕಡೆ ಬರಲಿ. ಆಗ ಅವರಿಗೇ ಗೊತ್ತಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ನಾನು ಖಂಡಿತ ಯಾವತ್ತೂ ಮಂತ್ರಿಗಳ ಜೊತೆಯಲ್ಲಿ ಹೋಗುವುದಿಲ್ಲ. ಎಂದಾದರೂ ಹಾಗೆ ಹೋಗಿರುವುದಿದ್ದರೆ ಯಾರಾದರೂ ಹೇಳಲಿ ಏತಕ್ಕೆ ನಾನು ಅವರ ಜೊತೆಯಲ್ಲಿ ಹೋಗುವುದಿಲ್ಲ ಎಂದರೆ ನಮ್ಮ ಕಂದು ಬಣ್ಣದ ಮುಖ ಇವರ ಜೊತೆಯಲ್ಲಿ ಹೋದರೆ ಕೆಂಪಾಗುತ್ತದೆಂದು ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಈ ವಿಚಾರದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ.

ಒಬ್ಬ ಮಾನ್ಯಸದಸ್ಯರು.—ಮುಖ ಕೆಂಪಾಗುತ್ತದೆ ಎಂದರೇನು ? ಹೇಗೆ ?

ಶ್ರೀ ಕೆ. ಕೆಂಚಪ್ಪ.—ಉಗುಳಿದರೆ ಮುಖ ಕೆಂಪಗಾಗುತ್ತದೆ.

ಒಬ್ಬ ಮಾನ್ಯಸದಸ್ಯರು.—ಅಡಕೆ ವೀಳ್ಯದೆಲೆ ಹಾಕಿಕೊಂಡೋ ? ಹಾಗೇನೋ ?

ಶ್ರೀ ಕೆ. ಕೆಂಚಪ್ಪ.—ಆ ಮಾತು ಹಾಗಿರಲಿ ; ಅದು ಅಷ್ಟಕ್ಕೆ ಸಾಕು. ಈ ಅವ್ಯವಸ್ಥೆಗಳಿಗೆಲ್ಲ ಸರ್ಕಾರದವರೇನು ಜವಾಬ್ ಕೊಡಬಲ್ಲರು ? ಈಗ ನಮ್ಮ ಸರ್ಕಾರದವರು ನೆರವೇರಿಸಿರತಕ್ಕ ಆ ಷಿಕಾರಿಪುರದ ಕಮ್ಯುನಿಟಿ ಡೆವಲಪ್‌ಮೆಂಟ್ ಬ್ಲಾಕಿನ ವಿವರಗಳನ್ನು ತಿಳಿಯಲು ನಾನು ಮೊನ್ನೆ ಆ ಷಿಕಾರಿಪುರ ಮತ್ತು ಸೊರಬ ತಾಲ್ಲೂಕುಗಳಿಗೆ ಹೋಗಿ ಎಲ್ಲ ಹಳ್ಳಿಗಳನ್ನು ಸುತ್ತಿಕೊಂಡು ಬಂದಿದ್ದೇನೆ. ಮೇಲಾಗಿ ಆ ನನ್ನ ಹುಟ್ಟಿದ ಸ್ಥಳವಾದ ಹರಿಹರ ತಾಲ್ಲೂಕಿನಲ್ಲೂ ಪ್ರತಿಯೊಂದು ಹಳ್ಳಿಗೂ ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ಕೆಲಸಗಳನ್ನೆಲ್ಲ ನಾನು ಸ್ವತಃ ನೋಡಿಕೊಂಡು ಬಂದಿರುವಾಗ ನಾನಾ ಮಂತ್ರಿಗಳ ಜೊತೆಯಲ್ಲಿ ಖಂಡಿತ ಹೋಗಬಾರದೆಂದು ನಿರ್ಧಾರ ಮಾಡಿದ್ದೇನೆ. ನಾವು ಇವರ ಜೊತೆಯಲ್ಲಿ ಆ ಹಳ್ಳಿಗಳಿಗೆ ಹೋದರೆ ಆ ಜನರು ನಮ್ಮನ್ನು ಅಲ್ಲಿ ರಸ್ತೆಯಲ್ಲಿ ತಿರುಗಾಡುವುದಕ್ಕೆ ಬಿಡುವುದಿಲ್ಲ. ಆ ದೃಷ್ಟಿಯಿಂದ ನಾನು ಯಾವ ಮಂತ್ರಿಯ ಭೇಟಿಗಾಗಲೀ, ಅವರ ಜೊತೆಯಲ್ಲಿ ಪ್ರಯಾಣ ಮಾಡಲಿಕ್ಕಾಗಲಿ ಹೋಗುವುದಿಲ್ಲ.

ಒಬ್ಬ ಮಾನ್ಯಸದಸ್ಯರು.—ತಮಗೆ ಮಂತ್ರಿಗಳಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರ ಜೊತೆಯಲ್ಲಿ ಹೋಗುವುದಕ್ಕೂ ಇಷ್ಟವಿಲ್ಲವೇ ?

ಶ್ರೀ ಕೆ. ಕೆಂಚಪ್ಪ.—ಯಾರ ಜೊತೆಯಲ್ಲಿ ಹೋದರೂ ಆ ಕಷ್ಟವಿದ್ದೇ ಇದೆ. ಜನರಿಗೆ, ದೇಶಕ್ಕೆ ಒಳ್ಳೆಯದಾಗಲಿ ಎಂದು ಕಷ್ಟಪಟ್ಟು ಕೆಲಸ ಮಾಡತಕ್ಕ ಜನರೇ ಬೇರೆ ಇದ್ದಾರೆ. ಈ ಪ್ರಶ್ನೆ ಈ ದಿವಸ ಇಷ್ಟು ಉಲ್ಬಣವಾದ ಸ್ಥಿತಿಗೆ ಬರಲು ಕಾರಣವಾದರೂ ಏನು ? ಸೆಂಟ್ರಲ್ ಆಫೀಸಿನವರು ಇಲ್ಲಿ ರಾಜ್ಯಸರ್ಕಾರದವರೆಷ್ಟು ಕೆಲಸ ಮಾಡಿರುತ್ತಾರೋ ಅಷ್ಟಕ್ಕೆ ಅವರು ಹಣ ಕೊಡುತ್ತಿದ್ದಾರೆ. ಇಲ್ಲಿ ನಮ್ಮ ಸರ್ಕಾರದವರು ಹೆಚ್ಚಿನ ಕೆಲಸಗಳನ್ನು ಮಾಡಿಲ್ಲ. ಖರ್ಚು ಮಾಡಿರುವ ಹಣ ಬಹಳ ಕಡಮೆ. ಈ ಕಾರಣದಿಂದಲೇ ನಮಗೆ ಕೇಂದ್ರದ ಹಣ ಬರುವುದೂ ಕಡಮೆಯಾಗಿದೆ. ಈ ಯೋಜನೆಗಳಲ್ಲಿ ಸರ್ಕಾರದವರು ಎಷ್ಟು ಎಕರೆ ಭೂಮಿಯನ್ನು ಹೊಸದಾಗಿ ಸಾಗುವಳಿಗೆ ತಂದಿದ್ದಾರೆಂಬುದನ್ನು ತಿಳಿಸಲಿ ?

Community Development Projects, National Extension Service and Local Department Works ನಿಂದ ಎಷ್ಟು ಜನರಿಗೆ ಉಪಯೋಗವಾಗಿದೆ ? ಅದು ನಮಗೆ ಬೇಕು. ಮುಗ್ಧರಾಗಿ ಈ ಸ್ಕೀಮುಗಳನ್ನು ಇಟ್ಟುಕೊಂಡಿದ್ದೇವೆ, ಅಧಿಕಾರಿಗಳು ಹಗಲು ರಾತ್ರಿ ಕೆಲಸ ಮಾಡಿದರು

(ಶ್ರೀ ಕೆ. ಕೆಂಚಪ್ಪ)

ಎಂದು ಹೇಳಿದರೆ ಏನು ಪ್ರಯೋಜನ? ಬರಿಯ ದುಡ್ಡು ಖರ್ಚಾಗುತ್ತಿದೆ. ಬರಿಯ ಸರ್ವಿಸಸ್ ಮೇಲೆ ಹಣ ಖರ್ಚಾಗುತ್ತಿದೆ. ಅದನ್ನು ಏನೇನೋಕಾರಣಕ್ಕಾಗಿ ಖರ್ಚು ಮಾಡಿದ್ದೀರಿ. ಈ ಯೋಜನೆಗಳಿಗೆ ಮೀಸಲಾಗಿಟ್ಟಿರುವ ಹಣವನ್ನು ಸಂಬಳಕ್ಕೋಸ್ಕರ ಖರ್ಚು ಮಾಡಿ, ಪ್ರಜೆಗಳಿಗಾಗಿ ಖರ್ಚುಮಾಡದೆ ದೇಶಕ್ಕೆ ತೊಂದರೆ ಮಾಡಿದ್ದೀರಿ. ಇದರಿಂದ ಪ್ರಜೆಗಳ ಅನುರಾಗಕ್ಕೆ ಧಕ್ಕೆ ಬಂದಿದೆ. ಹೀಗೆ ಮಾಡಿದರೆ ಎಲೆಕ್ಷನ್ನಿನಲ್ಲಿ ಅನುಕೂಲವಾಗುತ್ತದೆಂದು ತಿಳಿದು ಕೊಂಡಿದ್ದೀರೋ? ಎಲೆಕ್ಷನ್ ಗೆಲ್ಲಲು ನಾನಾ ನಮೂನೆಗಳಿರುತ್ತವೆ. ಈ ನಮೂನೆ ಪರೀಕ್ಷಾರ್ಥವಾಗಿ ಇಟ್ಟುಕೊಳ್ಳುವ ಬಾಬತ್ತು ಅಲ್ಲ. ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಇದರಲ್ಲಿ ಪ್ರತಿಯೊಂದರಲ್ಲಿಯೂ ಕಡಮೆ ಖರ್ಚು ಮಾಡದೇನೇ ಹೆಚ್ಚು ಖರ್ಚು ಮಾಡಿದ್ದಕ್ಕೆ ಅಲ್ಪ ಸ್ವಲ್ಪವಾದರೂ ಎಕ್ಸ್‌ಪ್ಲನೇಷನ್ ಕೊಟ್ಟಿದ್ದೀರ? ಈ ಬಾಬಿಗೆ ಏನು ಎಕ್ಸ್‌ಪ್ಲನೇಶನ್ ಕೊಟ್ಟಿದ್ದೀರೆಂದರೆ:

"During 1960-61 there will be 3 C. D. Blocks, 104 Stage I Blocks, and 47 Stage II Blocks. Besides, 10 of the pre-extension Blocks will enter into Stage I Pattern from October 1960, when their expenditure will increase from Rs. 18,800 per Block per year to Rs. 12 lakhs per Block for five years (*i. e.*, on an average of. Rs. 2.40 lakhs per Block per year). It is also proposed to start 24 pre-extension Blocks during 1960-61."

ಹಿಂದಿನದಕ್ಕೆ ನಿಮ್ಮ ಎಕ್ಸ್‌ಪ್ಲನೇಷನ್ ಏನು?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಉತ್ತರ ಹೇಳೋಣ.

ಶ್ರೀ ಕೆ. ಕೆಂಚಪ್ಪ.—ಉತ್ತರ ಹೇಳಬೇಕು ಮುಂದಕ್ಕೆ ಆಗುವುದನ್ನು ಅಂದಾಜು ಮಾಡಿದ್ದೀರೇ ಹೊರತು ಹಿಂದೆ ಏಕೆ ಖೋತಾ ಮಾಡಿದ್ದೀರಿ ಎನ್ನುವುದಕ್ಕೆ ಎಕ್ಸ್‌ಪ್ಲನೇಷನ್ ಕೊಡಿ. ಈ ಡಿಮ್ಯಾಂಡಿಗೆ ಇಷ್ಟು ಹೇಳಿ, ಇನ್ನು ಲ್ಯಾಂಡ್ ರೆವಿನ್ಯೂ ಬಾಬಿಗೆ ಬರುತ್ತೇನೆ.

ಲ್ಯಾಂಡ್ ರೆವಿನ್ಯೂವಿನಲ್ಲಿ ನನ್ನ ಮುಖ್ಯ ಆಕ್ಷೇಪಣೆ ಏನೆಂದರೆ, ನಿಮಗೆ ಒಂದು ನಿಗದಿಯಾದ ಗುರಿ ಇಲ್ಲ. ಲ್ಯಾಂಡ್ ರೆವಿನ್ಯೂ ಆಕ್ಟಿನಲ್ಲಿ ಉಲ್ಲೇಖಿತವಾಗಿರುವ ರೀತಿಯಲ್ಲಿ ಅಥವಾ ತತ್ವದಲ್ಲಿ ಖಾಯಂ ಆಗಿ ಜಮೀನುದಾರನಿಗೆ ಒಂದು ಉಪಯೋಗವಿದೆ. ಕಂದಾಯಕ್ಕೋ ನೀರಾವರಿ waters ಗೂ ಒಂದು ಸಂಬಂಧವಿರುತ್ತದೆ. ಈ ದೃಷ್ಟಿ ಸರ್ಕಾರದಲ್ಲಿ ಕಂಡು ಬರುವುದಿಲ್ಲ. ವಾಣಿವಿಲಾಸ ಸಾಗರದ ನೀರಾವರಿ ವಾಟರ್ ವಿಚಾರದಲ್ಲಿ ಸರ್ಕಾರದವರು ಒಂದು ಆರ್ಡರ್ ಮಾಡಿದ್ದರು. ಆ ಆರ್ಡರಿಗೂ ಈಗ ಮಾಡಿರುವುದಕ್ಕೂ ಬಹಳ ಅಂತರವಿದೆ. ತೆಂಗಿನ ಗಿಡ ಜಮೀನಿಗೆ ಎಕರೆಗೆ 5¼ ರೂಪಾಯಿ ಕಂದಾಯ ಇವತ್ತು ಇದ್ದುದು ನಾಳೆ ಎಕರೆಗೆ 25 ರೂಪಾಯಿ ಎಂದರೆ ಯಾವ ನ್ಯಾಯ? ಸ್ವಾಮಿ, ಈ ಯೋಜನೆಯನ್ನು ತಯಾರು ಮಾಡಿದವರು ಯಾರು? ಅದಕ್ಕೆ ಒಂದ ಬುನಾದಿ ಏನು? ಆದಕ್ಕೆ ಕಾರಣ ವೇನು? ಏಕೆಂದರೆ 1928 ನೆಯ ಇಸವಿಯಲ್ಲಿ ಇಲ್ಲಿ ನೀರು ಸಿಕ್ಕುವುದಿಲ್ಲ ಎಂದು ಸರ್ಕಾರಕ್ಕೆ ಕಂಡು ಬಂದು, ನೀರನ್ನು ಹೆಚ್ಚಿಗೆ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲ ವೆಂದು ತಿಳಿದುಕೊಂಡು 5¼ ರೂಪಾಯಿ ಇದ್ದುದನ್ನು 2 ರೂಪಾಯಿ ಮಾಡಿದರು. ಅದರ ಮೇಲೆ ಗೌರ್ನಮೆಂಟ್ ಆರ್ಡರ್ ಆದ್ದು 1928 ರಲ್ಲಿ ಅಥವಾ 1934ರಲ್ಲಿ ಇರಬಹುದು.

2-30 P.M.

ಶ್ರೀ ಕಡಿದಾಳ್ ಮಂಜಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ವಾಣಿ ವಿಲಾಸ ಸಾಗರಕ್ಕೆ ರಿಯಾಯತಿ ತೋರಿಸಿದುದು ಜಾಸ್ತಿ ಆಯಿತು.

ಶ್ರೀ ಕೆ. ಕೆಂಚಪ್ಪ.—ಆ ಬೇಜವಾಬ್ದಾರಿ ಸರ್ಕಾರ ಬಹಳ ರಿಯಾಯತಿ ತೋರಿಸಿತು. ಅಷ್ಟೊಂದು ಜವಾಬ್ದಾರಿ ಈ ಜವಾಬ್ದಾರಿ ಸರ್ಕಾರಕ್ಕಿಲ್ಲ. ನೀರಾವರಿ ವಾಟರಿಗೆ ಕಂದಾಯವನ್ನಾಗಲಿ, ಜಮೀನಿನ ಕಂದಾಯವನ್ನಾಗಲಿ ಕಾನೂನಿನ ಪ್ರಕಾರ ನಿಗದಿ ಮಾಡತಕ್ಕಂಥ ಇಲಾಖೆ ಸರ್ವೆ ಡಿಪಾರ್ಟ್‌ಮೆಂಟ್. ಅದಕ್ಕೆ ಸೆಟಲ್‌ಮೆಂಟ್ ಅನ್ನುತ್ತಾರೆ. Survey Classification Settlement ಅವರಿಗೆ ಸಂಬಂಧಪಟ್ಟುದು. ನಿಮಗೆ ಆ ಸರ್ವೆ ಡಿಪಾರ್ಟ್‌ಮೆಂಟ್ ಬೇಕಾಗಿರುವುದು. ಆದರೆ ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ನಿಮಗೆ ಈ ವಿಚಾರದಲ್ಲಿ ಬೇಕಾಗಿರುವುದು ಯಾವ ಯಾವ ಡಿಪಾರ್ಟ್‌ಮೆಂಟುಗಳು ಎಂದರೆ ರೆವಿನ್ಯೂ ಮತ್ತು ಇಂಜನಿಯರಿಂಗ್. ನಿಮ್ಮ ಮನಸ್ಸಿಗೆ ಬಂದ ಹಾಗೆ ಡಿವಿಜನಲ್ ಕಮಿಷನರ್ ಆಫೀಸಿನಿಂದ ಒಂದು ರಿಪೋರ್ಟು ತರಿಸಿಕೊಂಡು ಬಿಡುವುದು; ಇನ್ನೊಂದು ರಿಪೋರ್ಟನ್ನು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನಿಂದ ತರಿಸಿಕೊಂಡು ಬಿಡುವುದು, ತಮ್ಮ ಮನಸ್ಸಿಗೆ ಬಂದ ಹಾಗೆ ಇರಿಗೇಷನ್ ಸೆಸ್ ಹಾಕುವುದು.

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಮನಸ್ಸಿಗೆ ಬಂದ ಹಾಗೆ ನೀವು ಹೇಳುತ್ತಾ ಇದ್ದೀರಿ.

ಶ್ರೀ ಕೆ.ಕೆಂಚಪ್ಪ.—ಉತ್ತರ ಕೊಡಿರಿ ಎಂದು ನಮಸ್ಕಾರ ಮಾಡುತ್ತೇನೆ. ನೀವು ಉತ್ತರ ಕೊಡದೆ ಹೋದರೆ ಏನು ಮಾಡುತ್ತೀರ?

ಶ್ರೀ ಕಡಿದಾಳ್ ಮಂಜಪ್ಪ.—ನೋಡೋಣ.

ಶ್ರೀ ಕೆ. ಕೆಂಚಪ್ಪ.—ಉತ್ತರ ಕೊಡುವಾಗ ಆಬದ್ಧಕ್ಕೆ ಅಪ್ಪಣೆ ಇದೆಯೋ ಎಂದ ಹಾಗೆ, ಬಾಯಿಗೆ ಬಂದ ಹಾಗೆ ಹೇಳ ಬೇಡಿ. ಏಕೆಂದರೆ 1906 ನೆಯ ಇಸವಿಯಲ್ಲಿಯೇ ವಾಟರ್ ರೇಟ್ ನಿಗದಿಯಾಗಿದೆ. ಅಲ್ಲಿಂದ ಈ ವರೆಗೆ ಬ್ಲಾಕ್ ಏರಿಯಾಗಳನ್ನು ಸೇರಿಸಿ ಕಾಯಂ ಮಾಡಿಲ್ಲ. ಮಾತು ಕಂಡಿರುವವರು ಕಾನೂನಿಗೆ ವಿರುದ್ಧವಾಗಿದ್ದರೂ ಮಾಡಬಹುದು ಜಮೀನುದಾರನಿಗೆ ಒಂದು ನಿಗದಿಯಾದ ಭರವಸೆ ಇಲ್ಲದೆ ಹೋದರೆ, ಯಾವ ನಂಬಿಕೆಯಿಂದ ಅವನು ಜಮೀನನ್ನು ಮಾಡಬೇಕು? ತೆಂಗಿನ ಕಾಯಿಗೆ 5¼ ರೂಪಾಯಿ ಕಂದಾಯ ಇದ್ದದ್ದು, ಇವೊತ್ತಿನ ದಿವಸ 25 ರೂಪಾಯಿ ಮಾಡಿದರೆ, ಇದು ಅನುಭವದಿಂದ ಮಾಡಿದೆಯೆಂದು ಹೇಳ ಬಹುದೇ? ಮೈಸೂರಿನಲ್ಲಿ 25 ರೂಪಾಯಿ ಕೊಡುವ ಅಡಿಕೆ ತೋಟವಿದೆಯೇನು? ಅಡಿಕೆ ಗಿಡ ಹಾಕಿದರೆ, ವರ್ಷೇ ವರ್ಷೇ ಶೇಕಡ 12 ರಷ್ಟು ಕಡಿಮೆಯಾಗುತ್ತದೆ. ಅದನ್ನು ಬೆಳಸಬೇಕಾದರೆ ಎಷ್ಟೋ ಕಷ್ಟವಿದೆ. ನೀರಿನ ಅಭಾವ ವಿರುತ್ತದೆ, ಮತ್ತು ಪರ್ಕೊಲೇಶನ್

ಮೂಲಕ ನೀರು ಹೋಗಿ ಕಷ್ಟ ಒದಗುತ್ತದೆ. $2\frac{1}{2}$ ರೂಪಾಯಿ ಬೇಜವಾಬ್ದಾರಿ ಸರ್ಕಾರದವರು ಮಾಡಿದರು; ಜವಾಬ್ದಾರಿ ಸರ್ಕಾರ ಅದನ್ನು 25 ರೂಪಾಯಿ ಮಾಡಿ, ರೈತರಿಗೆ ಕುತ್ತಿಗೆಗೆ ನೇಣು ಹಾಕಿಕೊಳ್ಳಿ ಎಂದು ಹೇಳಿತು. Technical Department, Scientific Department, Agricultural Department ಎಂದು ನೂರಾರು ಡಿಪಾರ್ಟ್‌ಮೆಂಟುಗಳು ಸಂಬಳಕ್ಕಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಐದು ರೂಪಾಯಿ ಇದ್ದುದ್ದನ್ನು 25 ರೂಪಾಯಿ ಮಾಡದೆ ಇದ್ದರೆ ಸರ್ಕಾರಿ ನೌಕರರಿಗೆ ಹೇಗೆ ಸಂಬಳ ಕೊಟ್ಟರು? ಶ್ರೀ ವರ್ಮಾ ಕೆಂಚಪ್ಪನವರಿಗೆ ಧರ್ಮ ಕರ್ಮ ಏನೂಬೇಡವೇ?

ಶ್ರೀ ಕೆ. ಕೆಂಚಪ್ಪ.—ಸರ್ವೆ ಡಿಪಾರ್ಟ್‌ಮೆಂಟಿನವರು ಸಲಹೆ ಮಾಡಿದರೆ? ಸರ್ವೆ ಡಿಪಾರ್ಟ್‌ಮೆಂಟಿನವರು ಈ ವಿಚಾರದಲ್ಲಿ ಕ್ಲಾಸಿಫಿಕೇಶನ್ ಎನ್ನತಕ್ಕಂಥ ಒಂದು ಬಾಬಿನಲ್ಲಿ ಯಾವ ಯಾವ ನಿಯಮಗಳನ್ನು ಅನುಸರಿಸಿ ಇಷ್ಟಿಷ್ಟು ನಿಗದಿ ಮಾಡ ಬೇಕೆಂಬುದನ್ನು ನೋಡಿ, ಅಷ್ಟನ್ನು ನಿಗದಿ ಮಾಡಿದರೇ? ಮೊನ್ನೆ ತಾನೆ $5\frac{1}{2}$ ರೂಪಾಯಿ ಇದ್ದುದನ್ನು 25 ರೂಪಾಯಿ ಮಾಡಿದುದರಿಂದ ಎಷ್ಟೋ ರೈತರು ಗೋಳಿಟ್ಟುಕೊಂಡು ಅಡಿಕೆ ತೋಟವನ್ನು ಬಿಟ್ಟು ಬಿಟ್ಟು ಕೂಲಿನಾಲಿ ಮಾಡುವುದಕ್ಕೆ ಹೊರಟು ಬಿಟ್ಟಿದ್ದಾರೆ. ಇದನ್ನು ನೋಡಿದರೆ ಎಷ್ಟು ಅನ್ಯಾಯವಾಗಿದೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಮೊದಲನೆಯದು ಪರ್ಮನೆನ್ಸಿ ಇಲ್ಲ ಎರಡನೆಯದು ತತ್ವಇಲ್ಲ. ಸರ್ವೆ ಡಿಪಾರ್ಟ್‌ಮೆಂಟಿನವರು ಮಾಡಬೇಕು ಎಂದು ಇಲ್ಲ. ಇದರಿಂದ ದೇಶವನ್ನು ಕೂಡ ಅನ್ಯಾಯದದಾರಿಯಲ್ಲಿ ತೆಗೆದುಕೊಂಡು ಹೋಗಿದ್ದಾರೆ ಇದರಿಂದ ದೇಶಕ್ಕೆ ಹಾನಿ ಯಾಗುತ್ತದೆ.

ಬಡ್ಜೆಟ್‌ನಲ್ಲಿ ನೋಡಿದರೆ Land Revenue ನಲ್ಲಿ Sale of Government Estates ಎನ್ನುವುದರಲ್ಲಿ ಸ್ವಲ್ಪ ಹೆಚ್ಚು ಕಡಮೆ ಒಂದೇ ರೀತಿಯಾಗಿದೆ. ಹಿಂದೆ ಎಷ್ಟು ಉತ್ಪತ್ತಿ ಮತ್ತು ಖರ್ಚು ಇತ್ತೋ ಈಗಲೂ ಅಷ್ಟೇ ಇದೆ. 1958-59 ರಲ್ಲಿ 9.15 ಲಕ್ಷ ಇತ್ತು. ಜಮೀನಿಲ್ಲದವರಿಗೆ ಜಮೀನು ಕೊಡಬೇಕೆಂದು ಇದಕ್ಕಾಗಿ ವಿಶೇಷ ಅಮುಲ್ದಾರರುಗಳನ್ನು ನೇಮಿಸಿ, ಸಮಾಜವಾದಿ ತತ್ವವನ್ನು ಜಾರಿಗೆ ತರಬೇಕು, ಅವರು ಹಳ್ಳಿಗಳಿಗೆ ಹೋಗಿ ಜಮೀನು ಹಂಚಬೇಕೆಂದು ಮಾಡಿದರು. ಆದರೆ ನಾವು ಒಂದು ಕ್ವಾನೂನು ಮಾಡುತ್ತೇವೆಂದು ಹೇಳಿ ಯಾರಿಗೂ ಜಮೀನು ಕೊಡಲಿಲ್ಲ. ಇಷ್ಟು ವರ್ಷ ಪ್ರಯತ್ನ ಮಾಡಿದ್ದರಲ್ಲಿ ಯಾರಿಗೆ ಎಷ್ಟು ಜನರಿಗೆ ಜಮೀನು ಕೊಟ್ಟಿದ್ದಾರೆ? ನಾವು ಯಾರಿಗೂ ಕೊಟ್ಟಿಲ್ಲವೆಂದು ಏಕೆ ಹೇಳಬಾರದು? ಅಂಕಿ ಅಂಶಗಳು ಇಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿ ಏನಿದೆ?

ಶ್ರೀ ಕೆ. ಕೆಂಚಪ್ಪ.—Ordinary Land Revenue ನೋಡಿದರೆ 1959–60 ರಲ್ಲಿ 377 ಲಕ್ಷ ಅಂದಾಜು ಮಾಡಿದ್ದಾರೆ, ರಿವೈಸ್ಡ್ ಅಂದಾಜು 361·86 ಲಕ್ಷ ರೂಪಾಯಿ ಆಗಿದೆ. Sales of Government Estate ನಲ್ಲಿ 1959-60 ರಲ್ಲಿ 8·50 ಲಕ್ಷ ಅಂದಾಜು ಮಾಡಿದ್ದಾರೆ, ಅದು ಈಗಲೂ 8 ಲಕ್ಷ ಇದೆ. ಹಿಂದಿಗೂ ಇಂದಿಗೂ ವ್ಯತ್ಯಾಸ ಕಂಡು ಬರುವುದಿಲ್ಲ, ಇದರ ಅರ್ಥವೇನು? ಜಮೀನನ್ನು ಸರಿಯಾಗಿ ಹಂಚಿಲ್ಲ. ಹಂಚದಿದ್ದರೆ ಜಮೀನನು ಮಾರಿದ್ದರಿಂದ ಹೆಚ್ಚು ಉತ್ಪತ್ತಿ ಬರಬೇಕಾಗಿತ್ತು.

ಅಧ್ಯಕ್ಷರು.—ಕಾಲವನ್ನು ನಿಗದಿ ಮಾಡಿದೆ. ನೀವು 45 ನಿಮಿಷವನ್ನು ತೆಗೆದುಕೊಳ್ಳ ಬಹುದು, ಆದರೆ ಪಿ. ಎಸ್. ಪಿ. ಗೆ ಕಾಲವಿರುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಜಾಗ್ರತೆ ಮುಗಿಸುತ್ತೇನೆ. ಒಂದು ವಿಚಾರವನ್ನು ಆಲೋಚನೆ ಮಾಡ ಬೇಕಾಗಿದೆ. ಅದೇನೆಂದರೆ, ಲ್ಯಾಂಡ್ ರೆವಿನ್ಯೂ ನೀತಿಯಲ್ಲಿ ಗೋಮಾಳಕ್ಕೆ ಒಂದು ಮುಖ್ಯಸ್ಥಾನವನ್ನು ಮೈಸೂರು ದೇಶಕೊಟ್ಟಿದೆ. ಈಗ ಈ ನೀತಿಗೆ ಧಕ್ಕೆ ಬಂದಿದೆ. ವ್ಯವಸಾಯಗಾರರ ಮಕ್ಕಳು ಮಂತ್ರಿ ಮಂಡಲದಲ್ಲಿದ್ದರೂ ಕೂಡ ಗೋಮಾಳ ಬೇಡವೆಂದು ಹೇಳುವವರಿದ್ದಾರೆ. ಇದು ದೊಡ್ಡ ತಪ್ಪು. ಕಾನೂನು ಪ್ರಕಾರ ಗೋಮಾಳವನ್ನಿಟ್ಟುಕೊಳ್ಳಬೇಕು. ದನ ಸಂಪತ್ತಿಲ್ಲದೆ ಧಾನ್ಯ ಸಂಪತ್ತು ಹೆಚ್ಚಲಾರದು. ಧಾನ್ಯ ಹೆಚ್ಚಬೇಕಾದರೆ ದನ ಸಂಪತ್ತು ಹೆಚ್ಚ ಬೇಕು. ಆದುದರಿಂದ ಗೋಮಾಳವನ್ನು ಸಂರಕ್ಷಣೆ ಮಾಡ ಬೇಕೆಂದು ಹೇಳುತ್ತೇನೆ.

Land Revenue assignment to Local Board ಎಂದು ವಿವರಣೆಯನ್ನು ಕೊಟ್ಟಿದ್ದಾರೆ. ಕಾನೂನಿನ ಪ್ರಕಾರ ತಾಲ್ಲೂಕು ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳಿಗೆ ಶೇಕಡ 60 ರಷ್ಟನ್ನು ಜಮೀನು ಕಂದಾಯದ ಉತ್ಪತ್ತಿಯಲ್ಲಿ ಕೊಡಬೇಕೆಂದಿದೆ. ಈ ಬಗ್ಗೆ A total sum of Rs. 240 lakhs has been provided for the purpose on an approximate basis, inclusive of arrears" ಎಂದಿದೆ. ನನಗೆ ತಿಳಿದ ಹಾಗೆ 1952 ನೆಯ ಇಸವಿಯಿಂದಿದೆ. ಗ್ರಾಮ ಪಂಚಾಯಿತಿ, ಜಿಲ್ಲಾ ಬೋರ್ಡ್ ಆಕ್ಟ್ ಪಾಸಾಗಿದೆ. ಹೀಗೆ lumpsum ಇದಕ್ಕಾಗಿಟ್ಟಿರುವುದು ಕಂಬಳಿಯಲ್ಲಿಟ್ಟು ಹೊಡೆದ ಹಾಗಾಗಿದೆ. ಎಂದರೆ, ಕೊಟು ಹಾಗಿರಬೇಕು, ಕೊಟ್ಟಿರಬಾರದು ಎನ್ನುವ ಹಾಗಿದೆ. ಇದು ಕಾನೂನಿಗೆ ವಿರುದ್ಧವಾಗಿದೆ, ಈ ಕಾನೂನನ್ನು ಉಲ್ಲಂಘನೆ ಮಾಡುವ ಅಧಿಕಾರವನ್ನು ಈ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಯಾರು ಕೊಟ್ಟರೋಗೊತ್ತಿಲ್ಲ. ಕಾನೂನಿನಲ್ಲಿರುವುದು, ಎಷ್ಟು ಕೊಡಬೇಕೋ ಅಷ್ಟನ್ನು ಒಂದು ಕಾಸೂ ಕಡಮೆ ಮಾಡದೆ ಕೊಟ್ಟು ಬಿಡಬೇಕು. ಹೀಗಿರುವಾಗ 240 ಲಕ್ಷ ರೂಪಾಯಿ ಕೊಟ್ಟಿದ್ದೇವೆನ್ನುವುದು ಯಾವ ಆಧಾರದ ಮೇಲೆ? ಗ್ರಾಮ ರಾಜ್ಯವಾಗ ಬೇಕೆಂದು ಹೇಳಿರುವ ಮಹಾತ್ಮಾಗಾಂಧಿಯವರ ಶಿಷ್ಯರು ಈ ಹೊತ್ತು ಅವರ ಹೆಸರನ್ನು ಹೇಳಿ ದುರುಪಯೋಗ ಮಾಡಿಕೊಳ್ಳಬಾರದು. ನಾನು ಹೆಚ್ಚು ಹೇಳುವುದಿಲ್ಲ. ಕಾಲ ಹೆಚ್ಚು ತೆಗೆದುಕೊಂಡು ಬೇರೆಯವರ ವೇಳೆಯನ್ನು ಉಪಯೋಗ ಮಾಡಿ ಕೊಳ್ಳಲು ನನಗೆ ಇಷ್ಟವಿಲ್ಲ. ಸರ್ಕಾರ ಒಂದು ನಿಗದಿಯಾದ ನೀತಿಯನ್ನು ಅನೂಸರಿಸಬೇಕು, ಹೀಗೆ ಮಾಡಬಾರದು. ಇದರಿಂದ ಅನ್ಯಾಯವಾಗುತ್ತದೆ. ಅಗತ್ಯವಾಗಿ ಖರ್ಚು ಮಾಡಬೇಕಾದುದನ್ನು ಉಳಿಸಿಕೊಂಡು, ಬೇರೆ ಸಿಬ್ಬಂದಿ ಖರ್ಚನ್ನಿಟ್ಟುಕೊಂಡು ಮುಂದುವರಿದರೆ ಪ್ರಜಾ ಸಂರಕ್ಷಣಾ ಕಾರ್ಯ ಹೇಗೆ ನಡೆಯುತ್ತದೆ? ಪ್ರಜೆಗಳಿಗೆ ಯಾವ ರೀತಿ ಹಿತವಾಗುತ್ತದೆ? ಸಮಾಜವಾದಿ ತತ್ವಕ್ಕೆ ಕಟ್ಟು ಬಿದ್ದ ಜನರು ನಾವೆಂದು ಹೇಳಿಕೊಳ್ಳುತ್ತಾರೆ, ಅದೇನು ನಕಲಿಯೋ ಅಸಲಿಯೋ ಗೊತ್ತಿಲ್ಲ. ಅಸಲಿ ಆಗಿದ್ದರೆ ಜಾಗ್ರತೆ ಅದನ್ನು ಜಾರಿಗೆ ತರುತ್ತಿದ್ದರು. ಬಡವರಿಗೆ ಜಮೀನು ಕೊಡುತ್ತಿದ್ದರು. ಆದರೆ ಹಾಗೆ ಮಾಡಿಲ್ಲ. ಏನು ಭೂತ ಹುಟ್ಟಿ ಕೊಂಡಿದೆಯೋ ಗೊತ್ತಿಲ್ಲ. ಲ್ಯಾಂಡ್

(ಶ್ರೀ ಕೆ. ಕೆಂಚಪ್ಪ)

ರೇವಿನ್ಯೂ ಕೋಡ್ ಬಿಲ್ ಕೂಡ ಹೋದ ಮಂತ್ರಿಮಂಡಲದಲ್ಲೇ ಪಾಸಾಗಿದ್ದರೂ ಅದು ಇನ್ನೂ ಕೋಡ್ ಆಗಿಲ್ಲ. ಇದರಲ್ಲೇನು ಕಷ್ಟವಿದೆಯೋ ಗೊತ್ತಿಲ್ಲ. ಮುಂದಾದರೂ ನಿರ್ದಿಷ್ಟ ಮಾರ್ಗವನ್ನನುಸರಿಸುವುದುಬಿಟ್ಟು ಯಾವಯಾವದೋ ಮಾರ್ಗವನ್ನು ಹಿಡಿಯಬಾರದು. ರೆವಿನ್ಯೂ ಇಲಾಖೆಯು ಪ್ರವೇಶವಿರಬಾರದು, ಸರ್ವೆ ಇಲಾಖೆಯ ಅಧಿಕಾರದಲ್ಲಿ ಸರ್ವೆ ಇಲಾಖೆಯವರು ಸರ್ವೆ ಮಾಡಿ classify ಮಾಡಿ, ನಿಯಮಗಳ ಪ್ರಕಾರ ಮಾಡಬೇಕೆಂದಿರುವಾಗ ಆ ನಿಯಮಗಳನ್ನು ಸರ್ಕಾರ ಮೂಲೆಗಿಟ್ಟಿದ್ದಾರೆ. ಬೊಂಬಾಯಿರಾಜ್ಯದಲ್ಲಿ ಹಿಂದೇ ಮಾಡಿದ ಈ ಕಾನೂನು ಶಾಶ್ವತವಾಗಿರಲಿ ಎಂದು ಅದನ್ನನುಸರಿಸುತ್ತಿರುವಾಗ, ಇಲ್ಲಿ ನೀತಿಯನ್ನು ಮೂಲೆಗಿಟ್ಟು, ಗಾಂಧೀಜಿಯ, ಶಿಷ್ಯರು ಹೀಗೆ ಮಾಡುತ್ತಿರುವುದು ಸರಿಯಲ್ಲ.

*Sri H. V. KOUJALGI (Sampagaon-I).—Mr. Speaker, Sir, under the head 'Land Revenue' I desire to make some observations, especially in regard to the problems of the Bombay Karnatak Area. Due to the abolition of pargana and Kulkarni watan lands, lands are required to be regranted to the land holders or to the persons in actual possession. In the last three years the Government have not been able to regrant these lands. The difficulty is, the persons concerned are required to go to the Thasildar's office and produce their evidence and satisfy that he is entitled to regrant. The Thasildar due to his other heavy work has not been able to pay sufficient attention to these problems. What I suggest is, that instead of the villagers concerned being asked to go to the Thasildar's office, it is better that the Thasildar should go round the concerned villages and enquire into the matter and take evidence so that the lands are granted to the persons concerned. This will save a lot of time of the villagers and also eliminate the corruption that is going on in regranting these lands.

Secondly, Sir, these villages are very few. They are not many in number and it is also very easy for the Thasildar to go and finish the work in a short time.

Thirdly, Sir, due to the abolition of this Act, the Government are required to pay some compensation to the ex-kula-karnis or shanubhogues who were working in these villages. Government have promised to give them some money as compensation, if it is a small sum, in cash or if it is a big sum, in terms of bonds. It is the duty of the Government to see that this payment is made as early as possible. Though nearly three years have passed, Government have not been able to pay this amount. I am told that the excuse is that there are not prescribed forms or prescribed cheques. Sir, in the case of paying compensation to ex-Kulkarnies in the inam villages, it was the duty of the Government to pay compensation to these shanubhogues. This amount ought to have been paid three years back. It has not yet been paid and the excuse put forth is that there are no prescribed forms or prescribed cheques. I submit Sir, this excuse is rather not reasonable and I request the Government to take immediate steps to see that the amount is paid. Otherwise, the public are likely to lose confidence in the Government and the Government are likely to be unnecessarily criticised.

Another point is that formerly village service was rendered by sanadies and they were given some lands by the head of the village. On account of the abolition of inams, all these lands have been fully assessed. But still, the Government are taking the service from these sanadies. They are not paid any remuneration. They have been asking for the fixation of some reasonable remuneration and for payment. Somehow or other, a reasonable remuneration has not yet been fixed and they are not paid anything. I am told, a Bill has been introduced to see that a uniform legislation will be made to see that all these village servants will be abolished. It will take a long time. In the meanwhile, it would be better if the Government gives them some remuneration pending the fixation once for all.

The fourth point, I want to touch upon is about Thalaties. After the abolition of professional kulkarnies or shanubhogues in that area, to do this village accounting business, thalaties have been appointed and they are doing the village work. For the last three years, our experience is that cases of misappropriation are increasing with

these talaties. I find a number of criminal cases filed against them for misappropriating Government moneys. Naturally, it takes much time and so much time is wasted in the court either due to delay or due to tampering with the evidence, they get over and even Government become helpless in taking departmental action against them. Considering the mischief they are doing what I suggest is that Government should take departmental action against them and see that they are dismissed or proper action is taken against them instead of wasting time in taking criminal action against them. The mischief they are playing in the villages in not supplying copies is rather serious. Corruption is also growing among people of this class very much. When asked, they openly say that the remuneration paid to them is very small and these superior officers visit villages often and they cannot meet their expenses regarding their visits. They say, naturally they are required to get some money to provide for these expenses. It is also seen that superior officers are also visiting the villages often and whether they are turning out good work or not. But somehow or other, indirectly they have become a sort of burden to these talaties and these people throw blame on them. They say: 'We are required to go to Thasildar's office often and we are not paid either contingencies, paper or anything'. These are the facts. Therefore, they say, they take money like that. I think the time has come when Government should enquire and see how far their grievances are redressed and how far the village work can be expedited.

The fifth point I want to suggest is, about acquisition proceedings. There is a lot of delay in the acquisition proceedings. I know there are inherent difficulties in this and more than one Department has to deal with these proceedings. Apart from that, what I find is there is much delay in the publication of the notice required under the Acquisition Act. As soon as any proposal comes before the concerned Department, these proposals are not at all published in the official gazette for months together. I know there are instances where proposals are pending for want of publication in the official gazette for more than a year. On enquiry I have found that some proposals are not at all found in the office. Either they are missing or it is not known what has become of these proceedings. On this delay in publication of these proceedings, many of the improvement works such as-site for school-buildings, site for villages, site for approach roads, site for important works are held up. I therefore request that the Government will see that the publication of the necessary notices in the official gazette is made as early as possible.

Lastly, I want to speak a few words about the famine relief works. Unfortunately, this year also, some of the taluks in my district, famine striken or what Government says, scarcity prevails therein. From my previous experience, I find that when the works are sanctioned, they are not regularly continued and there is much delay in the payment of wages. On enquiry I find that Government does not sanction the necessary amount from time to time. In order to see that these works are continued and payments are made regularly, I submit that sufficient discretion should be given to the Deputy Commissioners. It would be better, Sir, that a small committee of non-officials in that affected area with the Deputy Commissioner is appointed.

Sri KADIDAL MANJAPPA.—That we have done. We have issued instructions to the Deputy Commissioners that they should form committees consisting of legislators and members of the Parliament.

Sri H. V. KOUJALGI.—Let that committee chalk out a programme forthe whole area and for the whole period and state what works should be taken and which works should be given priority. Necessary funds also should be given in the hands ot the Deputy Commissioner so that he should go on taking works as and when he likes. Lastly, all the works were stopped on the 15th August though

(SRI H. V. KOUJALGI)

there was scarcity and many representations were made. This year unfortunately the local boards will be there and many of the difficulties are likely to crop up. It is better that the Government foresee all these difficulties and see that the affected area is not at all neglected. With these words, I finish my remarks.

Mr. SPEAKER.—Before we rise, I would like to announce the time taken by the respective members and parties in respect of the Demands concerning the Public Works Department. The total number of participants was 19, out of which the Congress Members were 9, and the P. S. P. Members 5 and independents 5. The total time for the debate was 5 hours and 59 minutes. Out of it, the Congress members have taken 2 hours 19 minutes, P. S. P. members 1 hour 43 minutes and independent members 1 hour 57 minutes.

The House now rises and will meet after half an hour.

The House adjourned for recess at Three of the Clock and reassembled at Thirty Minutes past Three of the Clock.

[MR. SPEAKER in the Chair.]

†ಶ್ರೀ ಪುಟ್ಟೇ ಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ರೆವಿನ್ಯೂ ಡಿಮ್ಯಾಂಡಿನ ಮೇಲೆ ಇರತಕ್ಕ ಕೆಲವು ಕುಂದುಕೊರತೆಗಳನ್ನು ಸಭೆಯ ಮುಂದೆ ಇಡ ಬೇಕೆಂದು ನನ್ನ ಅಭಿಪ್ರಾಯ. ಸಾಮಾನ್ಯವಾಗಿ ರೈತರು ತಮ್ಮ ಜಮೀನುಗಳನ್ನು ಭೋಗ್ಯ ಖರೀದಿ ಆಧಾರ ವಗೈರೆ ಮಾಡತಕ್ಕಕಾಲದಲ್ಲಿ ಮ್ಯುಟೇಷನ್ ಫೀಜ್ ಮತ್ತು ಪೋಡ್ ಫೀಜ್ ಕೊಡಬೇಕೆಂದು ಇದೆ. ಇಂಥ ಕೇಸುಗಳು ಸಾಧಾರಣವಾಗಿ 20-25 ವರ್ಷಗಳ ಮೇಲೆ ಪ್ರತಿಯೊಂದು ತಾಲ್ಲೂಕಿನಲ್ಲೂ ಪೆಂಡಿಂಗ್ ಇವೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅಂಥ ಸಂಧರ್ಭ ದಲ್ಲಿ ಸರ್ವೆ ಡಿಪಾರ್ಟ್‌ಮೆಂಟಿನವರು ತಮ್ಮಲ್ಲಿರತಕ್ಕ ಸಿಬ್ಬಂದಿಯ ಮೂಲಕ ಮ್ಯುಟೇಷನ್ ಫೀಜ್, ಪೋಡ್ ಫೀಜ್ ಕೊಟ್ಟಿರುವ ರೆಕಾರ್ಡುಗಳನ್ನ ಫೈಸಲ್‌ಮಾಡಿದ್ದರೆ, ರೈತರು ಕೋರ್ಟು ವಗೈರೆಗಳಿಗೆ ಹೋಗಿ ಸಾವಿರಾರು ರೂಪಾಯಿಗಳನ್ನು ಕೊಟ್ಟು ಕಳೆದುಕೊಳ್ಳ ತಕ್ಕ ಸಂದರ್ಭ ಬರುತ್ತಾ ಇರಲಿಲ್ಲ. ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿರುವ ಪ್ರತಿಯೊಬ್ಬ ರೆವಿನ್ಯೂ ಇನ್ಸ್‌ಪೆಕ್ಟರಿಗೂ ಸರ್ವೇ ಟ್ರೈನಿಂಗ್ ಕೊಟ್ಟು ಪ್ರತಿಯೊಂದು ಹೋಬಳಿಯಲ್ಲಿಯೂ, ಪೋಸ್ಟ್‌ಮಾಡಿದರೆ ಆಗ ಕೆಲಸ ಜಾಗ್ರತೆ ಆಗಲು ಅನುಕೂಲವಾಗಿ ರೈತರಿಗೆ ಅನುಕೂಲ ವಾಗುತ್ತದೆ ಎನ್ನುವುದು ಅತಿಶಯೋಕ್ತಿಯಲ್ಲ. ಆದುದರಿಂದ ಪ್ರತಿಯೊಂದು ಹೋಬಳಿಯಲ್ಲಿಯೂ ಟ್ರೈನಿಂಗ್ ಆಗಿರತಕ್ಕ ರೆವಿನ್ಯು ಇನ್ಸ್‌ಪೆಕ್ಟರನ್ನು ಹಾಕಿ ಕೂಡಲೇ ರೈತರಿಗೆ ಪೋಡ್ ವಗೈರೆ ಮಾಡಿಕೊಡುವುದಕ್ಕೆ ಅನುಕೂಲ ಮಾಡಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಿಂದಕ್ಕೆ ಗ್ರಾಮಾಧಿಕಾರಿಗಳು ಬರೆದಿಡತಕ್ಕ ರೆಕಾರ್ಡು ಪದ್ಧತಿಯು ಸರಿಯಾಗಿತ್ತು. ಅದನ್ನು ಈಗ ತಾಲ್ಲೂಕ್ ಆಫೀಸಿಗೆ ಕೊಟ್ಟುಬಿಟ್ಟಿದ್ದಾರೆ. ಈ ರೀತಿ ಬದಲಾವಣೆ ಮಾಡಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಯಾವುದೊಂದು ಕೆಲಸಕ್ಕೆ ಹಳ್ಳಿಯಿಂದ ತಾಲ್ಲೂಕ್ ಆಫೀಸಿಗೆ ರೈತನು ಹೋಗ ಬೇಕಾಗುತ್ತದೆ. ಪಾಣಿಖಾತೆ ನೋಡಬೇಕಾದರೆ ರೈತರಿಗೆ ಈಗ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ತಾಲ್ಲೂಕ್ ಆಫೀಸಿನಲ್ಲಿ ರೆಕಾರ್ಡುಗಳನ್ನು ಭದ್ರವಾಗಿ ಇಡಬೇಕು. ಮತ್ತು ರೈತರಿಗೆ ಆಗತಕ್ಕ ತೊಂದರೆಗಳನ್ನು ತಪ್ಪಿಸಬೇಕೆಂದು ರೆವೆನ್ಯೂ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ತಾಲ್ಲೂಕ್ ಆಫೀಸಿನಲ್ಲಿ ತಹಸೀಲದಾರರಿಗೆ ವಿಪರೀತ ಕೆಲಸವಿರುತ್ತದೆ. ಅದರಲ್ಲಿಯೂ ಒಂದು ತಿಂಗಳಿನಲ್ಲಿ 25 ದಿವಸ ಟೂರ್ ಮಾಡುತ್ತಾ ಇರುತ್ತಾರೆ. ರೈತರು ತಮ್ಮ ಕೆಲಸಕ್ಕಾಗಿ ಹಳ್ಳಿಯಿಂದ ದುಡ್ಡು ಖರ್ಚುಮಾಡಿ ತಾಲ್ಲೂಕ್ ಆಫೀಸಿಗೆ ಬಂದರೆ ಹೆಡ್‌ಕ್ವಾರ್ಟರ್ಸ್‌ನಲ್ಲಿ ಆಫೀಸರರು ಇರುವುದೇ ಇಲ್ಲ. ಅವರು ಟೂರ್‌ಮೇಲೆ ಹೋಗಿರುತ್ತಾರೆ. ಈ ಮೂಲಕ ರೈತರಿಗೆ ಬಹಳ ತೊಂದರೆ ಸಂಭವಿಸುತ್ತದೆ. ಈ ರೀತಿ ಯಾಗಿರುವುದರಿಂದ ಒಂದೊಂದು ಕೇಸು ಒಂದೆರಡು ವರ್ಷಗಳವರೆಗೆ ಪೆಂಡಿಂಗ್ ಇರುತ್ತದೆ. ಈ ಮೂಲಕ ರೈತರಿಗೆ ತೊಂದರೆಯಾಗುತ್ತದೆ. ಆದುದರಿಂದ ರೈತರಿಗೆ ಅನುಕೂಲವಾಗುವ ಹಾಗೆ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ವಾಟರ್ ರೇಟ್ ವಸೂಲ್ ಮಾಡುವ ವಿಚಾರದಲ್ಲಿ ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ ಇದನ್ನು ಸರಿಯಾದ ರೀತಿಯಲ್ಲಿ ವಸೂಲ್‌ಮಾಡಬೇಕು. ಯಾವುದೇ ಕಾರಣದ ದೆಶೆಯಿಂದ ಡಬಲ್ ವಾಟರ್ ರೇಟ್ ಹಾಕಬಾರದಾಗಿ ನಾನು ಕೇಳಿಕೊಳ್ಳುತ್ತೇನೆ. ಗ್ರಾಮಾಧಿಕಾರಿಗಳನ್ನು ವಜಾಮಾಡುವ ವಿಚಾರ ಇರುವುದರಿಂದ ಇವರು ಇಂದು ಅಥವಾ ನಾಳೆ ಹೋಗ ಕ್ಕವರೇ ಎಂಬ ಭಾವನೆಯು ಉಂಟಾಗಿ ಕೆಲಸವನ್ನೇ ಮಾಡುವುದಿಲ್ಲ. ಇಂಥ ಸನ್ನಿವೇಶ ಉಂಟಾಗುವಂತೆ ಮಾಡಬಾರದು. ಖಚಿತವಾಗಿ ಇಂಥ ದಿನದಿಂದ ನೀವು ಹೊರಟುಹೋಗಿ ಎಂದು ಅವರಿಗೆ ಹೇಳಿದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತವೆ. ಈ ಗ್ರಾಮಾಧಿಕಾರಿಗಳ ವಿಚಾರದಲ್ಲಿ ಏನಾಗಿದೆ ಎಂದರೆ ಅವರು ಹೋಗುವಂತೆಯೂ ಇಲ್ಲ ಇರುವಂತೆಯೂ ಇಲ್ಲ. ಇದರಿಂದ ಹಾವೂ ಸಾಯಬಾರದು ಕೋಲೂ ಮುರಿಯಬಾರದು ಎಂಬಂತೆ ಆಗಿದೆ. ಆದಕಾರಣ ಆದಷ್ಟು ಜಾಗ್ರತೆ ಈ ಪ್ರಶ್ನೆಯನ್ನು ಬೇಗನೇ ಬಗೆಹರಿಸಬೇಕು. ಹೀಗೆ ಮಾಡಿದರೆ ರೈತರಿಗೂ ಅನುಕೂಲವಾಗುತ್ತದೆ ಗ್ರಾಮಾಧಿಕಾರಿಗಳಿಗೂ ಹಿತವಾಗುತ್ತದೆ. ಅವರಿಗೆ ತಮ್ಮ ಸ್ವಂತ ಜೀವನೋಪಾಯದ ಬೇರೆ ಮಾರ್ಗವನ್ನು ಹುಡುಕಿಕೊಂಡು ಕೆಲಸಮಾಡಲು ಸಾಧ್ಯ

ವಾಗುತ್ತದೆ. ರೈತರಿಗೆ ಆಗತಕ್ಕ ಹಿಂಸೆ ತಪ್ಪುತ್ತದೆ. ಸರಕಾರಕ್ಕೆ ಈ ವಿಚಾರ ಗೊತ್ತಿದ್ದರೂ ಸಹ ಈ ವಿಷಯದಲ್ಲಿ ಬಹಳ ನಿಧಾನವಾಗುತ್ತಿರುವುದನ್ನು ನೋಡಿ ವ್ಯಸನವಾಗುತ್ತಿದೆ. ಆದುದರಿಂದ ಇನ್ನು ತಡಮಾಡದೆ ಆದಷ್ಟು ಮಟ್ಟಿಗೆ ಬೇಗನೆ ಈ ವಿಷಯವನ್ನು ಬಗೆಹರಿಸಬೇಕೆಂದು ರೆವೆನ್ಯೂ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಹೆಚ್ಚುಕಾಲ ವಿಳಂಬ ಮಾಡಿದರೆ ತೊಂದರೆಯಾಗುತ್ತದೆ. ಜಮಾಬಂದಿಯ ವಿಚಾರದಲ್ಲಿಯೂ ಖಾತೆ ಬದಲಾವಣೆಯಾದಾಗ್ಗೆ ರಿಕಾರ್ಡುಕೊಡುವುದಕ್ಕೂ ತೊಂದರೆಯಾಗುತ್ತಿದೆ. ಆದುದರಿಂದ ಗ್ರಾಮಗಳಿಗೆ ಹೋಗಿ ಅಲ್ಲಿಯೇ ಕೆಲಸ ಮಾಡುವ ಹಾಗೆ ಆದರೆ ತೊಂದರೆತಪ್ಪುತ್ತದೆ. ಇದನ್ನು ಕೂಡಲೇ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಹೇಳಬೇಕಾದುದು ಏನೆಂದರೆ ರೆವೆನ್ಯೂ ಇನ್‌ಸ್ಪೆಕ್ಟರುಗಳಿಗೆ ಸರ್ವೆ ಕೆಲಸದ ಟ್ರೇನಿಂಗ್ ಕೊಡಿಸಬೇಕು. ಅಂದರೆ ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ಹೆಚ್ಚು ಚೆನ್ನಾಗಿ ಕೆಲಸವಾಗುತ್ತದೆ. ರೆವೆನ್ಯೂ ಇನ್‌ಸ್ಪೆಕ್ಟರುಗಳಿಗೆ ಟ್ರೇನಿಂಗ್ ಕೊಟ್ಟು ಒಂದೊಂದು ಹೋಬಳಿಗೆ ಒಬ್ಬೊಬ್ಬರು ಕೆಲಸ ಮಾಡುವಂತೆ ಆಗಬೇಕು. ಅಂದರೆ ಕೂಡಲೇ ಕೆಲಸ ವಾಗುತ್ತದೆ. ಈ ಬಗ್ಗೆ ಅವರು ಏನೇನು ಕೆಲಸ ಮಾಡುತ್ತಾರೆ ಎಂಬುದಕ್ಕೆ ಒಂದು ಲಿಸ್ಟ್ ತರಿಸಿ ನೋಡಬೇಕೆಂದು ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ತಾಲ್ಲೂಕ್ ಆಫೀಸುಗಳಿಗೆ ನನ್ನಂಥ ಒಬ್ಬ ಸದಸ್ಯರು ಅಥವಾ ಬೇರೆಯಾರಾದರು ಒಬ್ಬರು ಒಂದು ಕೆಲಸದ ಬಗ್ಗೆ ಹೋದರೆ ಆಫೀಸಿನಲ್ಲಿ ಕುಳಿತುಕೊಳ್ಳುವುದಕ್ಕೆ ಒಂದು ಬೆಂಚು ಅಥವಾ ಒಂದು ಸ್ಟೂಲು ಸಹ ಇರುವುದಿಲ್ಲ, ನಿಂತುಕೊಂಡೇ ಇರಬೇಕಾದ ಸನ್ನಿವೇಶ ಅನೇಕ ವೇಳೆ ಬಂದಿದೆ. ಬೇರೆ ಕೆಲವು ಆಫೀಸುಗಳಲ್ಲಿ ಎಷ್ಟು ಚೆನ್ನಾಗಿ ವ್ಯವಸ್ಥೆ ಇರುತ್ತದೆ ಎಂಬುದನ್ನು ನಾನು ನೋಡಿದ್ದೇನೆ. ಎಷ್ಟೋ ಜನರು ತಾಲ್ಲೂಕ್ ಆಫೀಸುಗಳಿಗೆ ಹೋಗುತ್ತಾರೆ. ಆದರೆ ಈ ವ್ಯವಸ್ಥೆಯ ಬಗ್ಗೆ ಯಾರೂ ನಿಗಾ ಕೊಟ್ಟಿರುವುದಿಲ್ಲ. ತಾಲ್ಲೂಕ್ ಆಫೀಸುಗಳಲ್ಲಿ ಬಂದ ಜನರಿಗೆ ಕುಳಿತು ಕೊಳ್ಳುವುದಕ್ಕೆ ಸರಿಯಾದ ಫರ್ನಿಚರ್ ಇರುವ ವ್ಯವಸ್ಥೆಯನ್ನು ರೆವೆನ್ಯೂ ಡಿಪಾರ್ಟ್‌ಮೆಂಟಿನವರು ಇಡಲು ಪ್ರಯತ್ನ ಮಾಡಬೇಕೆಂದು ನನ್ನ ಅಭಿಪ್ರಾಯವಾಗಿದೆ.

ನಮ್ಮ ತಾಲ್ಲೂಕಿಗೆ ಎನ್. ಇ. ಎಸ್. ಮೊದಲಿಗೆ ಬಂದಿದೆ. ಈ ಎನ್. ಇ. ಎಸ್. ಬಗ್ಗೆ ಎರಡು ಮಾತುಗಳನ್ನು ಲಿಂಗಾರೆಡ್ಡಿಯವರಿಗೆ ಹೇಳಬೇಕಾಗಿದೆ. ಜನಗಳಿಗೆ ಉಪಕಾರ ವಾಗಬೇಕೆಂದು ಎನ್. ಇ. ಎಸ್. ಮಾಡಿದ್ದಾರೆ. ಆದರೆ ಜನಗಳಿಗೆ ಏನೂ ಉಪಯೋಗವಾಗುತ್ತಿಲ್ಲ. ಆದಕಾರಣ ಏನು ಕೆಲಸ ನಡೆಯುತ್ತಿದೆ ಎನ್ನುವುದನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಹಳ್ಳಿಗಳಲ್ಲಿಕೆಲಸ ಮಾಡಬೇಕಾದ ಗ್ರಾಮಸೇವಕರು ಹೆಡ್‌ಕ್ವಾರ್ಟರ್ಸ್ ಸೇರಿಬಿಟ್ಟರೆ ಏನೂ ಪ್ರಯೋಜನವಾಗುವುದಿಲ್ಲ, ಪಂಚಾಯಿತಿಗಳಿಗೆ ಒಪ್ಪಿಸಿದರೆ ಸ್ವಲ್ಪ ಕೆಲಸವಾದರೂ ಆಗುತ್ತದೆ. ಸದಸ್ಯರುಗಳು ತಮ್ಮ ಸ್ವಂತ ಸೌಕರ್ಯ ಮಾಡಿಕೊಂಡಿದ್ದಾರಲ್ಲದೆ ಜನಗಳಿಗೆ ಏನೂ ಉಪಯೋಗವಾಗಿಲ್ಲ.

ಇದೇ ವಿಚಾರದಲ್ಲಿ ಈ ದಿವಸ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಎನ್. ಇ. ಎಸ್. ಆಫೀಸು ತಾಲ್ಲೂಕು ಆಫೀಸ್ ಪಕ್ಕದಲ್ಲಿತ್ತು. ಕೆಲಸ ಶುರುವಾಗುವಾಗ ತಾಲ್ಲೂಕು ಆಫೀಸಿಗೆ ಮೂರುಮೈಲಿ ದೂರವಿರುವ ಜಾಗಕ್ಕೆ ಅದನ್ನು ಬದಲಾಯಿಸಿದರು. ಮತ್ತೆ ಮೂರು ಮೈಲಿ ದೂರಕ್ಕೆ ಹೋಯಿತು. ಪೋಲೀಸ್ ಸ್ಟೇಷನ್ ಪಕ್ಕದಲ್ಲಿದೆ ಎಂದೋ ಏನೋ ತಾಲ್ಲೂಕು ಆಫೀಸನ್ನು ಅಲ್ಲೇಬಿಟ್ಟು ಎನ್. ಇ. ಎಸ್. ಆಫೀಸನ್ನು ಮಾತ್ರ ತಾಲ್ಲೂಕು ಆಫೀಸಿನಿಂದ ದೂರದಲ್ಲಿಟ್ಟಿದ್ದಾರೆ. ಇದರಿಂದ ಬಹಳ ತೊಂದರೆಯಾಗಿದೆ. ಒಬ್ಬ ರೈತ ಬಿಲ್ಲನ್ನು ಮಾಡಿಸಿಕೊಂಡು ಅಲ್ಲಿಂದ ಇಲ್ಲಿಗೆ ಬರಬೇಕಾದರೆ ಖಜಾನೆಯ ಟೈಂಮೀರಿ ಹೋಗುತ್ತದೆ. ಹೀಗಾಗಿ ಒಂದು ಕೆಲಸವಾಗುವುದಕ್ಕೆ ಎರಡು ದಿವಸಗಳಾಗಿ ತೊಂದರೆಯಾಗುತ್ತದೆ.

ಇನ್ನೊಂದು ಎನ್. ಇ. ಎಸ್. ನಲ್ಲಿ ಖರ್ಚಾಗಿರುವುದನ್ನು ನೋಡಬೇಕಾದ್ದು. ಇರಿಗೇಷನ್ ಕೆಲಸ ಹೆಚ್ಚಾಗಿ ಆಗಬೇಕು, ಹೆಚ್ಚು ಆಹಾರ ಬೆಳೆಯಬೇಕು ಎಂದು ಹೇಳುತ್ತಿರುವಾಗ ಕೊಟ್ಟಿರುವ ಹಣವನ್ನು ಕೂಡ ಖರ್ಚು ಮಾಡದಿರುವುದು ಯೋಗ್ಯವಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. Y. GHORPADE (Sandur).—Mr. Speaker, Sir, I shall confine myself to merely one subject, namely, Community Development and Rural Development. Sir, much has been said on both sides in this House as well as in the Parliament. I must preface my remarks by saying that somehow most of the Members do not take their argument to its logical conclusion. They somehow fail to seek out the ingredients in the Indian scene. I do not know why it happens. Perhaps, it may be with the good intention not to arrive at logical conclusion which might be considered as too weak. I want to make a distinction which I feel is basic in discussing the subject. I want to separate local development from the C.D. After all, rural development is there from a long time that the villages should be supplied with the basic amenities ; that is not a new idea. C.D. movement is a separate question because C.D. movement aims at not only supplying the village demands but also starting a movement of self-sustaining group activity in the village. That is the test of C.D. movement. So, in judging the C.D. movement, we must apply this test and separate the rural development from the discussion.

So far as rural development is concerned, of course, everybody admits that since independence much has been done. But, I maintain that much more could have been done. Instead of making vague generalisation, I want to substantiate this statement by virtue of a detailed survey of village demands that we in Sandur were able to do. We were able to do a detailed survey of village

(SRI M. Y. GHORPADE)

demands and the conclusion of it might be of some interest to this House. We found that in Gudekota firka of Kudligi taluk which is my constituency, 20 per cent of the villages in that firka were without any wells either Government or private and they get water from hallas or tanks. Out of 69 villages in this firka, 46 have draw-wells and 23 villages use either step-wells or halla water. Then, again, out of 43 villages, for the Harijans of Gudekunta there are only 17 wells. This is so far as drinking water is concerned.

Regarding education, out of 69 villages in this Hobli, there are only 8 villages with a small population which do not justify a primary school because they do not have even 40 school-going children. But out of the remaining 61 villages, there are recognised schools only in 39 villages. Out of the remaining villages without recognised primary schools, 21 villages are within one mile distance of the recognised school. 13 viliages are within 2 to 3 mi es and 4 villages are more than 3 miles of the recognised school. It is also interesting to note that out of 69 villages 35 are more than 5 miles from the higher elementary or middle schools. 16 villages are more than 10 miles from the high school.

So far as dispensaries are concerned, out of 69 villages, only 16 are within 5 miles of the dispensary. The people of other villages have to go a distance ranging from 6 to 18 miles.

So far as postal services are concerned, there are post offices only in 6 villages. There are 21 villages which are at a distance of more than 2 miles and 19 villages more than 4 miles from a post office.

Now, I read these figures from my survey just to give an indication as to how much needs are to be met. Before I go on to the other point, I wish to say and bring it to the notice of the House, that this survey is absolutely authentic, for we collected these figures at the village meetings and these were supplied by the villagers themselves. The result of this is not mearly collecting data but bringing out certain scientific priorities because priorities must become obvious. That also has been done in this survey. If I may quote just one instance, water supply—we have said that the 13 villages which have to use halla or tank water and where there are no Government or private wells must get the first priority. The next priority is to the 11 villages which use private step-wells with brackish water; that obviously will receive the second priority. Next priority naturally comes to villages which use non-Government and private draw—wells. so, the information has been so arranged that the priorities become obvious. I submit that this sort of information is not available with Government, the result being that minds are applied in an unscientific manner. I wish to humbly submit that this is not a matter to be allowed even after so many years of freedom, that there should be still so many villages without even drinking water supply, that there should be a Hobli without drinking water. It is certainly not something which we should be proud of. This is not exceptional because this is typical. I think conditions are more or less the same in all parts of the country. I submit that if statistics of this kind had been in possession of Government, they would have stated in clear terms that within 4 or 5 years, there would not be a single village without a drinking water well. After all funds are available.

Mr. SPEAKER.—They have already stated that within six years all the villages will be provided with drinking water wells.

Sri M. Y. GHORPADE.—We do not know which are the villages which have no wells. It is all a question of haphazard application of funds. There is no method of evaluation as to what has been done. I know that wells will be sanctioned for villages which have already got wells. That is why I am urging for a survey of this type on all topics covering education, drinking water, Harijan's welfare, irrigation, communications, acquisition of land for housing and co-operative housing and so on.

Sri H. C. LINGA REDDY.—During the pre-extension period, what is done is that the survey of vital statistics of every village is made......the area, the occupational patterns, functional groups, whether there is a tank, whether there is a well, whether there is a school for the children; on all these points a survey is made and those survey maps are available in the blocks.

Sri M. Y. GHORPADE.—The Minister is perfectly right in saying that; it is not that no attempt is made to collect figures, but the figures do not become comparable. If the Government could standardise one pattern and see to it that the figures of all the taluks are collected, then it becomes a comparable thing; then when allocating funds at the State level you can do it on an equitable basis.

Sri K. F. PATIL.—It might be quite correct in his constituency; but it cannot be generalised; things are different in different areas.

Sri M. Y. GHORPADE.—There is scope to do it on a more scientific basis. That is so far as rural development is concerned.

Coming to the C. D. movement, I have read with great interest the heated discussions that took place in the Parliament and I have also followed the discussions taking place on the floor of this House. To my mind, the sole test for measuring the success of the C. D. movement is to see whether this movement succeeded in the development of self-sustaining, self-perpetuating group activities in the village. In other words, has it helped the people to develop a dyanamic leadership? Therefore, before we can categorically answer to that, it may be worthwhile to spend a few minutes to see what has happend in the village to village leadership. Before industrialisation, in ancient India the village was economically isolated; it was economically self-sufficient; If they wanted to protect themselves, they had to do it on their own; if they wanted a tank, they were forced to provide it by their co-operative effort. The result was that the village was united; it had a collective will. As soon as industrialisation came, the collective will, the economic isolation broke down. We got the Welfare State to cater to the needs of the village and therefore, the village slowly lost the habit of being united and self-reliant; the collective will of the people became weaker and weaker. This happend for various reasons. I can tell you from practical experience that wherever there is a village on the bus route, it has not a will of its own; it cannot act in a united manner; whereas if a village is in the interior, it still has retained the traditional capacity to act in a united manner. The village on the bus route has no loyalty for the village. The disease of capitalistic industrialisation, the disease of thinking in terms of personal success has affected all villages which have been influenced by urbanised values. It is interesting to know that because of the compulsion of events, they have to have caste--loyalties. In those days caste-loyalties were subordinated to village loyalties. To-day with industrialisation, with the disintegration of village loyalties, caste has become a pernicious disease. Therefore, I submit that the problem before us is that traditional leadership in the village is disintegrated; we can see it and are we able to replace that traditional leadership, the traditional will of the village by a new village leadership, inspired by new ideas? Has the C. D. movement helped us to do that? I feel that to a large extent we have failed to do that, to replace the old leadership by a new and sufficiently dynamic leadership. It is true that the old leadership was based on traditional values, not based on literacy. But for various reasons that had to go; but are we able to replace it by new leadership is the point. Before we answer that question, I would like briefly to state what are the factors which possibly provide this new leadership at the village level. There are three sources: one, the Government machinery is there; the second, political parties and ultimately and finally there are the local bodies. Let us see to what extent each of these things can supply

(SRI M. Y. GHORPADE)

or fill the lacuna. So far as the Government is concerned, I am afraid we have inherited a system from the British, a legacy from the British, a system which is essentially preventive and punitive. It is a negative mechanism. It is essentially preventive and punitive and based upon a philosophy. It does not matter if nine criminals escape punishment but one innocent man should not be punished. This system has to be modified to some extent if it has to deliver the goods in a dyanamic set-up. After freedom, this system, legacy from the British, was already feeling very awkward, it was further weakened by a sort of popular pressure and interference. Whatever little will they had and the system of traditional capacity was considerably lessened. Therefore, I submit that if you want dynamic results you have to modify the procedure and make it more effective. For instance, there must be a system of rewarding good work and punishment for laziness and bad work. To-day there is no such mechanism in the Government machinery. If a village level worker does excellent job, there is no reward for it. This is a system which is really negative and not equal to the task.

Sri H. C. LINGA REDDY.—The system of distribution of prizes for village level workers is already there.

Sri M. Y. GHORPADE.—Even the Congress Party is seized of the question. There is a lot of discussion in the country as to how the procedure should be modified. I am too small to give a concrete suggestion as to how it should be done. I know one thing. The procedure will have to be modified after taking into account the level of education, the consciousness of the people and finally the pace of development that we desire.

4-00 P.M.

Sri H. C. LINGA REDDY.—I may inform the Hon'ble Member that recently a village level worker of our State got the National Prize at an all-India level.

Sri M. Y. GHORPADE.—Let us see what are the political parties doing ? Why should they not supply the leadership ? It is my frank opinion that generally speaking the political parties in this country are not building up a cadre of dedicated workers having a common ideal. Most of the political parties suffer from a fear-psychosis. They are afraid of the danger of diffusion of political power. The result is that they are not sufficiently concerned with ideological work and the quality of its members and they have become a hotchpotch of divergent ideological elements without any capacity for united action, discipline or cohesive action. Therefore, it is not as though we have no schemes. The Government in our country is an imaginative government and they have got a number of schemes, but we do not have the people to work those schemes. So I conclude that the Government machinery in this country is inherently weak to deal with this situation and it is not sufficiently assisted by an effective people's movement. Therefore, our only hope is what we are trying to do, namely, to usher in a panchayat raj or local self-government. The setting up of the panchayats and taluk boards will do well for the country and we hope that they will bring out from the people the necessary leadership. This is only a vague hope and we cannot say exactly what will happen. It is anybody's guess, because the same elements which have contributed to the disintegration of village leadership, the same elements which have contributed to disintegration of the collective will of the village and its capacity to act in a united manner, will also come in these panchayats and taluk boards. We are optimistic only because this is a supreme experiment that we are making in order to build up a sound and effective leadership in order to place democracy on a sound footing. Let us all work for it, be optimistiec about it and realise fully that is the last chance we are having for democracy. If we are not able to make it a success and if we are not able to build up a proper leadership, I am

afraid that whatever may be the efforts of Government in the shape of buildings and other things, it will be like giving oxygen to a dying man.

With these words, I conclude.

Mr. SPEAKER.—Now I cannot give chance to all members who desire to speak. I call upon Sri Venkatai Gowda to speak. He has sent me a chit that he is not well and so I allow him to speak sitting.

*ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಮಾನ್ಯ ಸಭಾಪತಿಗಳೇ ಈ ರೆವಿನ್ಯೂ ಮತ್ತು ಇತರ ಬೇಡಿಕೆಗಳ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಅಪ್ಪಣೆ ಬೇಡುತ್ತಾ ಇದ್ದೇನೆ. ರಾಜ್ಯ ಪುನರ್‌ವಿಂಗಡಣೆಯಾದಮೇಲೆ ಈ ರೆವಿನ್ಯೂ ಇಲಾಖೆಯಲ್ಲಿ ಎಷ್ಟೊಂದು ಪ್ರಗತಿ ನಿರೀಕ್ಷಣೆ ಮಾಡಿದ್ದೆವೋ ಅಷ್ಟೊಂದು ಪ್ರಗತಿ ಸಾಧ್ಯವಾಗಿಲ್ಲ ಎಂದು ವಿಷಾದಪಡಬೇಕಾಗಿದೆ. ನಮ್ಮ ರಾಜ್ಯದ 5 ಭಾಗಗಳಲ್ಲಿ ಐದು ವಿಧವಿಧವಾದ ನೀತಿ ಮುಂದುವರಿಯುತ್ತಿದೆ. ಇಲ್ಲಿಯವರೆಗೂ ಸರ್ಕಾರ ಒಂದು ಏಕರೂಪತೆಯನ್ನು ಸ್ಥಾಪನೆ ಮಾಡಲಿಕ್ಕಾಗಿ ಏನೊಂದು ಕಾರ್ಯಕ್ರಮವನ್ನೂ ಕೈಕೊಂಡಿಲ್ಲ ಎಂಬುದು ವ್ಯಸನಪಡಬೇಕಾದಂಥ ಸಂಗತಿ. ಅಲ್ಲದೆ ಈ ಜಿಲ್ಲಾ ವ್ಯಾಪ್ತಿ ಟೆರಿಟೋರಿಯಲ್ ಜ್ಯೂರಿಸ್‌ಡಿಕ್ಷನ್ ಬಗ್ಗೆ ಕೂಡ ಆಗಿಂದಾಗ್ಗೆ ಸರ್ಕಾರಕ್ಕೆ ಮನವಿ ಮಾಡುತ್ತ ಇದ್ದೇವೆ. ಜನಸಂಖ್ಯೆಗನುಗುಣವಾಗಿ ಕೆಲಸದ ಒತ್ತಡಕ್ಕನುಗುಣವಾಗಿ ಈ ಜಿಲ್ಲಾ ಪರಿಮಿತಿಯನ್ನು ತಾವು ಪುನರ್ರಚನೆ ಮಾಡಿ ಟೆರಿಟೋರಿಯಲ್ ಜ್ಯೂರಿಸ್‌ಡಿಕ್ಷನನ್ನ ಮತ್ತೆ ಬದಲಾಯಿಸಬೇಕೆಂದು ಕೇಳುತ್ತಾ ಇದ್ದೇವೆ. ಆದರೆ ಇಲ್ಲಿಯವರೆಗೂ ಸರ್ಕಾರ ಏನೊಂದು ಕಾರ್ಯಕ್ರಮವನ್ನೂ ಆ ಕಡೆಗೆ ತೆಗೆದುಕೊಂಡಿಲ್ಲ. ಶ್ರೀವರ್ಮಾ ಗೋರ್‌ವಾಲಾ ಅವರೂ ಕೂಡ 19 ಜಿಲ್ಲೆಗಳನ್ನು 16 ಜಿಲ್ಲೆಗಳಾಗಿ ಪರಿವರ್ತನೆ ಮಾಡಲಿಕ್ಕೆ ಸಾಧ್ಯ ಎಂದು ಅಂಕಿ ಅಂಶಗಳನ್ನು ಕೊಟ್ಟಿದ್ದರೂ ಸಹ ಆಕಡೆಗೆ ಸರ್ಕಾರ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. 19 ಅಲ್ಲ 20 ಜಿಲ್ಲೆ ಆದರೂ ಮಾಡಿ ಪರವಾಗಿಲ್ಲ. ಜನಸಂಖ್ಯೆಗನುಗುಣವಾಗಿ, ಕೆಲಸದ ಒತ್ತಡಕ್ಕನುಗುಣವಾಗಿ ಕಾರ್ಯಕ್ರಮವನ್ನು ಮಾಡದಿದ್ದರೆ ಜನರಿಗೆ ಒಂದು ಸೌಲಭ್ಯ, ಪ್ರಯೋಜನ ಸಿಕ್ಕಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಮತ್ತೊಮ್ಮೆ ಹೇಳುತ್ತಾ ಇದ್ದೇನೆ. ತಮಗೆ ಗೊತ್ತಿರುವಹಾಗೆ ಪ್ರತಿಯೊಬ್ಬ ಜಿಲ್ಲಾಧಿಕಾರಿಗೂ ಒಂದೇ ರೀತಿಯ ಕೆಲಸ ಇರಲಿಕ್ಕೇ ಬೇಕು. ಆದರೆ ಇವೊತ್ತು ಕೊಡಗಿನಲ್ಲಿ 3 ಲಕ್ಷ ಪ್ರಜಾಸಂಖ್ಯೆಗೆ ಒಬ್ಬ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡದಲ್ಲಿ 17 ಲಕ್ಷ ಪ್ರಜಾಸಂಖ್ಯೆಗೆ ಒಬ್ಬ ಜಿಲ್ಲಾಧಿಕಾರಿಗಳು ಇದ್ದಾರೆ. ಅವರವರಿಗೆ ಕೆಲಸದಲ್ಲಿ ಎಷ್ಟು ವ್ಯತ್ಯಾಸ ಇರುತ್ತದೆ ಎಂದುಯೋಚನೆ ಮಾಡುವುದಾದರೆ, ಈ ಒಂದು ಕೆಲಸಕ್ಕೆ ಅದಷ್ಟು ಪ್ರಾಶಸ್ತ್ಯ ಕೊಟ್ಟುಕೂಡಲೇ ಟೆರಿಟೋರಿಯಲ್ ಜ್ಯೂರಿಸ್‌ಡಿಕ್ಷನನ್ನು ಕೆಲಸದ ಒತ್ತಡ ಮತ್ತು ಪ್ರಜಾಸಂಖ್ಯೆಗನುಗುಣವಾಗಿ ಪರಿವರ್ತನೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಬೇಡುತ್ತಾ ಇದ್ದೇನೆ.

ಎರಡನೆಯದಾಗಿ ರೆವಿನ್ಯೂ ಸಬ್‌ಡಿವಿಜನ್‌ಕೂಡ ಜನಗಳ ಸೌಕರ್ಯಕ್ಕನುಗುಣವಾಗಿ ನಿರ್ಮಿತವಾಗಿಲ್ಲ. ಇವತ್ತಿನ ದಿವಸ ಒಂದು ಉದಾಹರಣೆಯನ್ನು ಹೇಳಬೇಕಾದರೆ ಮೈಸೂರು ಸಿಟಿಯಲ್ಲಿ ಒಂದು ಸಬ್ ಡಿವಿಜನ್ ಇದೆ. 15 ಮೈಲಿ ದೂರದಲ್ಲಿರತಕ್ಕ ನಂಜನಗೂಡಿನಲ್ಲಿ ಕೂಡ ಒಬ್ಬ ಸಬ್‌ಡಿವಿಜನ್ ಆಫೀಸರ್ ಇದ್ದಾರೆ. ಆದರೆ ನಂಜನ್‌ಗೂಡು ಸಬ್ ಡಿವಿಜನ್ ಆಫೀಸಿಗೆ 120 ಮೈಲಿದೂರದಿಂದ ಜನ ಬರಬೇಕಾದ ಪ್ರಮೇಯ ಇವತ್ತಿನ ದಿವಸ ಇದೆ. ಕೇಂದ್ರ ಸ್ಥಳದಲ್ಲಿ ಸಬ್ ಡಿವಿಜನ್ ಆಫೀಸ್ ಇರುವುದು ಸೂಕ್ತ ಎಂಬ ವಿಚಾರವನ್ನು ಸರ್ಕಾರದವರು ಮನಗಂಡರೆ ರೈತರಿಗೆ ಎಷ್ಟೋ ಸೌಕರ್ಯ ಮಾಡಬಹುದು. ಕೇಂದ್ರ ಸ್ಥಳಗಳಲ್ಲಿ ರೆವಿನ್ಯು ಸಬ್ ಡಿವಿಜನ್‌ಗಳನ್ನು ನಿರ್ಮಿಸತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಮತ್ತೊಮ್ಮೆ ಕೇಳಿಕೊಳ್ಳುತ್ತಾ ಇದ್ದೇನೆ. ಕೊಳ್ಳೆಗಾಲದಲ್ಲಿ ಒಂದು ಸಬ್‌ಡಿವಿಜನ್ ಇರಬೇಕೆಂದು ಸರ್ಕಾರಕ್ಕೆ ಸರಿ ಎಂದು ಕಂಡುಬಂದರೆ ಮಾಡಬಹುದು ಎಂದು ಹೇಳುತ್ತೇನೆ. ಕೊಳ್ಳೇಗಾಲದಲ್ಲಿ ಒಬ್ಬರು ಸಬ್ ಡಿವಿಜನ್ ಆಫೀಸರ್ ಇದ್ದರು. ಆ ಒಂದು ತಾಲ್ಲೂಕಿನ ವಿಸ್ತೀರ್ಣ 1,100 ಚದುರ ಮೈಲಿ ಇದೆ. ಆಭಾಗಕ್ಕೆ ಅದನ್ನು ಕೊಡುವುದು ಸೂಕ್ತವೇ ಅಲ್ಲವೇ ಎಂಬುದನ್ನು ಯೋಚನೆ ಮಾಡಬೇಕೆಂದು ಸರ್ಕಾರದವರಿಗೆ ಒಂದು ಸೂಚನೆ ಕೊಡುತ್ತಾ ಇದ್ದೇನೆ. ಈ ರೆವಿನ್ಯು ಸಬ್ ಡಿವಿಜನ್ ಆಫೀಸುಗಳು ಆ ಪ್ರದೇಶದ ಕೇಂದ್ರ ಸ್ಥಳದಲ್ಲಿದ್ದರೆ ಜನಗಳಿಗೆ ಬಹಳ ಅನುಕೂಲವಾಗುತ್ತದೆ ಎಂದು ಇಷ್ಟುಮಾತ್ರ ತಿಳಿಸುತ್ತೇನೆ.

[SRI K. PUTTASWAMY (Chairman) in the Chair.]

ರೆವಿನ್ಯು ಇಲಾಖೆಯಲ್ಲಿ ದಕ್ಷತೆ ಕಡಮೆಯಾಗುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ಅದು ಏಕೆ? ಮಾನ್ಯ ಮಂತ್ರಿಗಳಲ್ಲಿ ಬಹಳ ಆಸಕ್ತಿ ಇದೆ, ಶ್ರದ್ಧೆ ಇದೆ. ರೆವಿನ್ಯೂ ಸೆಕ್ರೆಟರಿಗಳಲ್ಲೂ ಶ್ರದ್ಧೆ, ಆಸಕ್ತಿ ಇದೆ. ಈ ಶ್ರದ್ಧಾಸಕ್ತಿ ಮಾತ್ರ ಇದ್ದರೆ ಸಾಲದು ಎಂದು ಹೇಳುತ್ತೇನೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಆಡಳಿತ ಎಷ್ಟು ಸಡಿಲವಾಗಿದೆ, ಬಿಗಿ ತಪ್ಪಿದೆ ಎಂಬುದನ್ನು ನಾವು ನೋಡುತ್ತಾ ಇದ್ದೇವೆ. ನಾವು ಮದರಾಸ್ ಆಡಳಿತದಲ್ಲಿದ್ದಾಗ ಎಷ್ಟು ಬಿಗಿಯಾಗಿಇತ್ತೋ ಅಷ್ಟು ಬಿಗಿ ತಾಲ್ಲೂಕು ಆಫೀಸಿನಲ್ಲಿ ಇಲ್ಲದೆ ಸಡಿಲತೆ ಕಾಣುತ್ತಾ ಇದೆ. ಅದಕ್ಕೆ ಕಾರಣವೇನು ಎಂದು ಈಗ ನಾನು ಪ್ರಶ್ನೆ ಮಾಡಬೇಕಾಗಿದೆ. ಮೈಸೂರು ಸರ್ಕಾರಕ್ಕೆ ಏನು ಒಂದು ಧೈರ್ಯ ಅಥವಾ ಗಂಡಸುತನ ಇಲ್ಲವೇ ಎಂದು ಯೋಚನೆ ಮಾಡಬೇಕಾಗಿದೆ. ಏಕೆ ಈ ರೀತಿ ಆಯಿತು ಎಂದು ನನಗೆ ಅನಿಸುತ್ತದೆ. ಇದನ್ನು ಯಾವ ಒಂದು ದ್ವೇಷಾಸೂಯೆಯ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಅಥವಾ ಮದರಾಸು ಸರ್ಕಾರದ ಮೇಲಿನ ಒಂದು ಪ್ರೇಮದಿಂದಲೂ ಸಹ ನಾನು ಹೇಳುತ್ತಾ ಇಲ್ಲ. ಅಲ್ಲಿ ಮಲತಾಯಿ ಪ್ರೇಮ ತೋರಿಸುತ್ತ ಇದ್ದರು ಎಂದು ಮೈಸೂರಿಗೆ ಸೇರಬೇಕೆಂದು ಕೇಳುತ್ತಾ ಇದ್ದೆವು. ಆದರೂ ಕೂಡ ಅದನ್ನು ಪ್ರಶಂಸೆ ಮಾಡುತ್ತಾ ಇದ್ದೇನೆ. ಅಲ್ಲಿ ಆಡಳಿತ ಅಷ್ಟು ಬಿಗಿಯಾಗಿತ್ತು. ಮೇಲಿನ ಅಧಿಕಾರಿಗಳ ಬಗ್ಗೆ ಕೆಳಗಿನ ಅಧಿಕಾರಿಗಳಲ್ಲಿ ಭಕ್ತಿ, ವಿಶ್ವಾಸ ಎಷ್ಟು ಮಟ್ಟಿಗೆ ಇದೆ ಅದನ್ನು ಇಲ್ಲಿನ ಜನ ಕಲಿಯಬೇಕೆಂದು ಹೇಳುತ್ತಾ ಇದ್ದೇನೆ. ಅವರಿಗೆ ಇರತಕ್ಕ ಕರ್ತವ್ಯ ನಿಷ್ಠೆಯನ್ನು ನಾವೂ ಕಲಿಯಬೇಕು. ಇವತ್ತಿನದಿವಸ ನಮ್ಮ ಸಣ್ಣ ದರ್ಜೆಯ ಅಧಿಕಾರಿಗಳಲ್ಲಿ ಅವರ ಮೇಲೆ ಇರತಕ್ಕ ಅಧಿಕಾರಿಗಳ ಪ್ರಭಾವ ಕಡಮೆಯಾಗುತ್ತಿದೆ. ಇದೇಕೆ ಹೀಗಾಗಿದೆ ಎನ್ನುವುದನ್ನು ತಿಳಿಯಲು ತಮ್ಮ

(ಶ್ರೀ ಜಿ. ವೆಂಕಟೇಗೌಡ)

ಮುಖ್ಯಾಧಿಕಾರಿಗಳನ್ನು ಬೇರೆಕಡೆಗಾದರೂ ಕಳುಹಿಸಿ ಅದನ್ನು ತಿಳಿದುಕೊಳ್ಳುವುದು ಅಗತ್ಯವೆಂದು ನಾನು ಸೂಚಿಸುತ್ತೇನೆ. ಹಾಗೂ ಎಷ್ಟೋ ಇಲಾಖೆಗಳಲ್ಲಿ ಹೇಗೆ ಕೆಲಸಗಳು ಆಗುತ್ತಿವೆ ಎನ್ನುವುದು ತಮಗೇ ಗೊತ್ತಿದೆ. ತಾವೇ ಎರಡು ಮೂರು ತಾಲ್ಲೂಕುಗಳಿಗೆ ಹೋಗಿ ಪರಿಶೀಲನೆ ನಡೆಸಿದಾಗ ಎಷ್ಟೋ ವರ್ಷಗಳಿಂದಲೂ ವಿಲೇವಾರಿ ಆಗದೆ ಕಾಗದಪತ್ರಗಳು ಸಿಕ್ಕಿದ್ದನ್ನುನೋಡಿದ್ದೀರಿ. ಆದುದರಿಂದ ಈ ಇಲಾಖೆಯಿಂದ ರೈತರಿಗೆ ಏನೇನು ಪ್ರಯೋಜನ ಸಿಕ್ಕಬೇಕೋ ಅದನ್ನೆಲ್ಲಾ ಈ ಇಲಾಖೆಯವರು ಮಾಡಿಕೊಡಬೇಕು. ಆ ರೀತಿಯಾಗಿ ಮಾಡಿಕೊಡಬೇಕೆಂದು ಸರಕಾರದಲ್ಲಿ ಹೇಳುತ್ತಿದ್ದೇನೆ. ಅಲ್ಲದೇ ಈಗ ಐದು ಭಾಗಗಳು ನಮ್ಮ ದೇಶಕ್ಕೆ ಸೇರಿರುವುದರಿಂದ ರೂಲ್ಸುಗಳನ್ನು ನೀತಿ ನಿಯಮಗಳನ್ನು ಸಮನ್ವಯಗೊಳಿಸಿ ಎಲ್ಲಾ ರೂಲ್ಸುಗಳನ್ನೂ ಏಕರೂಪತೆಗೆ ತರುವುದು ಅವಶ್ಯಕವಾಗಿದೆ. ಇದನ್ನು ಬೇಗನೆ ತರಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಬೇಡುತ್ತೇನೆ.

ಆ ಮೇಲೆ ಮುಜರಾಯಿ ಇನ್‌ಸ್ಟಿಟ್ಯೂಷನ್ನುಗಳ ವಿಷಯದಲ್ಲಿರುವ ಕಾನೂನುಗಳೂ ಬೇರೆ ಬೇರೆಯಾಗಿವೆ. ಇವನ್ನೂ ಏಕರೂಪತೆಗೆ ತರಬೇಕೆಂದು ಮೂರು ಮೂರುವರೆ ವರ್ಷಗಳಿಂದಲೂ ಹೇಳುತ್ತಿದ್ದರೂ ಇದನ್ನೂ ಗಮನಕ್ಕೆ ತೆಗೆದುಕೊಂಡಿಲ್ಲ. ಈಗಲಾದರೂ ಇದರ ಬಗ್ಗೆ ಗಮನ ಕೊಡಬೇಕೆಂದು ಕೋರುತ್ತೇನೆ. ಅಲ್ಲದೆ ತಾವು ತಮ್ಮ ಅಧಿಕಾರಿಗಳಲ್ಲಿ ಕೆಲಸ ಮಾಡುವಾಗ ಇರಬೇಕಾದ ದೇಶ ಪ್ರೇಮ ಮತ್ತು ಭಕ್ತಿ ಇಲ್ಲದೇ ಇರುವುದಕ್ಕೆ ಕಾರಣವೇನು ಎನ್ನುವುದನ್ನೂ ವಿಚಾರ ಮಾಡುವುದು ಆವಶ್ಯಕ.

ಇನ್ನು ಕೆಳದರ್ಜೆಯ ಅಧಿಕಾರಿಗಳು ಮೇಲು ದರ್ಜೆಯಲ್ಲಿರುವ ಅಧಿಕಾರಿಗಳ ಮೇಲೆ ಪ್ರೇಮ ವಿಶ್ವಾಸವಿಲ್ಲದೇ ಕೆಲಸ ಮಾಡುತ್ತಿದ್ದಾರೆ. ಒಬ್ಬರು ಡೆಪ್ಯುಟೀ ತಹಶೀಲುದಾರರಾಗಿರುವವರು ತಹಶೀಲುದಾರರ ಮೇಲೆ "Tahsildar is an unfit person to hold that post" ಎಂದು ಬರೆದರೆ ಈ ಅಧಿಕಾರಿಗಳಲ್ಲೇ ಎಷ್ಟರಮಟ್ಟಿನ ಶ್ರದ್ಧೆ, ವಿಶ್ವಾಸಗಳು ಕೆಲಸದಲ್ಲಿರುತ್ತವೆ ಎನ್ನುವುದನ್ನೂ ತಾವೇ ಆಲೋಚನೆ ಮಾಡಬೇಕು.

ಇನ್ನೊಂದು ವಿಚಾರವನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ. ಪಂಚಾಯಿತಿ ಎಲೆಕ್ಷನ್ನುಗಳಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ರಿಟರ್ನಿಂಗ್ ಆಫೀಸರೆಂದು ಮಾಡುತ್ತಾರೆ. ಇವರಿಂದ ಎಷ್ಟೋ ಗ್ರಾಮಗಳಲ್ಲಿ ಈ ಪಂಚಾಯಿತಿಗಳ ಎಲೆಕ್ಷನ್ನುಗಳು ಆಗುವಾಗ ನೀತಿ ನಿಯಮಗಳಿಲ್ಲದೇ ರೈತರಿಗೆ ಎಷ್ಟೋ ತೊಂದರೆಗಳಾಗಿವೆ. ಎಷ್ಟೋ ಕಡೆಗಳಲ್ಲಿ ಪಂಚಾಯಿತಿಗಳಲ್ಲಿ 5 ರೂಪಾಯಿಗಳ ಡಿಪಾಜಿಟ್ಟು ಹಣವನ್ನು ಕಟ್ಟಬೇಕೆಂದಿದ್ದರೂ, ಈ ಅಧಿಕಾರಿಗಳು ಬಡ ರೈತರುಗಳಿಂದ 10–12 ರೂಪಾಯಿಗಳಷ್ಟು ಹಣವನ್ನು ಡಿಪಾಜಿಟ್ಟುಗಾಗಿ ತೆಗೆದುಕೊಂಡಿದ್ದಾರೆ ಮತ್ತು ಇಲ್ಲಿ ಇನ್ನೂ ಏನೇನೋ ಅವ್ಯವಸ್ಥೆಗಳುಂಟಾಗಿವೆ. ಈ ರೀತಿಯಾಗಿರುವ ಪಂಚಾಯಿತಿಗಳ ಎಷ್ಟೋ ಚುನಾವಣೆಗಳ ಅವ್ಯವಸ್ಥೆಗಳ ನಿದರ್ಶನಗಳು ನನ್ನಲ್ಲಿವೆ. ಇದನ್ನು ನೋಡಿದರೆ ರೆವಿನ್ಯೂ ಇಲಾಖೆಯಲ್ಲೇ ಎಷ್ಟರಮಟ್ಟಿಗೆ ಆಡಳಿತದಲ್ಲಿ ಅವ್ಯವಸ್ಥೆಗಳಿವೆ ಎನ್ನುವುದು ತಿಳಿಯುತ್ತದೆ. ಇದರಿಂದಾಗಿ ರೈತರಿಗೆ ವಿಶ್ವಾಸ ಯಾವ ರೀತಿ ಬರುತ್ತದೆ ಎನ್ನುವುದನ್ನು ತಾವೇ ಸ್ವಲ್ಪ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇದನ್ನೆಲ್ಲಾ ಆದಷ್ಟು ಕೂಲಂಕುಷವಾಗಿ ಪರಿಶೀಲನೆ ಮಾಡಿ ತಮ್ಮ ಅಧಿಕಾರಿಗಳು ಆಸಕ್ತಿಯಿಂದ ಕೆಲಸಗಳನ್ನು ಮಾಡಿ ಅದು ಕಾರ್ಯರೂಪದಲ್ಲಿ ಬರುವಂತೆ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡದಿದ್ದರೆ ರೈತರಲ್ಲಿ ವಿಶ್ವಾಸ ಕಡಮೆಯಾಗುತ್ತದೆ. ರೈತರಿಗೆ ಈ ವಿಧವಾದ ತೊಂದರೆಗಳಾಗುತ್ತಿದ್ದರೆ ಆಡಳಿತದಲ್ಲಿ ದಕ್ಷತೆ ಹೇಗೆ ಬರಬೇಕು ಮತ್ತು ಆಡಳಿತದಲ್ಲಿರತಕ್ಕ ಅಧಿಕಾರಿಗಳಲ್ಲಿ ಶ್ರದ್ಧೆ ಹೇಗೆ ಬರಬೇಕು ? ಅವರ ದುಡಿಮೆ ಪರಿಣಾಮಕಾರಿಯಾಗಬೇಕಾದರೆ ಸಾರ್ವಜನಿಕರ ಮನಸ್ಸು ಪರಿವರ್ತನೆಯಾಗುವ ಹಾಗೆ ಶ್ರದ್ಧೆಯಿಂದ ಕೆಲಸಗಳನ್ನು ಮಾಡಬೇಕು. ಈ ಮನೋಭಾವ ಎಲ್ಲ ಸರಕಾರದ ಅಧಿಕಾರಿಗಳಲ್ಲಿಯೂ ಬೆಳೆಯಬೇಕು.

ಇಷ್ಟನ್ನು ಹೇಳಿ, ಅಭಿವೃದ್ಧಿ ಕಾರ್ಯಗಳಿಗಾಗಿ ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅಭಿವೃದ್ಧಿ ಕಾರ್ಯಗಳಿಗಾಗಿ ಅಲ್ಲಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಅಧಿಕಾರಿಗಳೆಂದು ನೇಮಕ ಮಾಡಲಾಗಿದೆ ಮತ್ತು ಅವರಿಂದ ಈ ಎಲ್ಲ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ ಮತ್ತು ಆ ರೀತಿ ನಡೆಯಲಿಕ್ಕೆ ಸಾಧ್ಯವೂ ಇದೆ. ನಮ್ಮ ತಾಲ್ಲೂಕಿಗೆ ಎರಡು ಬ್ಲಾಕುಗಳನ್ನು ಕೊಟ್ಟಿದ್ದಾರೆ ಎರಡು ಬ್ಲಾಕುಗಳಲ್ಲಿಯೂ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಒಂದು ಬ್ಲಾಕಿನಲ್ಲಿರುವ ಆಫೀಸರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನೊಂದು ಬ್ಲಾಕಿನಲ್ಲಿರುವ ಆಫೀಸರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ರೀತಿಯಾಗಿ ಬ್ಲಾಕುಗಳಲ್ಲಿ ಕೆಲಸಗಳಾಗುತ್ತಿದ್ದರೆ, ಇದಕ್ಕಾಗಿ ಖರ್ಚು ಮಾಡತಕ್ಕದ್ದು ಅಪ್ರಯೋಜಕವೆಂದು ನಾನು ಹೇಳುತ್ತೇನೆ. ತಾವು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಒಂದು ಗ್ರಾಮವನ್ನು ಅಭಿವೃದ್ಧಿ ಮಾಡಬೇಕೆಂದು ಮಾಡುವಾಗ ಅಷ್ಟರಮಟ್ಟಿಗೆ ಜನರಿಗೆ ಡಿಪಾರ್ಟುಮೆಂಟಿನಿಂದ ಸರಿಯಾದ ಸೌಕರ್ಯಗಳು ದೊರೆಯುವಂತೆ ಕಲ್ಪನೆಮಾಡಬೇಕು. ಜನರ ಮನಸ್ಸಿನ ಮೇಲೆ ಸಹಕಾರ ಮೂಡುವಂತೆ ಕೆಲಸ ಮಾಡಬೇಕು. ಹಾಗೆ ಸರಕಾರದಿಂದ ಕೆಲಸಗಳು ಆಗದಿದ್ದರೆ ಇದಕ್ಕಾಗಿ ವೆಚ್ಚ ಮಾಡುವುದು ಹೊಳೆಯಲ್ಲಿ ಹುಣಸೇಹಣ್ಣನ್ನು ಬಿಟ್ಟಂತೆ ಆಗುತ್ತದೆ. ಸಾರ್ವಜನಿಕರಿಗೆ ಆಗ ಇಲಾಖೆಯಿಂದ ಏನೂ ಕೆಲಸವಾಗುವುದಿಲ್ಲ ಎನ್ನುವ ಭಾವನೆ ಬರುತ್ತದೆ. ಈ ಒಂದು ದೃಷ್ಟಿಯಿಂದ ಸರಕಾರದ ಹಣ ಪೋಲಾಗುತ್ತದೆ ಎಂದು ಹೇಳಬೇಕಾಗುತ್ತದೆ. ಆದಷ್ಟುಮಟ್ಟಿಗೆ ಬಿ. ಡಿ. ಓ. ಗಳಾಗಿರುವ ಅಧಿಕಾರಿಗಳು ಆಸಕ್ತಿಯಿಂದ ಕೆಲಸ ಮಾಡುವಹಾಗೆ ಇರಬೇಕು. ಇದಕ್ಕಾಗಿ ಅವರ ಕೈಕೆಳಗೆ ಇರುವಂತಹ ವಿಲೇಜುಲೆವಲ್‌ವರ್ಕರುಗಳು ಎಂದರೆ ಗ್ರಾಮಸುಧಾರಕರನ್ನು ಸರಿಯಾಗಿ ತರಬೇತಿಕೊಟ್ಟು ಕೆಲಸ ಮಾಡುವ ವ್ಯವಸ್ಥೆ ಮಾಡಬೇಕು. ಈ ರೀತಿಯಾದ ವ್ಯವಸ್ಥೆಯನ್ನು ಮಾಡಿದರೆ ಆಗ ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಳ್ಳಿಯಲ್ಲಿರುವ ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಆದಷ್ಟುಮಟ್ಟಿಗೆ ಆ ಮಕ್ಕಳಿಗೆ ಕೈಯಲ್ಲಾಗುವಂತಹ ಕೆಲಸಗಳನ್ನು ಮಾಡುವುದು ಎಲ್ಲಾ ವಿಲೇಜ್ ಲೆವಲ್ ಅಧಿಕಾರಿಗಳು ಒಂದು ಕಾರ್ಯಕ್ರಮ ಹಾಕಿಕೊಂಡು ಮಾಡಿದರೆ ಆಗ ನಿಜವಾಗಿಯೂ ಅಂತಹ ಗ್ರಾಮವನ್ನು ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳಲು ಇಚ್ಛೆಪಡುತ್ತೇನೆ. ವ್ಯವಸಾಯದ ಅಭಿವೃದ್ಧಿಗಾಗಿ ರೈತರಿಗೆ ಬೇಕಾಗುವಂತಹ ಸಾಲ

ಮತ್ತಿತರ ಸೌಲಭ್ಯಗಳನ್ನು ಒದಗಿಸುವುದು, ಶಾಲೆಗಳಿಗೆ ರೈತರ ಮಕ್ಕಳನ್ನು ಸೇರಿಸಿ ವಿದ್ಯೆ ಕಲಿಸುವುದು, ಇತ್ಯಾದಿ ಕೆಲಸಗಳನ್ನು ಈ ವಿಲೇಜು ಲೆವಲ್ ಅಧಿಕಾರಿಗಳು ಮಾಡಿದರೆ ತಾವು ಇದಕ್ಕಾಗಿ ಮಾಡುವ ಖರ್ಚು ಸಾಕಷ್ಟು ಪ್ರಯೋಜನ ದೊರಕುವಂತೆ ಆಗುತ್ತದೆ ಎಂದು ನಾನು ಹೇಳುತ್ತೇನೆ. ನನ್ನ ಸ್ನೇಹಿತರು ಒಂದು ಉದಾಹರಣೆಯನ್ನು ಬ್ಲಾಕಿನ ಬಗ್ಗೆ ಹೇಳುತ್ತಿದ್ದಾರೆ. ಅದು ಶಿರಾ ತಾಲ್ಲೂಕಿನಲ್ಲಿ ಕೊಟ್ಟಿರುವ ಬ್ಲಾಕಿನ ಖರ್ಚಿನ ಅಂದಾಜುಗಳ ವಿವರಗಳು. 59-60ನೆಯ ಸಾಲಿನಲ್ಲಿ 12,00,000 ರೂಪಾಯಿಗಳಷ್ಟು ವೆಚ್ಚವಾಗಿದೆ. ಇದರಲ್ಲಿ ಸಿಬ್ಬಂದಿಗಾಗಿಯೇ 90 ಸಾವಿರ ರೂಪಾಯಿಗಳಷ್ಟು ಖರ್ಚಾಗಿದೆ. ಇನ್ನು 1,20,000 ರೂಪಾಯಿಗಳು ಬೇರೆ ಇತರ ಕೆಲಸಗಳಿಗೋಸ್ಕರವಾಗಿ ನಿಗದಿಯಾಗಿರುವುದರಲ್ಲಿ ಖರ್ಚಾಗಿರುವುದು 45,000 ರೂಪಾಯಿಗಳು. 1,20,000 ರೂಪಾಯಿಗಳನ್ನು ಒದಗಿಸಿರುವುದರಲ್ಲಿ 40,000 ರೂಪಾಯಿಗಳು ಮಾತ್ರ ಖರ್ಚಾಗಿವೆ ಎಂದರೆ 85,836 ರೂಪಾಯಿಗಳಷ್ಟು ಉಳಿಕೆಯಾಗಿದೆ. ಸಿಬ್ಬಂದಿಯ ಖರ್ಚಿಗಾಗಿ ನಾವು ಎಷ್ಟು ಖರ್ಚು ಮಾಡಿದರೂ ಅದಕ್ಕೆ ಐವತ್ತರಷ್ಟು ಪ್ರತಿಫಲ ದೊರೆಯದಿದ್ದರೆ ಅಭಿವೃದ್ಧಿ ಕಾರ್ಯಗಳಾಗುವುದಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ನಾವು ಎಷ್ಟು ಮಟ್ಟಿಗೆ ಹಣವನ್ನು ಖರ್ಚು ಮಾಡುತ್ತೇವೆಯೋ ಅದು ಸಫಲವಾಗಬೇಕಾದರೆ, ಖರ್ಚು ಮಾಡತಕ್ಕ ಹಣಕ್ಕೆ ತಕ್ಕ ಪ್ರತಿಫಲ ದೊರೆಯಬೇಕಾದರೆ ಈ ವಿಚಾರದಲ್ಲಿ ಆಸಕ್ತಿಯಿಂದ, ಶ್ರದ್ಧೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು ಇದ್ದರೆ ಈ ಕೆಲಸಗಳು ಯಶಸ್ವಿಯಾಗುತ್ತವೆ. ಆ ರೀತಿಯಾಗಿ ಈ ಬಿ.ಡಿ.ಒ. ಗಳು ಕೆಲಸಮಾಡಿದರೆ ಈ ಯೋಜನೆ ಯಶಸ್ವಿಯಾಗುತ್ತದೆ.

ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನು ಅವರಿಗೆ ಸಲ್ಲಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಸ್ವಾಮಿ, ಈ ದಿವಸ ನಮ್ಮ ಮುಂದೆ ಇರತಕ್ಕ ಡಿಮ್ಯಾಂಡನ್ನು ಅನುಮೋದಿಸುತ್ತ ಇದೇ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ಮಾತ್ರ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ಸಮಾಜ ವಿಕಾಸ ಯೋಜನೆಯ ವಿಚಾರವಾಗಿ ನಮ್ಮ ಸ್ನೇಹಿತರು ಈಗಾಗಲೇ ಅನೇಕ ವಿಚಾರಗಳನ್ನು ಹೇಳಿದ್ದಾರೆ ಮತ್ತು ಅದು ಎಷ್ಟು ಜನಗಳಿಗೆ ಅನುಕೂಲವಾಗತಕ್ಕಂತಹ ರೀತಿಯಲ್ಲಿದೆ ಎನ್ನುವುದನ್ನೂ ಹೇಳಿದ್ದಾರೆ. ನಾನಾದರೋ ಹೇಳುವುದು, ನಿಜವಾಗಿಯೂ ಇದು ನಮ್ಮ ದೇಶದಲ್ಲಿ ಈಗ ಒಂದೇ ಸಮಾನವಾದ ಸಮಾಜವನ್ನು ರಚನೆ ಮಾಡಲು ಹೊರಟಿರತಕ್ಕ ಸಂದರ್ಭದಲ್ಲಿ ಈ ಯೋಜನ ಅತ್ಯಗತ್ಯವಾದದ್ದು. ದೇಶದಲ್ಲಿರುವ ಇತರ ಯೋಜನೆಗಳನ್ನು ಅಳವಡಿಸಿಕೊಂಡು ಕಟ್ಟತಕ್ಕ ರಾಷ್ಟ್ರೀಯ ವಿಕಾಸ ಯೋಜನೆ, ಸಮಾಜವಿಕಾಸ ಯೋಜನೆಯಂತಹ ಈ ಯೋಜನೆಗಳು ಬಹಳ ವಿಶಾಲ ದೃಷ್ಟಿಯನ್ನು ಬೀರಿದೆ. ಆ ರೀತಿಯ ಕಾರ್ಯಕ್ರಮ ನಡೆಸಬೇಕಾದರೆ ಜನಗಳೂ ಕೂಡ ಅದೇ ವಿಶಾಲ ಮನೋಭಾವನೆಯಿಂದ ಮುಂದೆ ಬಂದು ಆಡಳಿತವನ್ನು ವಹಿಸಿಕೊಳ್ಳುವುದಕ್ಕೆ ಮುಂದೆ ಬಂದರೆ ಆಗ ಬಹು ಭಾಗ ಉಪಯೋಗ ಹೊಂದುವುದಕ್ಕೆ ಸಾಧ್ಯವೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆ ಪಡುತ್ತೇನೆ. ಬಹುಶಃ ನಾವು ನಿರೀಕ್ಷಿಸಿದಷ್ಟು ಪ್ರಯೋಜನ ದೊರೆಯದೆ ಇರಲು, ಜನಗಳ ಸಹಾಯ, ಸಹಕಾರ ದೊರೆಯದೆ ಇರುವುದೇ ಮುಖ್ಯ ಕಾರಣವೆಂದು ನಾನು ತಿಳಿದುಕೊಂಡಿದ್ದೇನೆ.

4-30 P.M.

ಈ ವಿಕಾಸ ಯೋಜನೆಯಲ್ಲಿ ಬರಿಯ ದುಡ್ಡನ್ನು ಅವಲಂಬಿಸದೆ ಜನಗಳ ಮನಸ್ಸನ್ನು ಪರಿವರ್ತಿಸಿ ದೇಶಾಭಿವೃದ್ಧಿಯ ಕಡೆಗೆ ಎಳೆಯತಕ್ಕಂಥ ಒಂದು ಅವಕಾಶವನ್ನು ಅಳವಡಿಸಬೇಕು. ಆ ರೀತಿ ನಮ್ಮ ದೇಶದ ಜನಗಳ ಮನಸ್ಸನ್ನು ಈಗ ಪರಿವರ್ತಿಸುವ ಮೂಲಕ ನಮಗೆ ಬೇಕಾದ ಸಂಪತ್ತನ್ನು ಸೃಷ್ಟಿ ಮಾಡತಕ್ಕಂಥ ಅವಕಾಶ ವಿರುವುದರಿಂದ ನಮ್ಮ ಕೋರಿಕೆ ಈಡೇರಿಸುವುದಕ್ಕೆ ಸಾಧ್ಯವೇ, ಹಾಗೆಯೇ ಅದರ ಜೊತೆಗೆ ಅನೇಕ ಕಾಮಗಾರಿಗಳನ್ನು ಮತ್ತು ಉದ್ಯಮಗಳನ್ನು ಮಾಡುವುದಕ್ಕೆ ಸಾಧ್ಯವೇ ? ಆದರೆ ಅಷ್ಟೊಂದು ಬಂಡವಾಳವನ್ನು ಒದಗಿಸಿಲ್ಲವೆಂದು ನಾವು ಕೊಂಚ ಸಂಕೋಚ ಪಡಬೇಕಾದರೆ, ಈ ಡೆವಲಪ್‌ಮೆಂಟಿಗೆ ಕೊಡತಕ್ಕ ಹಣದಲ್ಲಿ ಸುಮಾರು 4-8 ಅನಗತ್ಯವಾದ ಬಾಬುಗಳಿಗೆ ಭಾಗಗಳಾಗಿ ಮಾಡಿದರೆ, ಕೇವಲ ಸ್ವಲ್ಪವಾಗಿ ಅದರಲ್ಲೂ ಸುಲಭವಾಗಿ ಆಗತಕ್ಕ ಕಾಮಗಾರಿಗಳಿಗೆ ಸಾಕಷ್ಟು ಪ್ರಯೋಜನವಾಗದೆ ಹಣದ ಕೊರತೆಯನ್ನು ಪಡಬೇಕಾದದು ಕಾಣುತ್ತದೆ. ಕೇವಲ ಹಳ್ಳಿಗೇ ಉಪಯೋಗ ಮಾಡತಕ್ಕ ಈ ಡೆವಲಪ್‌ಮೆಂಟ್ ಕಾರ್ಯಗಳ ಪೈಕಿ ಅದರಲ್ಲೂ ಹಳ್ಳಿಗಳಿಂದ ಹಳ್ಳಿಗೆ ಹೋಗುವುದಕ್ಕೆ ಅಗತ್ಯವಾಗಿರತಕ್ಕಂಥ ಈ ರಸ್ತೆ, ಮನೆ, ವ್ಯವಸಾಯ ಈ ವಿಚಾರಗಳಲ್ಲಿ ಹೆಚ್ಚಿಗೆ ಗಮನ ಕೊಡಬೇಕಾದರೆ ಈ ಕಾಮಗಾರಿಗಳಿಗಾಗಿ ಹೆಚ್ಚಿಗೆ ಹಣವನ್ನು ಸರ್ಕಾರ ಒದಗಿಸಿಕೊಡಬೇಕೆಂದು ನಾನು ಈ ಸಂಂಭರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಇನ್ನೊಂದು ಅತಿ ಮುಖ್ಯವಾದಂಥ ವಿಷಯ. ಈಗ ನಾವು ಇನ್ನು ಈ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟಿದ್ದೇವೆ. ಗ್ರಾಮ ಪಂಚಾಯಿತಿಯನ್ನು ಏರ್ಪಡಿಸುವ ಮೂಲಕ ಒಂದು ಸ್ಥಳ ಭದ್ರತೆಮಾಡುವ ಅವಕಾಶವನ್ನು ಇಂದು ಕಲ್ಪಿಸಿದ್ದೇವೆ. ಈ ಸಂದರ್ಭದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಇಲಾಖೆ ಎನ್ನುವುದು ಮಾಡಬೇಕಾದ ಕೆಲಸ ಬಹಳವಾಗಿದೆ. ಈ ಡೆವಲಪ್‌ಮೆಂಟಿಗೆ ಈ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್, ಬಹಳ ಮುಖ್ಯವಾಗಿ ಹಾಗೆಯೇ ಈ ಕೊ-ಆಪರೇಷನ್—ಇವು ಮೂರನ್ನು ಒಂದರಲ್ಲಿ ಸೇರಿಸಿ ಈ ಕೆಲಸವನ್ನು ನಡೆಸುವುದಾದರೆ ಬಲು ಉತ್ತಮ ರೀತಿಯಿಂದ ಆ ಡೆವಲಪ್‌ಮೆಂಟ್ ಕಾರ್ಯಗಳು ನಡೆಯುವುದಕ್ಕೆ ಸಾಧ್ಯವಿದೆ ಮತ್ತು ರೆವಿನ್ಯೂ ಏರಿಯಾವನ್ನೂ ಕೂಡ ಒಂದು ಬ್ಲಾಕಾಗಿ ಪರಿವರ್ತಿಸಿ ಆ ಏರಿಯಾದಲ್ಲಿ ಬೇಕಾದಂತಹ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಆ ರೀತಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸೂಚನೆಮಾಡುತ್ತಿದ್ದೇನೆ.

ಇನ್ನು ಭೂಕಂದಾಯದ ವಿಚಾರದಲ್ಲಿ ಹಾಗೆಯೇ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗಾಗಲೇ ನನ್ನ ಮಾನ್ಯ ಸ್ನೇಹಿತರನೇಕರು ಭೂಕಂದಾಯ ಹೆಚ್ಚಿದೆ ಎಂದು ಹೇಳಿದ್ದಾರೆ. ಆದರೆ ನಾನು ಎಸ್ಟಾಬ್ಲಿಷ್‌ಮೆಂಟಿನಲ್ಲಿ ಖಂಡಿತ ಹೆಚ್ಚಿಲ್ಲವೆಂದು ಹೇಳುತ್ತೇನೆ. ಏಕೆಂದರೆ ಕಂದಾಯವನ್ನು ನಿಗದಿ ಮಾಡಬೇಕಾದರೆ ಭೂಮಿಯಿಂದ ಬರತಕ್ಕ ವರಮಾನ ಈಗ ಶೇಕಡ 6 ರಷ್ಟು ಹೆಚ್ಚಾಗಿದೆ. ಆದರೂ ಕೂಡ ಹಿಂದೆ

(ಶ್ರೀ ಡಿ. ಮೂಕಪ್ಪ)

ಮಾಡಿರತಕ್ಕಂಥ ವರಮಾನದ ಆಧಾರದ ಮೇಲೆ ನಿಗದಿ ಮಾಡಿದ್ದಂತಹ ಕಂದಾಯವನ್ನು ವಸೂಲುಮಾಡದೆ ಇರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಈ ಭೂಕಂದಾಯದ ಜೊತೆಗೆ ರೆವಿನ್ಯೂ ಶಾಖೆಯೊಳಗೆ ಇನ್ನೊಂದು ತಾಲ್ಲೂಕ್ ಶಾಖೆಯೊಂದಿದೆ. ಇದರಲ್ಲಿರತಕ್ಕ ಆಡಳಿತ ವಿಚಾರವನ್ನು ಹೇಳುವುದಾದರೆ, ಇದು ಸಾಧಾರಣವಾಗಿ ಎಲ್ಲಾ ಜನಗಳಿಗೂ ಕೂಡ ಒಂದು ಪ್ರಮುಖ್ಯ ಶಾಖೆಯಾಗಿದೆ. ಆ ಶಾಖೆಯಲ್ಲಿರತಕ್ಕ ಮುಖ್ಯಾಧಿಕಾರಿಗಳು ತಾಲ್ಲೂಕ್ ತಹಸೀಲ್‌ದಾರರ್ರು ಅವರು ಮಾಡಬೇಕಾದ ಕೆಲಸ ಅವರ ಕ್ಷೇತ್ರದಲ್ಲಿ ಬಹಳ ಇದೆ. ಆ ರೀತಿ ಹೆಚ್ಚಿನ ಕೆಲಸಗಳನ್ನು ಮಾಡುವ ಸಂದರ್ಭದಲ್ಲಿ ಮುಖ್ಯವಾಗಿ ಅವರಿಗೆ ವಾಹನ ಸೌಕರ್ಯವಿಲ್ಲದೇ ಇರುವುದು ತುಂಬಾ ವಿಷಾದಕರವಾಗಿದೆ. ಅದಕ್ಕಾಗಿಯೇ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ತಹಸೀಲ್‌ದಾರರಾಗಿರುವವರಿಗೆ ಒಂದು ವಾಹನ ಸೌಕರ್ಯವನ್ನು ಕಲ್ಪಿಸಿಕೊಟ್ಟು, ಇನ್ನೂ ಹೆಚ್ಚಿನ ರೀತಿಯಲ್ಲಿ ಅವರ ಸೇವೆಯನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡುವುದು ಒಳ್ಳೆಯದು.

ಇನ್ನೊಂದು ವಿಷಯ. ನಮ್ಮ ಮಲೆನಾಡಿನ ಪ್ರಾಂತದಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಸಾಧಾರಣವಾಗಿ ಹುಲ್ಲಿನ ಮನೆಗಳೇ ಇರುತ್ತವೆ. ಅವೇ ಬಹಳ ಹೆಚ್ಚಾಗಿವೆ. ಆದುದರಿಂದ, ಅಂತಹ ಪ್ರದೇಶಗಳಲ್ಲಿ ಆಗಾಗ್ಗೆ ಹುಲ್ಲಿನ ಮನೆಗಳು ಅಗ್ನಿಗೆ ಆಹುತಿಯಾಗಿ ಅನೇಕ ಸಂದರ್ಭಗಳಲ್ಲಿ ಜನರು ಕಷ್ಟ ನಷ್ಟಗಳಿಗೀಡಾಗಿರತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಲಿದ್ದೇವೆ; ಕೇಳುತ್ತಲಿದ್ದೇವೆ. ಅಂತಹ ಸಂದರ್ಭಗಳಲ್ಲಿ ಒಂದುವಿಶೇಷ ಅನುಕೂಲಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಒಂದೊಂದು ಅಗ್ನಿ ಶಮನ ಯಂತ್ರವನ್ನು ದೊರಕಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತಿದ್ದೇನೆ. ಹಾಗೆಯೇ ನನ್ನ ಮಾನ್ಯಸ್ನೇಹಿತರು ಇನ್ನೊಬ್ಬರು ಹೇಳಿದ ಹಾಗೆ ಖಂಡಿತವಾಗಿ ಗ್ರಾಮಾಧಿಕಾರಿಗಳು ರೆವಿನ್ಯೂ ಇಲಾಖೆಯಲ್ಲಿ ಖಾತೆಬದಲಾವಣೆ ಮಾಡುವ ವಿಚಾರದಲ್ಲಿ ಬಹಳ ನಿಧಾನವಾಗುತ್ತಿದೆ ಎಂದುಹೇಳಿದರು; ಅದು ನಿಜ. ಒಂದೊಂದು ಸಂದರ್ಭದಲ್ಲಿ ಖಾತೇದಾರ ಯಾವನೋ ಇರುತ್ತಾನೆ, ಕಂದಾಯ ಕೊಡುವವನೇ ಒಬ್ಬನು ಇರುತ್ತಾನೆ, ಸಾಗುಮಾಡುವವನೇ ಬೇರೊಬ್ಬನು—ಹೀಗಾಗಿ ಅರ್ಜಿಗಳನ್ನು ಖಾತೆಯ ಬದಲಾವಣೆಗೋಸ್ಕರ ಕೊಟ್ಟು 15-20 ವರ್ಷಗಳಾದರೂ ಆರೀತಿ ಬದಲಾವಣೆಯಾಗದೇ ಇರುವುವು ಇವೊತ್ತಿಗೂ ಅನೇಕವಿವೆ. ಹೀಗಿರುವುದು ಖಂಡಿತ ಸರಿಯಲ್ಲ. ಇದನ್ನು ಸಾಧ್ಯವಾದ ಮಟ್ಟಿಗೂ ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ.

ಇನ್ನು ಕ್ಷಾಮಪರಿಹಾರದ ವಿಷಯ. ಕ್ಷಾಮ ಎಂದರೆ ಎರಡು ನಮೂನೆಗಳಾಗಿವೆ. ಒಂದು ಮಳೆ ಇಲ್ಲದೆ ಬರತಕ್ಕ ಕ್ಷಾಮ. ಇನ್ನೊಂದು ಮಳೆ ಹೆಚ್ಚಾಗಿ ಬರತಕ್ಕ ಕ್ಷಾಮ. ಸಾಧಾರಣವಾಗಿ ನಮ್ಮ ಪ್ರಾಂತದಲ್ಲಿ ಮಳೆ ಹೆಚ್ಚಾಗಿ ಬರತಕ್ಕ ಕ್ಷಾಮವೇ ಹೆಚ್ಚು. ಬಹುಶಃ ತಾವು ಕೇಳಿರಬಹುದು. ಹೋದವರ್ಷ ಬಹುಭಾಗದ ಜನಗಳು ಹೆಚ್ಚು ಮಳೆ ಪ್ರಯುಕ್ತ ನೀರುಪಾಲಾದರು. ಅಂತಹವರಿಗೆ ಪರಿಹಾರ ಕೊಡಬೇಕು. ನೀರಿನಲ್ಲಿ ಮುಳುಗಿಹೋದವರ ಫ್ಯಾಮಿಲಿಗೆ ಮತ್ತು ಬೆಳೆಗಳನ್ನು ಈ ನೀರಿನದೆಸೆಯಿಂದ ನಷ್ಟ ಮಾಡಿಕೊಂಡವರಿಗೆ, ಪರಿಹಾರ ಕೊಡುವ ಸಂದರ್ಭ ಆಗಾಗ್ಗೆ ಬಂದೇ ಬರುತ್ತದೆ. ಅಂತಹ ಸಂದರ್ಭದಲ್ಲಿಯೂ ಕೂಡ ಈ ಕ್ಷಾಮ ಪರಿಹಾರ ನಿಧಿಯೊಂದನ್ನು ಏರ್ಪಾಡುಮಾಡಬೇಕು. ಆ ರೀತಿಯಾಗಿ ಧನಲುನಷ್ಟವಾಗಿ ಯಾವರೀತಿಯಲ್ಲೂ ಹಣಸಹಾಯವಿಲ್ಲದೆ ಇರುವವರಿಗೆ ಹೆಚ್ಚಿನ ಸಹಾಯವನ್ನು ಮಾಡುವುದಕ್ಕೆ ಸರ್ಕಾರದವರು ತಕ್ಕ ಅವಕಾಶವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಅಪೇಕ್ಷಪಡುತ್ತೇನೆ.

ಇನ್ನು ಜಮೀನ್ದಾರಿ ರದ್ದಿಯಾತಿ ಇನಾಮುಗಳ ವಿಷಯ. ಈ ಬಗ್ಗೆ ಈ ದಿನ ಮತ್ತು ಎರಡುಮೂರು ಚರ್ಚೆಯಾಗುತ್ತಿರುವುದನ್ನು ಕೇಳುತ್ತಿದ್ದೇನೆ ಮತ್ತು ನೋಡುತ್ತಿದ್ದೇನೆ. ಆದರೆ ಈ ಬಗ್ಗೆ ಹೇಳುವುದಾದರೆ ಜಮೀನ್ದಾರೀ ಪದ್ಧತಿಯನ್ನು ರದ್ದುಮಾಡಿ ಹಣವನ್ನು ಪಾವತಿ ಮಾಡಿರುವುದು ಬಹಳ ವಿರಳ. ಸಾಧಾರಣವಾಗಿ ದೇಶ ಸ್ವತಂತ್ರ್ಯವನ್ನು ಪಡೆದಂದಿನಿಂದ ಭೂಸುಧಾರಣೆ ದೇಶದಲ್ಲಿ ಕೂಡಲೇ ಆಗಬೇಕೆಂದು ಹೇಳಿದ್ದೇನೆ. ಆದರೂಕೂಡ ಇಲ್ಲಿರುವವರ ಕಣ್ಣಿಗೆ ಬಣ್ಣ ಹಾಕಿದಂತೆ ಈ ಬೇಡಿಕೆಯನ್ನು ಮುಂದಿಟ್ಟಿದ್ದಾರೆ ಮತ್ತು ಅನೇಕ ಸಂದರ್ಭಗಳಲ್ಲಿ ಭೂಸುಧಾರಣೆ, ಭೂಸುಧಾರಣೆ ಎಂದು ಉಪದೇಶಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಎಲೆಕ್ಷನ್ ಟೈಮಿನಲ್ಲಿ ಆ ರೀತಿ ಹೇಳಲೇಬೇಕು.

ಶ್ರೀ ಡಿ. ಮೂಕಪ್ಪ.—ಇದುವರೆಗೂ ಅದು ಆಗದೇ ಇರುವುದು ಬಹಳ ವಿಷಾದಕರ. ಆದುದರಿಂದ ಈಗಲೂ ಕೂಡ ಈ ಕಾರ್ಯಕ್ರಮ ದೇಶದ ಸಾಮಾನ್ಯ ಜನಗಳಿಗಾಗಿಯಾದರೂ ಬಹಳ ಜಾಗ್ರತೆಯಾಗಿ ಆಗಬೇಕಾದುದು ಅತ್ಯಗತ್ಯ, ಹಾಗೆಯೇ ಆದಷ್ಟು ಜಾಗ್ರತೆಯಾಗಿ ಈ ಕ್ರಮ ಕೈಗೊಳ್ಳಲಿ ಎಂದು ಹಾರೈಸುತ್ತೇನೆ.

ಇನ್ನೊಂದು ವಿಷಯ; ಅಕ್ವಿಸಿಷನ್ ಎಂದರೆ ಸಾರ್ವಜನಿಕರಿಗೆ ಬೇಕಾದಂಥ ಜಮೀನುಗಳನ್ನು ಅಕ್ವೈರು ಮಾಡತಕ್ಕ ಕ್ರಮ ಇದರಲ್ಲಿದೆಯೆಂದು ಇದೆ. ಬಹುಶಃ ಅಕ್ವೈರುಮಾಡಬೇಕಾದ ಸಂದರ್ಭದಲ್ಲಿ ಏತಕ್ಕೆ ಅಕ್ವೈರು ಮಾಡಬೇಕೆಂದು ಕೇಳುತ್ತಾರೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಸಾರ್ವಜನಿಕರ ಹಿತಕ್ಕಾಗಿ ಮತ್ತು ಅನುಕೂಲಕ್ಕಾಗಿ ಒಂದು ಸ್ವತ್ತನ್ನು ತೆಗೆದುಕೊಳ್ಳಬೇಕೆಂದು ಅಪೇಕ್ಷೆ ಪಟ್ಟಿರುವಾಗ, ಸಾರ್ವಜನಿಕರ ಹಿತದೃಷ್ಟಿಯಿಂದ ಜಾಗ್ರತೆಯಾಗಬೇಕು. ವಿನಾ ಕಾರಣ ಅಕ್ವಿಜಿಷನ್ ರಿಕಾರ್ಡುಗಳು ನಿಧಾನವಾಗುತ್ತಿರುವುದಕ್ಕೆ ನಾನು ತುಂಬ ವಿಷಾದಪಡುತ್ತೇನೆ ಹೀಗೆ ಬಹು ಜನರಿಗೆ ಬೇಕಾಗಿರುವ ಅಥವಾ ಬಹುಜನರಿಗೆ ಅನುಕೂಲವಾಗತಕ್ಕ ಭೂಸುಧಾರಣೆಯ ಈ ಕಾರ್ಯವನ್ನು ಸರಕಾರದವರು ಜಾಗ್ರತೆಯಾಗಿ ಪರಿಶೀಲನೆಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಬೇಗನೆ ಕೈಗೊಳ್ಳಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಯನ್ನರ್ಪಿಸಿ ನಾನು ಈಗ ಸಭೆಯ ಮುಂದಿರತಕ್ಕ ಡಿಮ್ಯಾಂಡುಗಳನ್ನೆಲ್ಲ ಅನುಮೋದಿಸುತ್ತೇನೆ.

ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಸ್ವಾಮಿ, ಈ ದಿವಸ ಸರ್ಕಾರದವರು ನಮ್ಮ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡುಗಳಲ್ಲಿ ನಾನು ಪ್ರಥಮತಃ ಈ ಡಿಮ್ಯಾಂಡ್ ನಂ. 32; ಕ್ಷಾಮನಿವಾರಣೆಯ ಬಗ್ಗೆ 1960-61 ನೆಯ ಸಾಲಿಗೆ ಮಂಜೂರು ಮಾಡಬೇಕೆಂದು ಕೇಳಿರತಕ್ಕ 62,47,000 ರೂಪಾಯಿಗಳ ಬಗ್ಗೆ ಎರಡು ಮಾತುಗಳನ್ನಾಡ ಬೇಕೆಂದಿದ್ದೇನೆ. ಸಾಧಾ

ರಣವಾಗಿ ಈ ಒಂದು ಕ್ಷಾಮನಿವಾರಣಾ ನಿಧಿಯು ಅಂಕಿ ಅಂಶಗಳನ್ನು ಪ್ರತಿಯೊಂದು ವರ್ಷದ ಬಡ್ಜೆಟ್ಟಿನಲ್ಲೂ ನಾವು ನೋಡುತ್ತಲೇ ಇದ್ದೇವೆ. ಆದರೆ ನಮ್ಮ ಮೈಸೂರು ರಾಜ್ಯದಲ್ಲಿ ಕೆಲವು ಜಿಲ್ಲೆಗಳೆಂದರೆ—ಕೋಲಾರ, ಬೆಂಗಳೂರು, ಚಿತ್ರದುರ್ಗ, ಬಳ್ಳಾರಿ ಮತ್ತು ಬಿಜಾಪುರ ಈ 5 ಜಿಲ್ಲೆಗಳಲ್ಲಿ ಈ ಕ್ಷಾಮದ ಹಾವಳಿ ಆಗಾಗ್ಗೆ ಉಲ್ಬಣಸ್ಥಿತಿಗೆ ಬರುತ್ತಿರುವುದು ಸಹಜವಾಗಿಯೇ ಇದೆ. 1950ನೆಯ ಸಾಲಿನಲ್ಲಿ ಕೋಲಾರ ಜಿಲ್ಲೆಯ ಒಂದು ವಿಚಾರವನ್ನೇ ಹೇಳುವುದಾದರೆ ಆಗ ಆ ಜಿಲ್ಲೆಯ ಆವರೇಜ್‌ರೇಯಿನ್‌ಫಾಲ್ ಕೇವಲ 28 ಇಂಚು ಮಾತ್ರ ಇತ್ತು. ಆದರೆ ಈಗ ಅದು ಬರುಬರುತ್ತಾ 13–14 ಇಂಚುಗಳಿಗೆ ಇಳಿದಿದೆ. ಅಂದರೆ ಹೀಗೆ ಪ್ರಕೃತಿ ಸ್ಥಿತಿಗತಿಗಳು ದಿನದಿನಕ್ಕೂ ಬದಲಾವಣೆಯಾಗುತ್ತಿದೆ. ಇಂಥ ಪರಿಸ್ಥಿತಿ ಈಗಾಗಲೇ ನಾನು ಹೇಳಿದ 5 ಜಿಲ್ಲೆಗಳಲ್ಲೂ ಅನೇಕಾವರ್ತಿ ಉದ್ಭವವಾಗಿದೆ. ಈ ವಿಚಾರದಲ್ಲಿ ನಾವು ಕಳೆದ ಎರಡು ವರ್ಷಗಳಿಂದಲೂ ನಮ್ಮ ಸರ್ಕಾರದವರಿಗೆ ಈ ಪ್ರಾಂತ್ಯಗಳ ಒಂದು ಆಖೈರು ಭವಿಷ್ಯವನ್ನು ನಿರ್ಧರ ಮಾಡತಕ್ಕ ಬಗ್ಗೆ ಒಂದುಫ್ಯಾಮಿನ್ ಬೋರ್ಡ್‌ನ್ನು ರಚಿಸ ಬೇಕೆಂದು ಪದೇ ಪದೇ ಕೇಳುತ್ತಲೇ ಇದ್ದೇವೆ. ಈ ವಿಚಾರದಲ್ಲಿ ನಮ್ಮ ರೆವಿನ್ಯೂ ಮಂತ್ರಿಗಳೂ ಮತ್ತು ಮುಖ್ಯ ಮಂತ್ರಿಗಳೂ ಕೇಂದ್ರದವರೊಡನೆ ವ್ಯವಹಾರ ನಡೆಸಿ ಜಾಗ್ರತ ಇದನ್ನು ರಚಿಸುತ್ತೇವೆಂಬುದಾಗಿ ನಮಗೊಂದು ಭರವಸೆಯನ್ನು ನೀಡಿದ್ದರು. ಆದರೆ ಇಲ್ಲಿಯವರೆಗಾದರೂ ಈ ವಿಚಾರದಲ್ಲಿ ಸರ್ಕಾರದವರ ಗಮನ ಎಷ್ಟುದೂರ ಮುಂದೆ ಸಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಾಗಲೀ ಮಾನ್ಯಹಣಕಾಸಿನ ಸಚಿವರ ಭಾಷಣದಲ್ಲಾಗಲಿ ಈ ವಿಚಾರದಲ್ಲಿ ಒಂದು ಚಕಾರವನ್ನು ಸಹ ಹೇಳಿಲ್ಲ. ಇದನ್ನು ನೋಡಿದರೆ ಸರ್ಕಾರದವರೇಕೋ ಏನೋ ಈ 5 ಜಿಲ್ಲೆಗಳ ವಿಚಾರದಲ್ಲಿ ಆ ಒಂದು ಮಲತಾಯಿ ಭಾವನೆಯಿಂದ ನೋಡುತ್ತಿದ್ದಾರೆಂದರೆ ಇದರಲ್ಲಿತಪ್ಪೇನು ಇಲ್ಲ. ಈ 5 ಜಿಲ್ಲೆಗಳಲ್ಲೂ ಮಳೆ ಬಾರದೆ ಜನರ ಜೀವನಕ್ಕೆ ತುಂಬಾ ತೊಂದರೆಯಾಗುತ್ತದೆ. ಜನರ ಕಷ್ಟವನ್ನಂತೂ ಹೇಳತೀರದಾಗಿದೆ. ಸರ್ಕಾರದವರು ಕೈಗೊಂಡಿದ್ದ ಪಂಚವಾರ್ಷಿಕ ಯೋಜನೆಗಳಲ್ಲಿ ಮೊದಲನೆಯದು ಮತ್ತು ಎರಡನೆಯ ಯೋಜನೆಗಳೆಲ್ಲ ಮುಗಿದು ಹೋದುವು. ಈಗ ಮೂರನೇ ಪಂಚವಾರ್ಷಿಕ ಯೋಜನೆ ಹೊರ ಬೀಳುವುದರಲ್ಲಿದೆ. ಇಷ್ಟೆಲ್ಲ ಆಗಿದ್ದರೂ ಸರ್ಕಾರದವರು ಈ 5 ಜಿಲ್ಲೆಗಳ ಒಂದು ಆಖೈರು ಭವಿಷ್ಯವನ್ನು ನಿರ್ಧರಿಸುವ ವಿಚಾರದಲ್ಲಿ ಏಕೆ ಅನಮರ್ಥರಾಗಿದ್ದಾರೆ ಎಂಬ ಬಗ್ಗೆ ಮಾನ್ಯ ರೆವಿನ್ಯೂ ಸಚಿವರು ಉತ್ತರ ಕೊಡುವಾಗ ಈ ಅಂಶವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಾನೀಗ ಲೋಕಲ್ ಡೆವಲಪ್‌ಮೆಂಟಿನ ವಿಚಾರದಲ್ಲಿ ಎರಡು ಮಾತುಗಳನ್ನಾಡ ಬೇಕಾಗಿದೆ. ಈ ಗ್ರಾಮಾಂತರಗಳ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರದವರ ಮನೋಭಾವವೇ ಒಂದು ರೀತಿಯಾಗಿದೆ. ಈ ಬಾಬಿಗೆ ಸರ್ಕಾರದವರು ಒದಗಿಸಿರುವ ಹಣವನ್ನು ಖರ್ಚುಮಾಡತಕ್ಕ ವಿಚಾರದಲ್ಲಿ ಸರ್ಕಾರದವರೆ ಅನೇಕ ಅಡಚಣೆಗಳನ್ನು ತಂದು ಹಾಕಿದ್ದಾರೆ. ಈ ಕೆಲಸ ಕಾರ್ಯಗಳ ಬಗ್ಗೆ ಹಳ್ಳಿಗಾಡಿನ ಜನರು ಸಹಾಯ–ಸಹಕಾರಗಳನ್ನು ನೀಡಬೇಕೆಂದೂ ಗ್ರಾಮಪಂಚಾಯಿತಿಗಳು ಶೇಕಡ 12½ ಕಾಂಟ್ರಿಬ್ಯೂಟ್ ಮಾಡಬೇಕೆಂದೂ ಅನೇಕ ಕಂಡೀಷನ್‌ಗಳನ್ನು ಹಾಕಿದ್ದಾರೆ. ಈ ದಿವಸ ಸರ್ಕಾರದವರು ನೀರಿನ ಹಾಗೆ ದುಡ್ಡನ್ನು ಸುರಿದು ಬೆಂಗಳೂರು ನಗರದಲ್ಲಿ ಸುಂದರ ರಸ್ತೆಗಳನ್ನು ಮಾಡುತ್ತಿದ್ದಾರಲ್ಲ ಅಂದರೆ ಆ ಲಾಲ್‌-ಬಾಗ್, ಕಬ್ಬನ್ ಪಾರ್ಕ್, ಈ ವಿಧಾನಸೌಧ ಮತ್ತು ಲೆಜಿಸ್ಲೇಟರ್ಸ್ ಹೋಂ ಇವುಗಳಿಗೆಲ್ಲ ಶೇಕಡ 12½ಯಂತೆ ಯಾರು ಕಾಂಟ್ರಿಬ್ಯೂಟ್ ಮಾಡಿದರು ? ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುತ್ತಿರುವ ಶೇಕಡ 82ರಷ್ಟು ಜನರಿಂದ ಹಣವನ್ನು ಸುಲಿಗೆ ಮಾಡಿಕೊಂಡು ಬಂದು ಈ ನಗರದಲ್ಲಿ ಈ ಭವ್ಯ ನಿರ್ಮಾಣಗಳನ್ನೆಲ್ಲಾ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳ ಕಡೆ ಕೇವಲ ಕುಡಿಯುವ ನೀರಿನ ಬಾವಿಗಳಿಗೆ ಹಣಕೊಡಿರೆಂದರೆ ಅದಕ್ಕೂ ಶೇಕಡ 12½ ಕೊಡಬೇಕೆಂದರೆ ಈ ಸರ್ಕಾರದವರ ಧೋರಣೆಗೆ ಏನೆಂದು ಹೇಳಬೇಕೋ ಅದು ನನಗೆ ತಿಳಿಯದಾಗಿದೆ. ಆದಕಾರಣ ಸರ್ಕಾರದವರು ಈ ದಿವಸ ಈ ಲೋಕಲ್ ಡೆವಲಪ್‌ಮೆಂಟ್ ಬಾಬಿನಲ್ಲಿ ಆಗಲಿ, ಈ N. E. S. ಬಾಬಿನಲ್ಲಾಗಲೀ ಒದಗಿಸತಕ್ಕ ಹಣದ ಬಗ್ಗೆ ಸರ್ಕಾರದವರೇನು ಈಗೊಂದು ಷರತ್ತು ಹಾಕಿದ್ದಾರೋ ಅದನ್ನು ಗ್ರಾಮಗಳಿಗೆ ಅತ್ಯವಶ್ಯಕವಾಗಿ ಆಗ ಬೇಕಾದ ಕನಿಷ್ಠ ಬೇಡಿಕೆಗಳೇನಿರುತ್ತವೆ ಅವುಗಳಿಗೆ ಯಾವ ಈ ನಿರ್ಬಂಧಗಳೂ ಇಲ್ಲದಂತೆ ಹಣವನ್ನು ಖರ್ಚು ಮಾಡತಕ್ಕ ಏರ್ಪಾಡನ್ನು ಸರ್ಕಾರದವರು ಕೂಡಲೇ ಮಾಡಬೇಕು. ಅನೇಕ ಗ್ರಾಮಗಳಲ್ಲಿ ರಸ್ತೆಗಳಿಲ್ಲ. ಕುಡಿಯುವ ನೀರಿನ ಬಾವಿಗಳಿಲ್ಲ. ನಮ್ಮ ಆ ಆಂಧ್ರ ಮತ್ತು ಮದ್ರಾಸ್ ಗಡಿಗಳ ಸಮೀಪದಲ್ಲಿರತಕ್ಕ ಅನೇಕ ಹಳ್ಳಿಗಳ ಪರಿಸ್ಥಿತಿ ಏನಿದೆ ಯೆಂಬುದನ್ನು ಈ ಸರ್ಕಾರದ ಅಧಿಕಾರಿಗಳಾರೂ ಅಲ್ಲಿಗೆ ಹೋಗಿ ನೋಡಿಲ್ಲ. ಹೀಗೆ ನೂರಾರು ಗ್ರಾಮಗಳು ತೊಂದರೆಗೊಳಗಾಗಿವೆ. ಇಲ್ಲಿಯವರೆಗೂ ಸರ್ಕಾರದವರೊಂದು ಯೋಜನೆಯನ್ನು ಈ ಬಗ್ಗೆ ತಯಾರಿಸಿಲ್ಲ. ಇನ್ನು 5 ಅಥವಾ 6 ವರ್ಷಗಳಲ್ಲಿ ನಮ್ಮ ರಾಜ್ಯದ ಎಲ್ಲ ಗ್ರಾಮಗಳಿಗೂ ಕುಡಿಯುವ ನೀರಿನ ಯೋಜನೆ ಮತ್ತು ರಸ್ತೆಗಳನ್ನು ಮಾಡುವುದು ಇಂಥ ಕನಿಷ್ಠ ಬೇಡಿಕೆಗಳ ಬಗ್ಗೆಯಾದರೂ ಸರ್ಕಾರದವರೊಂದು ಯೋಜನೆಯನ್ನು ಕೂಡಲೇ ಸಿದ್ಧಗೊಳಿಸಬೇಕೆಂದು ಹೇಳುತ್ತೇನೆ. ಆದರೆ ಸರ್ಕಾರದವರು ಈಗ ನಡೆಸುತ್ತಿರುವ ಧೋರಣೆಯನ್ನು ನೋಡಿದರೆ ಅಂದರೆ ಈಗಾಗಲೇ ಮಾನ್ಯ ಮಂತ್ರಿಗಳಾದ ಸುಬ್ರಹ್ಮಣ್ಯ ಅವರು 5 ವರ್ಷಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಏರ್ಪಾಡು ಮಾಡುತ್ತೇವೆಂದು ಏನು ಹೇಳಿದ್ದರೋ ಅದು 5 ವರ್ಷಗಳಲ್ಲ 30 ವರ್ಷಗಳಾದರೂ ಆಗುವುದಿಲ್ಲವೆಂದು ನಾನೀಗ ತಿಳಿಸಬೇಕಾಗಿದೆ. ಇದಕ್ಕೆ ನನ್ನ ಒಂದು ಸಲಹೆಯೇನೆಂದರೆ ಈಗ ಸರ್ಕಾರದವರು ಈ ರೂರಲ್ ಡೆವಲಪ್‌ಮೆಂಟ್ ಫಂಡಿನ ಖರ್ಚಿನ ಬಗ್ಗೆ ವಿಧಿಸಿರತಕ್ಕ ಷರತ್ತುಗಳನ್ನೆಲ್ಲಾ ಈ ಕನಿಷ್ಠ ಬೇಡಿಕೆಗಳಾದ ಕುಡಿಯುವ ನೀರಿನ ಬಾವಿ ಮತ್ತು ರಸ್ತೆಗಳ ವಿಚಾರದಲ್ಲಾದರೂ ಸಂಪೂರ್ಣವಾಗಿ ಮನ್ನಾ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಕೋಲಾರ ಜಿಲ್ಲೆಯಲ್ಲಿ ಈ N. E. S. ಬ್ಲಾಕ್‌ಗಳು ಜಿಲ್ಲೆಯ ಶೇಕಡ 68 ರಷ್ಟು ಭಾಗವನ್ನು ಕವರ್ ಮಾಡಿಕೊಂಡಿವೆ. ಆದರೆ ಈ ಬ್ಲಾಕ್‌ಗಳು ಈಗ ಇರುವುದೆಲ್ಲ ಎಲ್ಲೆಲ್ಲಿ ಕಾಂಗ್ರೆಸ್‌ನವರು ಗೆದ್ದಿದ್ದಾರೋ ಆ ಪ್ರದೇಶಗಳಲ್ಲಿ ಮಾತ್ರ ಹೆಚ್ಚಾಗಿರುತ್ತವೆ. ಆದರೆ ಆ ಆಂಧ್ರ ಮತ್ತು ಮದ್ರಾಸ್ ಗಡಿಗಳಿಗೆ ಸಮೀಪದಲ್ಲಿರುವ ನಮ್ಮ ಕೆಲವು ಗ್ರಾಮಗಳಿಗೆ ಒಂದಾವರ್ತಿ ಮಾನ್ಯ ಡೆಪ್ಯುಟಿ ಮಿನಿಷ್ಟರಾದ ಶ್ರೀ ಲಿಂಗಾರೆಡ್ಡಿಯವರು ಹೋಗಿದ್ದರು. ಆಗ ಆ ಗ್ರಾಮಗಳ ಪರಿಸ್ಥಿತಿ ನೋಡಿ ಅವರಿಗೆ ತಮ್ಮ ಲಿಪ್‌-ಸಿಂಪತಿಯನ್ನು ತೋರಿಸಿದ್ದರು. ಆ ಸಮಯದಲ್ಲಿ ಆ ಜನರಿಗೆ ಮುಂದೆ ಈ N. E. S. ಬ್ಲಾಕುಗಳನ್ನು ಹಂಚತಕ್ಕ ಕಾಲದಲ್ಲಿ

(ಶ್ರೀ ಇ. ನಾರಾಯಣಗೌಡ)

ಏನಾದರೂ ಸಹಾಯ ಮಾಡೋಣವೆಂದು ಹೇಳಿದ್ದರು. ಆದರೆ ಆ ಬ್ಲಾಕುಗಳನ್ನು ಹಂಚುವಾಗ ಮಾತ್ರ ಆ ಗ್ರಾಮಗಳನ್ನೇ ಸಂಪೂರ್ಣವಾಗಿ ಮರೆತರು. ಇಂಥ ವಿಚಾರಗಳು ಅವರ ಮನದಲ್ಲಿ ಹೇಗಿರುತ್ತವೆ? ಈ ದಿವಸ ಸರ್ಕಾರದವರು ಈ ಲೋಕಲ್ ಡೆವಲಪ್‌ಮೆಂಟ್ ಬಾಬಿನಲ್ಲಿ ಒದಗಿಸಿರತಕ್ಕ ಹಣವೆಲ್ಲ ಲ್ಯಾಪ್ಸಾಗಿ ಹೋಗುತ್ತಿದೆ. ಕಾರಣವೇನೆಂದರೆ ಸರ್ಕಾರಕ್ಕೆ ಸಾರ್ವಜನಿಕರ ಬೆಂಬಲ ಪಡೆಯಲು ಸಾಧ್ಯವಿಲ್ಲ. ಪಂಚಾಯಿತಿಗಳವರಿಗೆ ಹಣ ಕೊಡಲು ಶಕ್ತಿಯಿಲ್ಲ. ಹೀಗಿರುವಾಗ ಆ ಹಣವಿನ್ನು ಹೇಗೆ ಖರ್ಚಾಗುತ್ತದೆ? ನಮ್ಮ ಜಿಲ್ಲೆಯಲ್ಲಿ ಇಂಟೀರಿಯರ್ ಭಾಗದ ಹಳ್ಳಿಗಳು ಬಹಳ ಹಿಂದುಳಿದಿವೆ. ಆದುದರಿಂದ ನಮ್ಮ ಸರ್ಕಾರದವರು ಈ ಪ್ರಶ್ನೆಯನ್ನು ಒಂದು ರಾಜಕೀಯ ದೃಷ್ಟಿಯಿಂದ ನೋಡದೆ, ವಿರೋಧ ಪಕ್ಷದ ಸದಸ್ಯರ ಕ್ಷೇತ್ರಕ್ಕೆ ಈ ಬ್ಲಾಕುಗಳನ್ನು ಹಂಚಿದರೆ ನಾಳೆ ಅಲ್ಲಿನ ಜನರಿಗೆ ಈ ವಿರೋಧಪಕ್ಷದ ಸದಸ್ಯರಮೇಲೆ ಹೆಚ್ಚಿನ ಪ್ರೇಮ ಬೆಳೆದು ಮುಂದಕ್ಕೂ ಚುನಾವಣೆಯಲ್ಲಿ ಇವರೆ ಬರುತ್ತಾರೆಂಬ ಭಾವನೆಯಿಂದ ಆ ಹಿಂದುಳಿದ ಪ್ರದೇಶಗಳಿಗೆ ಸಲ್ಲಬೇಕಾದ ಸೌಲಭ್ಯಗಳನ್ನು ತಪ್ಪಿಸಬಾರದು. ಆ ಒಂದು ಭಯ ತಮಗಿರಬಹುದು. ಆದರೆ ಅದು ಈ ಪ್ರಶ್ನೆಗೆ ಸಂಬಂಧಿಸಿದುದಲ್ಲ ಸರ್ಕಾರದವರು ಈ ಪ್ರಶ್ನೆಯನ್ನು ಉದಾರ ಭಾವನೆಯಿಂದ ನೋಡಬೇಕೇಶಿವಾಯಿ ಇಂಥ ಪಕ್ಷಪಾತ ಭಾವನೆಯಿಂದ ನೋಡಬಾರದೆಂದು ದೇಶದ ಹಿತದೃಷ್ಟಿಯ ಕಡೆಗೆ ತಮ್ಮ ಗಮನ ಹೋಗಬೇಕೆಂದು ಹೇಳುತ್ತೇನೆ.

ಮೂರನೆಯದು ರೆವಿನ್ಯೂ ಆಡಳಿತ ವಿಚಾರದಲ್ಲಿ ಈಗ ತಾನೆ ನಮ್ಮ ಮಿತ್ರರಾದ ವೆಂಕಟೇಗೌಡರು ಹೇಳಿದರು. ಈಗಲೂ ರೆವಿನ್ಯೂ ಆಡಳಿತದಲ್ಲಿ ಸಾರ್ವಜನಿಕರಿಗೆ ಅದರಲ್ಲಿಯೂ ಹಳ್ಳಿಗಾಡಿನಲ್ಲಿರತಕ್ಕಂಥ ರೈತರಿಗೆ, ನಂಬಿಕೆ ಬಹಳ ಮಟ್ಟಿಗೆ ಕಡಮೆಯಾಗುತ್ತಿದೆ. ಏಕೆಂದರೆ ಸಾಧಾರಣವಾಗಿ ಒಂದು ಸಣ್ಣ ಕೆಲಸಕ್ಕೆ ತಾಲ್ಲೂಕು ಆಫೀಸಿಗೆ ಅರ್ಜಿಹಾಕಿಕೊಂಡರೆ, ವರ್ಷಾನುಗಟ್ಟಲೆ ತಿರುಗಿದರೂ ಕೆಲಸವಾಗುವುದಿಲ್ಲ. ತಾಲ್ಲೂಕು ಆಡಳಿತವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಮಾಡದೆ ಹೋದರೆ ನೀವು ಎಷ್ಟು ಖರ್ಚುಮಾಡಿದರೂ ಜನಗಳಿಗೆ ಉಪಯೋಗವಾಗುವುದಿಲ್ಲ. ಸೆಕ್ರೆಟೇರಿಯಟ್ಟಿಗೆ ಒಂದು ಕಾಗದ ಕಳುಹಿಸಿದರೆ ಅಕ್‌ನಾಲೆಡ್ಜ್‌ಮೆಂಟ್ ಕಳುಹಿಸುತ್ತಾರೆ; 15 ದಿವಸಗಳ ಮೇಲೆ ಒಂದು ಅರ್ಜಿ ವಿಚಾರವಾಗಿ ಇಂಥ ಕಾರ್ಯಕ್ರಮ ತೆಗೆದುಕೊಂಡಿದೆ ಎಂದು ಹೇಳಿಬಿಟ್ಟು ಒಂದು ಜವಾಬು ಕಳುಹಿಸುತ್ತೀರಿ; ಆದರೆ ತಾಲ್ಲೂಕು ಆಫೀಸಿಗೆ ಹೋದ ಕಾಗದಕ್ಕೆ ಜವಾಬೇ ಬರುವುದಿಲ್ಲ. ತಾಲ್ಲೂಕು ಲೆವೆಲ್ಲಿನಲ್ಲಿ ಸಹ ಸೆಕ್ರೆಟೇರಿಯಟ್ಟಿನಂತೆಯೇ ಆಡಳಿತವನ್ನು ಸುಭದ್ರವಾಗಿ ನಡೆಸದೆಹೋದರೆ, ನಿಮ್ಮ ಆಡಳಿತದ ದಕ್ಷತೆ ಚೆನ್ನಾಗಿಲ್ಲ ಎಂಬ ಕೆಟ್ಟಹೆಸರು ತಪ್ಪುವುದಿಲ್ಲ. ಮೊದಲು ತಾಲ್ಲೂಕು ಆಡಳಿತವನ್ನು ಸರಿಪಡಿಸಿ.

ಗ್ರಾಮಾಧಿಕಾರಿಗಳು ಹೊರಟುಹೋಗಲಿ ಎಂದು ನಾವೂ ನೀವೂ ಹೇಳಿರುವಾಗ, ಅವರಿಗೆ ಅಗ್ರತಾಂಬೂಲ ಕೊಟ್ಟು ಕಳುಹಿಸುವುದಕ್ಕೆ ಏನು ಕಷ್ಟ? ಅವರಿಗೆ ಸಾಕಾದಷ್ಟು ಪರಿಹಾರ ಕೊಟ್ಟು ತೆಗೆದುಬಿಡಿರಿ. ಗ್ರಾಮ ಪಂಚಾಯಿತಿಗಳು ನೇಮಕವಾಗುತ್ತಿವೆ. ನಿಮ್ಮ ಸರ್ಕಾರಿ ಅಧಿಕಾರಿಗಳನ್ನು ಅವುಗಳಿಗೆ ಕೊಟ್ಟು ಕೆಲಸಮಾಡಿಸಿದರೆ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ.

ತಾಲ್ಲೂಕು ಆಫೀಸಿಗೆ ಸರ್ವೆ ಡಿಪಾರ್ಟ್‌ಮೆಂಟಿನ ಒಬ್ಬ ಸರ್ವೇಯರನ್ನು ಕೊಟ್ಟು ತಾಲ್ಲೂಕಿನ ಎಲ್ಲಾ ಸರ್ವೆ ಕೆಲಸವನ್ನೂ ಆತ ನಿರ್ವಹಿಸುವುದೆಂದರೆ ಅಸಾಧ್ಯ. ಒಬ್ಬ ಸರ್ವೇಯರ್ ಇರುತ್ತಾನೆ; ಹತ್ತು ಜನ ಮಾಡುವ ಕೆಲಸ ಅವನಿಗೆ ಇರುತ್ತದೆ. ಇನಾಂ ಅಬಾಲಿಶನ್ ಆಕ್ಟ್ ಆದಮೇಲಂತೂ, ಅವರ ಕೆಲಸ ಜಾಸ್ತಿಯಾಗಿದೆ. ಈಗ ಜೋಡಿ ಇನಾಂಗಳನ್ನು ರದ್ದುಪಡಿಸಿರುವುದರಿಂದ ಜೋಡಿದಾರರ ಹಿಡಿತದಿಂದ ರೈತರನ್ನು ಬಿಡುಗಡೆ ಮಾಡುವುದಕ್ಕೆ ಗ್ರಾಮಗಳನ್ನು ಮೊದಲು ಸರ್ವೆ ಮಾಡಬೇಕು. ರೈತರ ಸ್ವಾಧೀನದಲ್ಲಿರತಕ್ಕಂಥ ಹಿಡುವಳಿಗಳನ್ನು ಅವರ ಹೆಸರಿಗೆ ಒಂದು ಖಾತೆ, ಪಟ್ಟೆರೀತಿಯಲ್ಲಿ, ದಾಖಲು ಮಾಡಿಸಿಕೊಡಬೇಕು. ಆದುದರಿಂದ ಸರ್ವೆ ಕೆಲಸ ಸಲೀಸಾಗಿ ನಡೆಯುವಂತೆ ಏರ್ಪಾಡು ಮಾಡಬೇಕು ಕೋಲಾರ ಜಿಲ್ಲೆಯಲ್ಲಿ ಸರ್ವೆ ವಿಷಯದಲ್ಲಿ 10-12 ವರ್ಷಗಳಿಂದಲೂ ಏನೂ ಕ್ರಮವನ್ನು ತೆಗೆದುಕೊಂಡಂತೆ ಕಾಣುತ್ತಿಲ್ಲ. ನಿಮ್ಮಲ್ಲಿ ಸರ್ವೆಸ್ಟಾಫ್ ಕಡಿಮೆಇದ್ದರೂ ಸಹ, ನಿಮ್ಮ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೇ 15 ದಿವಸ ಸರ್ವೆ ಟ್ರೈನಿಂಗ್ ಕೊಟ್ಟು, ರಫ್ ಸರ್ವೆ ಮಾಡಿಸಿ. ಜೋಡಿದಾರರಿಗೂ ರೈತರಿಗೂ ಇರುವ ಸಂಪರ್ಕವನ್ನು ಸಂಪೂರ್ಣವಾಗಿ ತೆಗೆದುಬಿಡಿ.

ತಾಲ್ಲೂಕು ಆಫೀಸಿನಲ್ಲಿ ರೈತರಿಗೆ ಸಬ್‌ಸಿಡಿ ಲೋನ್ ತಕಾವಿಲೋನ್ ಮತ್ತು ಕೆಲವು ಲೋನುಗಳನ್ನು ಒದಗಿಸುತ್ತಾ ಇದ್ದೀರಿ. ಈ ವಿಚಾರದಲ್ಲಿ ರೈತರು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡರೆ, ಎರಡೆರಡು ವರ್ಷಗಳಾದರೂ, ಅವುಗಳು ಅಟೆಂಡ್ ಆಗದೆ ಹಾಗೆ ಬಿದ್ದಿರುತ್ತವೆ. ನಿಮ್ಮ ಕಾನೂನಿನಲ್ಲಿಯೂ ಕೆಲವು ನ್ಯೂನತೆಗಳಿವೆ. ನಿಮ್ಮ ಸಬ್‌ಸಿಡಿ ಅಲಾಟ್‌ಮೆಂಟಿನಿಂದ ಬಡವರು ಹಣ ತೆಗೆದುಕೊಂಡಿಲ್ಲ. ಏಕೆಂದರೆ ನೀವು ಸಬ್‌ಸಿಡಿ ಅಲಾಟ್‌ಮೆಂಟ್ ಬಹಳ ಕಡಿಮೆಕೊಡುತ್ತೀರಿ. ಇನ್‌ಫ್ಲೂಯನ್ಸ್ ಇರುವವರಿಗೆ ಮೊದಲು ಅಲಾಟ್‌ಮೆಂಟ್ ಸಿಕ್ಕಿಬಿಡುತ್ತದೆ. ಆಮೇಲೆ ಅಲಾಟ್‌ಮೆಂಟ್ ಕೊಟ್ಟರೂ, ಹಣ ಇಲ್ಲದೆ, ರೈತನಿಗೆ ಅದು ಸಿಕ್ಕುತ್ತಿಲ್ಲ. ತಾಲ್ಲೂಕಿನಲ್ಲಿ ಈ ಹಣಕ್ಕೆ ಎಷ್ಟು ಬೇಡಿಕೆ ಇದೆಯೋ, ಅಷ್ಟು ಹಣವನ್ನೂ ಒದಗಿಸಬೇಕು. ನೀವು ರೈತರಿಗೆ ಬೇಕಾದ ಹಣವನ್ನು ಒದಗಿಸದೆ, ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಖರ್ಚುಮಾಡಿದರೂ ಉಪಯೋಗವಾಗುವುದಿಲ್ಲ.

ಕಡೆಯದಾಗಿ ತಾಲ್ಲೂಕು ಆಡಳಿತವನ್ನು ಸರಿಪಡಿಸಬೇಕೆಂದು ಮಾನ್ಯ ರೆವಿನ್ಯೂ ಮಿನಿಸ್ಟರನ್ನು ಕೇಳಿಕೊಂಡು, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಸನಗೌಡ (ಲಿಂಗಸುಗೂರು).—ಮಾನ್ಯ ಅಧ್ಯಕ್ಷರೆ, ಈ ದಿವಸ ಈ ಸಭೆಯಲ್ಲಿ ಉಭಯ ಮಂತ್ರಿಗಳಿಂದಲೂ ಮಂಡಿಸಲ್ಪಟ್ಟಿರುವ ಬೇಡಿಕೆಗಳಿಗೆ ಬೆಂಬಲ ಕೊಟ್ಟು ಕೆಲವು ಸೂಚನೆಗಳನ್ನು ಹೇಳ ಬಯಸುತ್ತೇನೆ.

ಮೊದಲನೆಯದಾಗಿ ರೆವಿನ್ಯೂ ಆಡಳಿತದ ವಿಷಯದಲ್ಲಿ ಹೇಳಬೇಕಾಗಿದೆ. ನಮ್ಮಲ್ಲಿ ಮೊದಲು ಹಿಂದಿನ ರಾಜ್ಯದಲ್ಲಿ ಆಡಳಿತ ಯಾವ ರೀತಿಯಲ್ಲಿತ್ತೋ ಈಗಲು ಅದೇ ರೀತಿಯಲ್ಲಿಯೇ ಇದೆಎಂದು ಹೇಳಲು ಯಾವ ಅಡ್ಡಿಯೂ ಇಲ್ಲ; ಈಗಿರುವುದಕ್ಕೂ ಹಿಂದಿನದಕ್ಕೂ ಏನೂ ವ್ಯತ್ಯಾಸವಿಲ್ಲ. ಏಕೆಂದರೆ ಆಗಿನ ಅಧಿಕಾರಿಗಳೇ ಈಗಲೂ ಇದ್ದಾರೆ. ಅಧಿಕಾರಿಗಳ ಬದಲಾವಣೆ ಇಲ್ಲ. ಅವರ ಮನೋವೃತ್ತಿಯಲ್ಲಿ ಬದಲಾವಣೆ ಇಲ್ಲ. ಮೊದಲು ಹೇಗೆ ಆಡಳಿತ ನಡೆಯುತ್ತಿತ್ತೋ ಈಗಲೂ ಅದೇ ರೀತಿ ನಡೆಯುತ್ತಿದೆ. ಹಿಂದಿನ ಕಾಲಕ್ಕೆ ಜನ ಸಾಮಾನ್ಯರು ಅರ್ಜಿ ಕೊಟ್ಟರೆ, ಅದರ ವಿಚಾರಣೆ ಆಗುತ್ತಿರಲಲ್ಲ. ಈಗಲೂ ಅರ್ಜಿಯನ್ನು ಕೊಟ್ಟರೆ ನೋಡುತ್ತೇನೆಂದರೂ ಅದು ಸಿಕ್ಕುವುದಿಲ್ಲ. ಆದುದರಿಂದ ಪರಿಸ್ಥಿತಿ ಒಂದೇ ಸಮನೆ ಇದೆ. ಆಡಳಿತ ಇದಕ್ಕೆ ಹೆಚ್ಚು ಲಕ್ಷ್ಯ ಕೊಟ್ಟು,

ಸುಧಾರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಯಾರಾದರೂ ಅರ್ಜಿಕೊಟ್ಟರೆ ಅದು ಇನ್‌ವರ್ಡ್ ರಿಜಿಸ್ಟರಿಗೇ ಸೇರುವುದಿಲ್ಲ. ಸಂಬಂಧಪಟ್ಟ ಕಾರ್ಕೂನ ಕಟ್ಟಿಟ್ಟುಕೊಂಡು ಕೂತುಬಿಡುತ್ತಾನೆ. ಅರ್ಜಿದಾರ ಬಂದು 40 ರೂಪಾಯಿ ಕೊಡುವ ಹಾಗಿದ್ದರೆ ಏನು ಮಾಡಿದ್ದಾನೆನ್ನುವುದನ್ನು ತಿಳಿಸುತ್ತಾನೆ. ಇದರಿಂದ ಜನ ಸಾಮಾನ್ಯರಿಗೆ ಬಹಳ ನಿರಾಶೆಯಾಗುತ್ತಿದೆ. ವಕೀಲರ ಕಡೆಯಿಂದ ಅಥವಾ ಪ್ರಭಾವಶಾಲಿಗಳ ಕಡೆಯಿಂದ ಅರ್ಜಿ ಕಳುಹಿಸಿಕೊಟ್ಟರೆ ಅಥವಾ ಅವರೇ ಬಂದು ಕೊಟ್ಟರೆ ಸ್ವಲ್ಪ ಒಳ್ಳೆಯ ಪರಿಣಾಮವಾಗುತ್ತದೆ. ಪ್ರಜೆಗಳ ರಾಜ್ಯ ಬಂದು 10—12 ವರ್ಷಗಳಾದರೂ ಒಂದು ಲಾಭ ಕಾಣಲಿಲ್ಲವೆಂದು ಪ್ರಜೆಗಳು ಅಂದುಕೊಳ್ಳುತ್ತಿದ್ದಾರೆ. ಈ ಕಡೆ ಮಂತ್ರಿಗಳು ಲಕ್ಷ್ಯಕೊಟ್ಟು, ಸರಿಪಡಿಸಬೇಕು.

ಅಧಿಕಾರಿಗಳು ಟೂರ್ ಮಾಡುವುದು ರೋಡ್‌ಸೈಡ್ ಹಳ್ಳಿಗಳನ್ನು. ಹೀಗೆ ಟೂರ್ ಮಾಡಿ ತಿಂಗಳಿಗೆ ಬರುವಷ್ಟು ಟಿ.ಎ. ಭತ್ಯ ತಿಂದು ಬಿಡುತ್ತಾರೆ. ಸುಮ್ಮನೆ ಗ್ರಾಮಗಳ ಹೆಸರನ್ನು ತೋರಿಸಿ ಟಿ. ಎ. ತೆಗೆದುಕೊಳ್ಳುತ್ತಾರೆ. ಇವರು ಒಳ ಗ್ರಾಮಗಳನ್ನು, ಸಣ್ಣ ಸಣ್ಣ ಗ್ರಾಮಗಳನ್ನು ಮುಟ್ಟುವುದಿಲ್ಲ. ಅಲ್ಲಿರುವ ಸಮಸ್ಯೆಗಳನ್ನೂ ಬಗೆಹರಿಸುವುದಿಲ್ಲ. ಹಳ್ಳಿಯವರಿಗೆ ಮನೆ ಕಟ್ಟಿಕೊಳ್ಳಲಿಕ್ಕೆ ಜಾಗವಿಲ್ಲವೆನ್ನುವುದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಹಳ್ಳಿಗಳಲ್ಲಿಯೂ ಜನಸಂಖ್ಯೆ ಹೆಚ್ಚಾಗಿ ಬೆಳೆಯುತ್ತಿದೆ. ಒಂದೊಂದು ಕೋಣೆಯಲ್ಲಿ 4-5 ಕುಟುಂಬಗಳಿವೆ. ಅವರಿಗೆ ಹಳ್ಳಿಗಳಲ್ಲಿ ಮನೆ ಕಟ್ಟಲು ಜಾಗವಿಲ್ಲದ್ದರಿಂದ, ವಾಸಿಸುವುದಕ್ಕೆ ಬಹಳ ಕಷ್ಟವಾಗಿದೆ. ಜಾಗವೇ ಸಿಕ್ಕುವುದಿಲ್ಲ. ಅರ್ಜಿಗಳನ್ನು ಕೊಟ್ಟರೆ, ಅವು 4-5 ವರ್ಷ ಹಾಗೆಯೇ ಬಿದ್ದು ಬಿಟ್ಟಿರುತ್ತವೆ. ಈಗಿರುವ lengthy procedureನ್ನು ಬದಲಾಯಿಸಬೇಕು. ಪ್ರೊಸೀಜರನ್ನು ಬಹಳ ಕಡಿಮೆಮಾಡಿ, ಬಹಳ ಸುಲಭಗೊಳಿಸಿ, ಒಂದು ವರ್ಷದೊಳಗೆ ಅರ್ಜಿ ಸ್ಯಾಂಕ್ಷನ್ ಮಾಡುವ ಹಾಗೆ ಆಗಬೇಕು. 8-10 ವರ್ಷಗಳಾದರೂ ಕೆಲಸವಾಗುವುದಿಲ್ಲವೆಂದು ಹೇಳಿ ಜನಗಳು ನಿರಾಶರಾಗಿ ಬಿಟ್ಟಿದ್ದಾರೆ. ಈ ಶಾನುಭೋಗ ಪಟೇಲರು ಏನು ಮಾಡುತ್ತಾರೆಂದರೆ ಸರ್ಕಾರಿ ಜಾಗ ಇದ್ದರೂ, ಯಾರಿಗೂ ಆಸ್ಪದ ಕೊಡುವುದಿಲ್ಲ. ಲಂಚ ಕೊಟ್ಟರೆ, ಸಹಾಯ ಮಾಡುತ್ತಾರೆ. ಇದರಿಂದ ಬಡವರಿಗೆ ಜಾಗ ಸಿಕ್ಕುವುದೇ ಇಲ್ಲ. ಈ ವಿಷಯದಲ್ಲಿ ಅವಶ್ಯಕ ಆದೇಶ ಕೊಡಬೇಕು.

ಮೂರನೆಯದು ತಕಾವಿಲೋನ್ ಕೊಡುವ ವಿಷಯ. ಹೋದ ವರ್ಷ ತಕಾವಿಲೋನ್ ಮಂಜೂರಾಗಿದೆ ಎಂದು ಹೇಳಿದಿರಿ. ಅರ್ಜಿಗಳನ್ನು ಜನರು ಕೊಟ್ಟರು. ಸ್ವಲ್ಪ ದಿವಸಗಳನಂತರ, ಇಲ್ಲ, ಸಾಲ ಕೊಡುವುದಿಲ್ಲ ಕೋಆಪರೇಟಿವ್ ಸೊಸೈಟಿ ಮೂಲಕ ಕೊಡಿಸುತ್ತೇವೆಂದು ಹೇಳಿದರು. ಕೋಆಪರೇಟೀವ್ ಇಲಾಖೆಯಲ್ಲಿ ಕೇಳಿದರೆ, ನಮಗೆ ಮೇಲಿನಿಂದ ಆದೇಶ ಬಂದಿಲ್ಲ. ಅದು ನಮಗೆ ಸಂಬಂಧ ಪಟ್ಟಿಲ್ಲವೆಂದು ಹೇಳಿದರು.

ಒಬ್ಬ ಸದಸ್ಯರು.—ತಕಾವಿ ಲೋನ್ ಕೊಡಬೇಕಾದರೆ ನಿಮ್ಮ ಕಡೆ ಗವರ್ನ್‌ಮೆಂಟ್ ಕಮಿಷನ್ ಎಷ್ಟು?

ಶ್ರೀ ಬಸನಗೌಡ.—ಅದನ್ನು ಇಲ್ಲಿ ಹೇಳಲಿಕ್ಕೆ ಕಾರಣವಿಲ್ಲ. ಅದು ಎಲ್ಲಾ ಕಡೆಯೂ ನಡೆದಿದೆ.

ಮಾನ್ಯ ಮಂತ್ರಿಗಳು 5-6 ತಿಂಗಳ ಕೆಳಗೆ ನಮ್ಮಲ್ಲಿಗೆ ಸ್ವಂತ ಬಂದಿದ್ದಾಗ ಡಿಸಿಷನ್ ತೆಗೆದುಕೊಂಡು ಬಿಡುತ್ತೇವೆಂದು ಹೇಳಿದರು. ಮಾರ್ಚಿ ತಿಂಗಳ 20-25ನೆಯ ತಾರೀಖಿನಲ್ಲಿ ತಕಾವಿಲೋನ್ ಕೊಟ್ಟಿದ್ದಾರೆ. ಇದನ್ನು ಕೊಡುವುದಕ್ಕೆ 8—10 ತಿಂಗಳ ವೇಳೆ ಏಕೆ ಬೇಕು? ಊಟಕ್ಕಿಲ್ಲದೆ ಊಟವಾದ ಮೇಲೆ ಕೊಟ್ಟ ಹಾಗಾಯಿತು. ಪ್ರಭಾವಶಾಲಿಗಳು, ಊರ್ಜಿತಸ್ಥರು ಮತ್ತು ಹೆಚ್ಚಿನ ದುಡ್ಡಿರುವವರಿಗೆ ಈ ತಕಾವಿ ಸಿಕ್ಕಿ ಬಿಡುತ್ತದೆ. ಬಡವರಿಗೆ ತಕಾವಿ ಸಾಲ ಸಿಕ್ಕಿಲ್ಲ. ಹೀಗಾಗಿ ಬಡವರಿಗೆ ಬಹಳ ಅನ್ಯಾಯವಾಗಿದೆ. ಬಡವರಿಗೆ ಈ ಸಾಲ ಮುಟ್ಟುವಂತೆ ಮಾಡಬೇಕು. ಮಿಡಲ್ ಕ್ಲಾಸ್ ಮತ್ತು ಅನುಕೂಲಸ್ಥರಿಗೆ ದುಡ್ಡು ಸಿಕ್ಕಿದರೆ, ಬಡವರಿಗೆ ಈ ತಕಾವಿ ಸಾಲದಿಂದ ಏನು ಲಾಭವಾಗುತ್ತದೆ? ಇದಲ್ಲದೆ ತಕಾವಿ ಸಾಲದ ಫಾರಂಗಳು ಗವರ್ನ್‌ಮೆಂಟ್ ಕಡೆಯಿಂದ ಸಪ್ಲೈ ಆಗಿಲ್ಲ. ಅವುಗಳನ್ನು ಟೈಪ್ ಮಾಡಿಸಬೇಕಾದರೆ 2—2 ರೂಪಾಯಿ ತೆಗೆದುಕೊಳ್ಳುತ್ತಾರೆ. ಇದನ್ನು ಸರ್ಟಿಫೈ ಮಾಡಿಸುವುದಕ್ಕೆ ಬೇರೆ ದುಡ್ಡು ಖರ್ಚಾಗುತ್ತದೆ. ಹೀಗೆ ರೈತರ ಕಡೆಯಿಂದ ಟೈಪ್ ಮಾಡಿಸುವುದಕ್ಕೆ ಮುಂತಾದುದಕ್ಕೆ 4—5 ರೂಪಾಯಿಗಳು ಖರ್ಚಾಗುತ್ತದೆ ಹೀಗಾಗಿ ನೀವು 50 ರೂಪಾಯಿ ರೈತನಿಗೆ ಕೊಟ್ಟರೆ, ಅವನಿಗೆ 30 ರೂಪಾಯಿ ಸಿಕ್ಕುತ್ತದೆ. ವರ್ಷಗಳಿಂದ ಬಂದ ಈ ರೋಗ ನಿವಾರಣೆಯಾಗಬೇಕಾದರೆ, ಸೊಸೈಟಿಯ ಕಡೆಯಿಂದ ಈ ಸಾಲವನ್ನು ಕೊಡಿಸಲು ಒಂದು ವ್ಯವಸ್ಥೆ ಮಾಡಬೇಕು.

ಅಲ್ಲಿ ಈಗ ಏನು machinery ಇದೆಯೋ ಕಾರಖೂನ ಪೇಷ್‌ಕಾರ ಎಂದು, ಇದು ಎಲ್ಲಿಯವರೆಗೆ ಬದಲಾವಣೆಯಾಗದೆ ಹೀಗೆಯೋ ಇರುತ್ತದೆಯೋ ಅಲ್ಲಿಯವರೆಗೆ ಈ ರೋಗ ಹೋಗುವುದಿಲ್ಲ. ಈ ರೋಗವೆಂದರೆ ಲಂಚ ತೆಗೆದುಕೊಳ್ಳುವ ರೋಗ. ನಮ್ಮ ತಾಲ್ಲೂಕಿನಲ್ಲಿ ಗುಡಗುಂಟಿ ಸಂಸ್ಥಾನವೆಂದು ಒಂದು ಪ್ರದೇಶವಿದೆ. ಅಲ್ಲಿನ ಫಾರೆಸ್ಟ್ ಪ್ರದೇಶ ಸೆಟ್ಲ್‌ಮೆಂಟ್ ಆಗಿರಲಿಲ್ಲ. ಆ ಪ್ರದೇಶದಲ್ಲಿ ಒಕ್ಕಲುತನ ಮಾಡುವುದಕ್ಕೆ ಅವಕಾಶವಿರುವ ಜಾಗವನ್ನು ಕೆಲವು ಜನರಿಗೆ ಕೊಟ್ಟಿದ್ದರು. ಆದರೆ ಎಂಟು ಹತ್ತು ವರ್ಷಗಳಿಂದಲೂ ಅವರ ಹೆಸರಿನಲ್ಲಿ ಪಟ್ಟಿಮಾಡಿಲ್ಲ. ಅದ ಕಾರಣ ಫಾರೆಸ್ಟ್ ಇಲಾಖೆಯವರು ಆ ಪ್ರದೇಶವನ್ನು ತಾವೇ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡಿದರು. ಮೊದಲನಿಂದಲೂ ಆ ಕೆಲವು ಜನರಿಗೆ ಕೊಟ್ಟಿದ್ದ ಜಾಗದಲ್ಲಿ ಒಕ್ಕಲುತನ ಮಾಡುತ್ತಿದ್ದಾರೆ, ಅವರನ್ನು ಹಾಗೆಯೇ ಇಡಿ, ತೆಗೆಯ ಬೇಡಿ ಎಂದು ನಾವು ಹೇಳಿದೆವು. ಆದರೂ ಅಸಿಸ್ಟೆಂಟ್ ಕಮೀಷನರೂ ಅಮಲ್ದಾರರೂ ಅವರಿಗೆ ತ್ರಾಸ ಕೊಡುತ್ತಿದ್ದಾರೆ.

5 P.M.

ಶ್ರೀ ಕೆ. ಎಫ್. ಪಾಟೀಲ್.—ಈಗಾಗಲೇ ಫಾರೆಸ್ಟ್ ಮತ್ತು ರೆವಿನ್ಯೂ ಇಲಾಖೆಗೆ ಅವರನ್ನು ಕಿತ್ತು ಹಾಕಬಾರದೆಂದು ಬರೆದಿದ್ದೇವೆ.

ಶ್ರೀ ಬಸನಗೌಡ.—ಖಂಡಿತವಾಗಿ ಕಿತ್ತು ಹಾಕಬಾರದೆಂದು ಅಲ್ಲಿನ ಅಧಿಕಾರಿಗಳಿಗೆ ತಿಳಿಸಬೇಕು.

ಎಲ್ಲೆಲ್ಲಿ ಹೊಲಗಳಿವೆ, ಹಟ್ಟಿಗಳಿವೆ ಅವನ್ನು ಅವರಿಗೆ ಬಿಟ್ಟರೆ ಆ ಬಡವರಿಗೆ ಅನುಕೂಲವಾಗುತ್ತದೆ. ಬಗಲು ಜಮೀನುಗಳಿಗೆ ಗೊಬ್ಬರ ಹಾಕಿ ಚೆನ್ನಾಗಿ ಬೇಸಾಯ ಮಾಡಿ ಬೆಳೆಯುತ್ತಿದ್ದಾರೆ. ಇಂಥಾದ್ದನ್ನು ಅವರಿಗೆ ಬಿಡಬೇಕು. "Grow more food" ಯೋಜನೆಯಲ್ಲಿ ಕೊಟ್ಟ ಹೊಲಗಳಿವೆ. ಅಲ್ಲಿ ಹದಿನಾರು ವರ್ಷಗಳಿಂದ ಬೆಳೆಯುತ್ತಿದ್ದಾರೆ. ಈಗ ಅವರನ್ನು ಬಿಟ್ಟು ಹೋಗಿ ಎಂದು ಹೇಳುತ್ತಿದ್ದಾರೆ. ಹೀಗೆ ಮಾಡಬಾರದು.

(ಶ್ರೀ ಬಸನಗೌಡ)

ಯಾರು ಬೇಸಾಯ ಮಾಡುತ್ತಿದ್ದಾರೋ ಅವರ ಹೆಸರಿಗೇ ಆ ಜಮೀನುಗಳನ್ನು ಪಟ್ಟಾ ಮಾಡಿಕೊಡಬೇಕು.

ನಮ್ಮಲ್ಲಿ ಎರಡು ಮೂರು ವರ್ಷಗಳಿಗೊಮ್ಮೆ ಬರಗಾಲ ಬಂದೇ ಬರುತ್ತದೆ. ಇದರ ನಿವಾರಣೆಯ ಬಗ್ಗೆ ಸಲಹೆಮಾಡಲು ಒಂದು ಸಮಿತಿಯನ್ನು ಮಾಡಿದ್ದಾರೆ. ಅದರಲ್ಲಿ ಖಾಸಗಿ ಸದಸ್ಯರಿದ್ದಾರೆ. ಅವರು ಸಮಿತಿಯ ಮೀಟಿಂಗುಗಳಿಗೆ ಬಂದರೆ ಅವರಿಗೆ ಟಿ. ಎ. ಮತ್ತು ಡಿ. ಎ. ಇಲ್ಲವೆಂದು ಮಾಡಿದ್ದಾರೆ. ನೂರಾರು ಮೈಲ ದೂರದಿಂದ ಬರುವ ಜನರಿಗೆ ಏನೂ ಖರ್ಚು ಕೊಡುವುದಿಲ್ಲವೆಂದರೆ ಹೇಗೆ ? ಅವರು ಹೋಗಿ ಬರುವ ಖರ್ಚನ್ನಾದರೂ ಕೊಡಬೇಕು. ಅವರ ಬರಗಾಲಕ್ಕೆ ಸಂಬಂಧಪಟ್ಟ ಕೆಲಸ ಮಾಡುವುದಕ್ಕಾಗಿ ಬರುತ್ತಾರೆ.

ಕೃಷ್ಣಾ ಮತ್ತು ತುಂಗಭದ್ರಾ ಯೋಜನೆಗಳಿವೆ. ತುಂಗಭದ್ರಾ ಆಗಿದೆ, ಕೃಷ್ಣಾ ಯೋಜನೆ ಇನ್ನೂ ಕಾರ್ಯಗತವಾಗಿಲ್ಲ. ಅಪ್ಪರ್ ಕೃಷ್ಣಾ ಯೋಜನೆ ಪೂರ್ತಿ ಆದರೆ ಎರಡು ಮೂರು ಸಾವಿರ ಎಕರೆ ನೀರಾವರಿ ನಮ್ಮ ಕಡೆ ಆಗಬಹುದು. ಬಾಕಿ ಭೂಮಿಗೆ ಅನುಕೂಲವಾಗುವುದಿಲ್ಲ. ಅಲ್ಲಿ ತೋಟಗಾರಿಕೆ ಮಾಡಬೇಕೆಂದು ಜನರಿಗೆ ಅಭಿಲಾಷೆ ಇದೆ. ಇದಕ್ಕಾಗಿ ಬಾವಿಗಳನ್ನು ತೋಡಿಕೊಂಡರೆ ಅನುಕೂಲವಾಗುತ್ತದೆ. ಇದಕ್ಕೆ ತಕಾವಿ ಸಾಲ ಕೊಟ್ಟರೆ ಅವರು ತೋಟಮಾಡಿಕೊಂಡು ತಕ್ಕಷ್ಟು ಲಾಭ ಪಡೆಯಬಹುದು. ಪಂಪುಸೆಟ್‌ಗಳನ್ನು ಕಂತುಗಳ ಮೂಲಕ ಜನರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ವರ್ಷಕ್ಕೆ ಇಷ್ಟು ಹಣ ಕೊಡಬೇಕೆಂದು ಗೊತ್ತು ಮಾಡಿ ಪಡೆದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಹಿಂದಿನ ಸರ್ಕಾರವಿದ್ದ ಕಾಲದಲ್ಲಿ ಎಷ್ಟೋ ಜನರಿಗೆ ತಗಾವಿ ಸಾಲ ಕೊಟ್ಟರು. ಆ ಸಾಲ ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿದೆ. ಈಗ ಅವರು ಅಷ್ಟು ಬಾಕಿಯನ್ನೂ ಕೊಡಬೇಕಾದರೆ ಕಷ್ಟ. ಹಿಂದೆ ಕೊಟ್ಟ ಅನೇಕ ಸಾಲಗಳಿಗೆ ಸರಿಯಾದ ಕಾಗದ ಪತ್ರಗಳಿಲ್ಲ. ಅನೇಕರಿಗೆ ಹೆಬ್ಬೆಟ್ಟು ಒತ್ತಿಸಿಕೊಂಡು ಕೊಟ್ಟಿದ್ದಾರೆ. ಅವರಿಗೆ ಹಣ ಸಂದಾಯವಾಗಿಲ್ಲ. ಆದುದರಿಂದ ಡಾಕ್ಯುಮೆಂಟ್ಸ್ ಯಾರಿಗೆ ಇದೆ ಅವರಿಂದ ತೆಗೆದುಕೊಳ್ಳಿ, ಬರಿಯ ಹೆಬ್ಬೆಟ್ಟು ಗುರುತು ಹಾಕಿಸಿಕೊಂಡಿದ್ದರೆ ಅವರಿಂದ ವಸೂಲು ಮಾಡುವುದು ಬೇಡ. ಏಕೆಂದರೆ ಪಟೇಲರೂ ಶ್ಯಾನುಭೋಗರೂ ಅವರ ಕೈ ಹೆಬ್ಬೆಟ್ಟನ್ನೊತ್ತಿಸಿಕೊಂಡು ಹಣವನ್ನು ತಾವೇ ತೆಗೆದುಕೊಂಡಿದ್ದಾರೆ. ಅವರಲ್ಲಿ ಯಾರು ಜೀವಿಸಿದ್ದಾರೋ ಯಾರು ಸತ್ತಿದ್ದಾರೋ ಗೊತ್ತಾಗುವುದಿಲ್ಲ. ಹೇಗೆ ಸಾಲ ಕೊಡಿಸಿದರೋ ಗೊತ್ತಿಲ್ಲ. ಆದ ಕಾರಣ ಹಿಂದಿನ ಬಾಕಿಯ ಭಾರವನ್ನು ತೆಗೆದುಹಾಕಿದರೆ ಅವರಿಗೆ ಪರಿಹಾರ ಸಿಕ್ಕುತ್ತದೆ; ಇಲ್ಲದಿದ್ದರೆ ಅವರ ಬಡತನ ಹೋಗುವುದಿಲ್ಲ.

ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕ್‌ಗಳನ್ನು ಯಾರು ಈ ಅಸೆಂಬ್ಲಿಯಲ್ಲಿ ಜಗಳ ಆಡುತ್ತಾರೋ ಅವರ ಕ್ಷೇತ್ರಕ್ಕೆ ಕೊಡುತ್ತಾರೆ. ನಮ್ಮ ಪಕ್ಕದ ತಾಲ್ಲೂಕುಗಳಿಗೆ ಕೊಟ್ಟಿದ್ದಾರೆ, ನಮ್ಮ ತಾಲ್ಲೂಕಿಗೆ ಕೊಟ್ಟಿಲ್ಲ. ಈ ಸಾರಿಯಾದರೂ ನಮ್ಮ ಲಿಂಗಸೂಗೂರು ತಾಲ್ಲೂಕಿಗೆ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ನಮ್ಮ ಎರಡು ಕಡೆ ಪಕ್ಕದ ತಾಲ್ಲೂಕುಗಳಿಗೂ ಕೊಟ್ಟಿದ್ದಾರೆ. ಆದರೂ ನಾನು ಇದುವರೆಗೂ ಕೇಳಿಲ್ಲ. ಈ ಸಾರಿ ಖಂಡಿತವಾಗಿ ನಮ್ಮ ತಾಲ್ಲೂಕಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Sri V. S. PATIL (Belgaum I).—Sir, I have got a very short time to speak on this subject and with scarcity of members in this Assembly; at present out of -08, there are barely 30 or 35. So far as the present Demands are concerned, I will refer to only land revenue. The present system of land revenue is an archaic one dated from feudality. Most of the lands belonged to the king. This archaic system requires to be revised with the changed circumstances. I have placed several times before this Hon'ble House as to why agriculture should be taxed double. At present we are paying land revenue as well as income tax on agriculture. This is a double taxation and must be changed as early as possible. The other thing which I wish to point out is that since there is a deficit in our country for foodgrain to feed the millions of the people, agriculture is the most essential profession and it requires encouragement. Instead of that, if this profession is taxed double, then great injustice will be caused to this great profession of ours. Sir, in spite of the fact that I am not agreeable with this sort of taxation of land revenue, still so long as there is a law for recovery, we have to accept it and abide by law. But, what is the Revenue Department doing? Are they following the law prescribed and the procedure prescribed for the recovery of land revenue? That is the main point. I have heard so many Hon'ble Members asking for schools, wells and other amenities. But first of all I want that there should be rule of law which is the life of our Constitution and of every individual. So far as the people of border area are concerned, there is no rule of law which I have said several times in this House. The revenue authorities have surrendered completely their powers and duties to the police The Police are, with their stern rod, ruling our territory. In the recovery of land assessment we are still governed by the Bombay Revenue Code. The Mysore Land Revenue Code is not applicable till now. According to section 154 of the Bombay Land Revenue Code, the procedure is given as to how the arrears from the defaulters are to

be recovered. In this book on Land Revenue by Gupte, on page 480, the procedure has been given. The Bombay Government have in GRRD No. 4112 of 11-11-1930 described the rules as to how the land revenue is to be collected.

There is another section which is 200. Under that section, the authorities who want to destrain the property of the defaulter has to give 7 days clear notice of their intention to enter the premises and attach the property. In our area not a single individual was served with any notice and without giving any notice, all these police officers and revenue officers entered into the houses forcibly and removed the movable property. In one of the cases where satyagraha was done by obstructing these officers, this Government prosecuted those people for obstruction and the satyagrahis admitted the offence of obstruction, still the court has held that the Government action was highly illegal, it was not covered by any authority or any procedure and the action being illegal on the part of the Government, the obstruction offered by the accused was not an offence at all and they were acquitted. This shows how high handed and illegal actions have been taken by the revenue authorities for the recovery of the dues. There is another point. Section 156 says that certain articles are exempt from attachment and that section refers to section 60 of the Civil Procedure Code. But in this case purposely these revenue and police officers have attached the articles which are forbidden under the law. For example, the seeds kept by the agriculturists and the agricultural implements. Only those articles which will hamper the agriculturists in their business have been attached by these officers. Why ? Simply to bring them down, to hamper their work, to force them to submit to their Police raj, all these illegal things have been done. The law says that when an attachment is made, there should be an inventory made and copy of the inventory must be served on the defaulter to give an indication as to what property has been attached. There is not a single case where a copy of the inventory was given to the person whose property has been attached in these proceedings. Hundreds of people have sufferred in this way. There is another section which says that property worth approximate to the amount due should be attached. But here in this case, even if I should cite one example out of hundreds, that will suffice us-here is an application given by two persons ; they are coming from the village Dhondur in Belgaum Taluka ; they say that on 26th March 1960 revenue and police officers came to their house, their assessment is Rs. 82; for that they have attached property worth Rs. 406 This shows that in what high handed, illegal and arbitrary manner these police and revenue officers are behaving in our parts.

Sri C. J. MUCKANNAPPA.—It is not Police ; it is the Congress rule.

Sri V. S. PATIL.—What Sri Muckannappa has suggested is correct. The Police had never taken up such high handed attitude so long as they were not guided by the white caps in our parts.

Sri K. S. SURYANARAYANA RAO.—Were they not guided by white caps in the Bombay State ?

Sri V. S. PATIL.—I upheld the rule of Morarji Desai. Though he was a stern man, he was a lover of rule of law. That is not the case in this State. I would appeal to Sri Suryanarayana Rao to come to our villages without allowing the Government to know it and investigate what those people have done. I feel sure that any person even from the Congress side who comes and investigates or looks into these matters, will certainly come to the conclusion that the officers concerned not only deserve dismissal, but they deserve to be criminally prosecuted and punished. I challenge the Revenue Minister to come there and himself investigate. So I submit this is perhaps the last time when I may be able to address.........

Sri K. S. SURYANARAYANA RAO.—You said that we could visit your place ; could we visit your place without Police protection ?

Sri V. S. PATIL.—I would invite not only you but anybody, even Sri Jatti. You may visit our villages without anybody's protection. We are there to commit any offence or any violence. I have to point out that certain people, some M.Ps. and lawyers had committed this obstruction business, that is Satyagraha. They were obstructed; they admitted that they had obstructed the Police and the Revenue officers. They were sentenced to two months' simple imprisonment. How were they treated? They were treated as ordinary criminals; even though they are M.L.As. and M.Ps. they have been given 'C' Class. Here one Executive Engineer Sri Gandhi was convicted at Belgaum and sentenced to two years imprisonment; he had appealed and the conviction was confirmed for misappropriation of Government money. He has been proved to be a criminal in the Sessions Court as well as in the High Court. What Class he is given? He is given 'A' Class. This is the way in which the Government is treating our people there. For what offence these M.L.As. and M.Ps. were convicted? For offering Satyagraha and they are given 'C' Class. A person who has committed breach of trust, who has taken illegal gratifications, such a criminal is given 'A' Class. This is the way in which our Government is behaving. We don't want roads, we don't want wells, we don't want schools, but we want rule of law.

Sri M. MALLIKARJUNASWAMY.—Is it mere Satyagraha or violent Satyagraha?

Sri V. S. PATIL.—My friend Sri Mallikarjunaswamy should come there and see things for himself.

Mr. CHAIRMAN.—May I know who classifies the prisoners? Is it the Executive or the Judiciary?

Sri V. S. PATIL.—It is the duty of the Court to classify and the Government has to recommend. Unless the Government recommends, how can the Court classify it? That is why I am saying that criminals are treated in a better way than the Satyagrahis, even though they are M.Ps. and M.L.As.

Sri KADIDAL MANJAPPA.—I believe that the courts are assigning A Class, B Class or C Class and not the Government or the Collector.

Sri C. J. MUCKANNAPPA.—If the Government say that they may be placed in A Class, then the courts will do so.

Sri V. S. PATIL.—When the Hon'ble members opposite were resorting to Sathyagraha and when they were punished by the Britishers, what were they doing? They were also asking for these things. Whenever there was ill-treatment they were complaining that the Class should be changed. I may refer here to a speech made by that great man, Sardar Vallabhbhai Patel in 1927 in which he has clearly stated that "repression of this kind against a no tax campaign will not last long and the Government will have to come down."

Sri KADIDAL MANJAPPA.—The Hon'ble member is entitled to speak about the collection of land revenue and the actions of the rule of law while collecting land revenue, but he is not entitled to speak about the treatment of undertrials in jails while speaking on this Demand.

Sri S. D. KOTHAVALE.—He is referring not only to police, but also to judicial administration.

Sri V. S. PATIL.—I have referred to the treatment of the people at the time of collection of land revenue by the police and the officers. They have acted illegally and in a highhanded manner. Those who obstructed the collection of land revenue have been victimised by these people.

Sri M. MALLIKARJUNASWAMY (Malavalli).—When we are all subjected to the rule of law, I do not see any point in the argument of the Hon'ble member that it is not the rule of law that is prevailing in the country but it is the rule of the cap that is prevailing in the country. I repudiate his statement.

[MR. SPEAKER in the Chair]

Mr. SPEAKER.—The Hon'ble Member cannot touch points covered under the head 'Police' while speaking on this Demand.

Sri C. J. MUCKANNAPPA.—Sir, can a member sit along with the Minister and interrupt a member who is on his legs? My friend Sri Kothavale is sitting by the side of the Minister and interrupting the Hon'ble member Sri V. S. Patil.

Mr. SPEAKER.—He will go back to his seat.

Sri V. S. PATIL.—I should like to request the Revenue Minister to see to our allegations personally and I invite him to come to our villages to see how the people have behaved and are behaving and how his officers have behaved and are behaving. If they have behaved illegally, then he should take prompt and immediate steps to punish those who have behaved illegally.

Lastly, I would say that if the Hon'ble Minister fails to do that and if he merely relies upon the false reports of his subordinate officers, then we will not fail to prosecute either criminally or in a civil court te officers who have committed these offences and show to this Assembly that the actions taken by the Government were illegal and they were not justified in doing all these things.

*ಶ್ರೀ ಟಿ. ಆರ್. ಪರಮೇಶ್ವರಯ್ಯ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಸ್ವಾಮಿ, ಈ ದಿನ ನಮ್ಮ ಮುಂದೆ ಇರತಕ್ಕ ಬೇಡಿಕೆಗಳಿಗೆ ಸ್ವಾಗತವನ್ನು ನೀಡುತ್ತ ನನ್ನ ಒಪ್ಪಿಗೆಯನ್ನು ಅದಕ್ಕೆ ಸಂಪೂರ್ಣವಾಗಿ ಕೊಡುತ್ತ ಇದ್ದೇನೆ. ಇದರಲ್ಲಿ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲು ಬಯಸುತ್ತೇನೆ. ಸ್ವಾಮಿ, ಈಗ ನಾನು ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಲ್ಯಾಂಡ್ ರೆವಿನ್ಯೂ ಡಿಮ್ಯಾಂಡ್‌ಗಳ ಬಗ್ಗೆ ಮಾತ್ರ ಪ್ರಸ್ತಾಪಿಸ ಬಯಸುತ್ತೇನೆ. ಮೊದಲನೆಯದಾಗಿ ಸಮಾಜ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ನಮ್ಮ ರಾಜ್ಯದಲ್ಲಿ ಯಾವ ರೀತಿ ಕೆಲಸ ಮಾಡುತ್ತ ಅವೆ ಎನ್ನುವ ಬಗ್ಗೆ ಒಂದೆರಡು ವಿಷಯಗಳನ್ನು ಈ ದಿವಸ ಪ್ರಸ್ತಾಪಮಾಡಬೇಕಾಗಿದೆ. ಈಗಾಗಲೇ ಮಾನ್ಯ ಸದ್ಯಸರು ಈ ಯೋಜನೆಗಳ ಬಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ. ಆದರಲ್ಲೂ ಮುಖ್ಯವಾಗಿ ಶ್ರೀಮಾನ್ ವೆಂಕಟೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಒಂದು ವಿಷಯವನ್ನು ಈಗ ಹೇಳಬೇಕಾಗುತ್ತದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಎಲ್ಲಿ ಬಿ. ಡಿ. ಓ. ಅಧಿಕಾರಿಗಳು ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡುತ್ತಾರೆಯೋ ಅಂತಹ ಬ್ಲಾಕುಗಳಲ್ಲಿ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿವೆ ಎಂದು ಟೀಕೆ ಮಾಡಿದರು. ನನಗಾದರೂ ಅನಿಸುತ್ತದೆ ಇದು ಕೇವಲ ಬಿ. ಡಿ. ಓ. ಅವರಿಗೆ ಸಂಬಂಧಿಸಿದಂಥ ಕಾರ್ಯವ್ಯಾಪ್ತಿ ಅಲ್ಲ. ಅಲ್ಲಿರತಕ್ಕ ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿಯ ಜವಾಬ್ದಾರಿಯೂ ಹೆಚ್ಚಿನದಾಗಿದೆ. ಮುಖ್ಯವಾಗಿ ನಾವು ಈ ಸಮಾಜ ವಿಕಾಸ ಯೋಜನೆಯ ಮೂಲತತ್ತ್ವವನ್ನು ಅರಿತು ಕೊಂಡು ವಿಚಾರ ಮಾಡುವುದಾದರೆ ಇದರಲ್ಲಿ ಸಾಮೂಹಿಕವಾಗಿ ಸರ್ಕಾರದ ಪರವಾಗಿಯೂ ಮತ್ತು ಸಾರ್ವಜನಿಕರ ಒಂದು ಜವಾಬ್ದಾರಿಯೂ ಹೆಚ್ಚಿನದು ಇದೆ ಎಂದು ಈ ಸಮಯದಲ್ಲಿ ತಿಳಿಸ ಬಯಸುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರ್ಯ ಎಷ್ಟು ಮಟ್ಟಿಗೆ ನಡೆದಿದೆ ಎಂದು ಹಿಂದಿನ 3 ವರ್ಷಗಳ ಅಂಕಿ ಅಂಶಗಳನು ತೆಗೆದು ಕೊಂಡದ್ದೇ ಆದರೆ ಗಣನೀಯವಾಗಿ 58-59 ನೆಯ ಸಾಲಿನಲ್ಲಿ ಹೆಚ್ಚಿನ ಕೆಲಸ ಕಾರ್ಯಗಳು ನಡೆದಿವೆ ಎಂದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಈ ಒಂದು ದೃಷ್ಟಿಯಿಂದ ಈ ಖಾತೆಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಲಿಂಗಾರೆಡ್ಡಿ ಅವರ ಬಗ್ಗೆ ಈ ಸಮಯದಲ್ಲಿ ಪ್ರಶಂಸೆ ಮಾಡಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಈ ಬಾಬಿಗೆ ಸಂಬಂಧಪಟ್ಟಂತೆ, ಆರೋಗ್ಯ, ಅನಿಮಲ್ ಹಸ್ಬೆಂಡರಿ, ಕಮ್ಯೂನಿಕೇಷನ್ ಮತ್ತು ವಿದ್ಯಾಭ್ಯಾಸಕ್ಕೆ ಇಟ್ಟಿರತಕ್ಕ ಹಣ ಸಾಕಾಗುತ್ತಾ ಇಲ್ಲ. ಈ ದಿವಸ ಈ ಕ್ಷೇತ್ರಗಳಲ್ಲಿ ಕೆಲಸ ಕಾರ್ಯಗಳು ಹಣದ ಕೊರತೆಯಿಂದ ಮುಂದುವರಿಯಲಿಕ್ಕೆ ಆಗಿಲ್ಲ ಎಂದು ನನ್ನ ಅಭಿಪ್ರಾಯವಾಗಿದೆ. ಈ ಬಾಬುಗಳಿಗೆ ಹೆಚ್ಚು ಹಣ ಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಹೆಚ್ಚು ಹಣ ಒದಗಿಸಿದರೆ ಉಪಯುಕ್ತವಾದ ರೀತಿಯಲ್ಲಿ ಹೆಚ್ಚಿನ ತೀವ್ರ ಗತಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತವೆ. ಆದುದರಿಂದ ಈ ಬಾಬುಗಳಿಗೆ ಹೆಚ್ಚಿನ ಹಣ ಒದಗಿಸಿಕೊಡಲಿಕ್ಕೆ ನಾನು ಒತ್ತಾಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸ್ಕೂಲ್ ಕಟ್ಟಡದ ಬಗ್ಗೆ ಹೆಚ್ಚು ಬೇಡಿಕೆಗಳು ಬರುತ್ತವೆ ಒಳ್ಳೆಯ ತಳಿಗಳಿಗಾಗಿ ಹೆಚ್ಚಿಗೆ ಬೇಡಿಕೆಗಳು ಬರುತ್ತಿವೆ. ಆದರೆ ಒಳ್ಳೆಯಬೀಜದ ಹೋರಿಗಳನ್ನು ಪೂರೈಸಲು ಹಣ ಸಾಕಾಗುವುದಿಲ್ಲ. ಆದುದರಿಂದ ಹೆಚ್ಚು ಹಣ ಒದಗಿಸಿ ಕೊಟ್ಟು ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅದೇನೆಂದರೆ ಎನ್. ಇ. ಎಸ್. ಗೆ ವಹಿಸಿಕೊಟ್ಟಿದ್ದಾದರೆ ಫಲಕಾರಿಯಾಗುತ್ತದೆ. ಎರಡು ಪ್ರತ್ಯೇಕವಾದ ಕಮಿಟಿಗಳು ಇರುವುದು ಅಷ್ಟು ಸೂಕ್ತವಲ್ಲ. ಈ ಕೆಲಸ ಎನ್. ಇ. ಎಸ್. ನಲ್ಲಿ ಯಶಸ್ವಿಯಾಗುತ್ತದೆ ಮತ್ತು ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ಗ್ರಾಮ ಪಂಚಾಯಿತಿ, ತಾಲ್ಲೂಕ್ ಡೆವಲಪ್‌ಮೆಂಟ್, ರಾಷ್ಟ್ರೀಯ ವಿಸ್ತಾರಣಾ ಯೋಜನೆ ಈ ಕೆಲಸ ಕಾರ್ಯಗಳು ಬಹಳ ಜವಾಬ್ದಾರಿಯುಳ್ಳದ್ದಾಗಿವೆ. ಎನ್. ಇ. ಎಸ್. ಮತ್ತು ಸಿ. ಡಿ. ಯೋಜನೆಗಳು ಪೂರ್ಣವಾಗಿ ಕಾರ್ಯಗತವಾಗಲಿಕ್ಕೆ ಯಾವ ಯಾವ ಅಡ್ಡಿ ಆತಂಕಗಳಿವೆ ಎನ್ನುವುದನ್ನು ಕಂಡುಹಿಡಿಯಬೇಕು. ಅಲ್ಲಿ ಕೆಲಸ ಮಾಡತಕ್ಕಂಥವರಿಗೆ ಪ್ರಮೋಷನ್ ಕೊಟ್ಟು initiative create ಮಾಡಿದರೆ ಉಪಯೋಗವಾಗುತ್ತದೆ. ಈ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

5-30 P.M.

ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳವರ ಕಡೆಗೆ ಹೋಂ ಮ್, ಇಂಡಸ್ಟ್ರೀಸ್, ಎನ್. ಇ. ಎಸ್.

(ಶ್ರೀ ಟಿ. ಆರ್. ಪರಮೇಶ್ವರಯ್ಯ)

ಪ್ಲಾನಿಂಗ್ ಮುಂತಾದ ಬಹಳ ಪ್ರಾಮುಖ್ಯವಾದ ಬಾಬುಗಳು ಒಬ್ಬರ ಅಧೀನದಲ್ಲವೆ. ಮುಖ್ಯ ಮಂತ್ರಿಗಳಿಗೆ ಹೆಚ್ಚು ತೊಂದರೆಯಾಗಿದೆಯೆಂದು ಕಂಡು ಬರುತ್ತದೆ. ಹಿಂದೆ ಬಜೆಟ್ಟ ಭಾಷಣದಲ್ಲಿ ಈ ವಿಷಯ ನಾನು ಪ್ರಸ್ತಾಪ ಮಾಡಿದ್ದೆನು. N. E. S. ಮತ್ತು Planning Department ಇವುಗಳಿಗೆ ಸಂಬಂಧಪಟ್ಟ ಒಬ್ಬ ಪ್ರತ್ಯೇಕ ಮಂತ್ರಿಗಳನ್ನು ಇಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ವಿಚಾರವನ್ನು ತೀವ್ರ ಯೋಚನೆ ಮಾಡಬೇಕು. N. E. S. ಗೆ ಸಂಬಂಧ ಪಟ್ಟ ಹೆಚ್ಚಿನ ಜವಾಬ್ದಾರಿಯುಳ್ಳ ಅನೇಕ ಕೆಲಸಗಳಿವೆ. ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡಬೇಕಾಗುತ್ತದೆ. ಈ ಕೆಲಸ ಕಾರ್ಯಗಳಿಗೆ ವಿಶೇಷ ಗಮನ ಕೊಡಲು ಒಬ್ಬ ಪ್ರತ್ಯೇಕ ಮಂತ್ರಿ ಇರಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಈ ವಿಚಾರವನ್ನು ಉದಾಸೀನ ಮಾಡದೆ ತೀವ್ರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೆರೆಹೊರೆಯ ರಾಜ್ಯಗಳಲ್ಲಿ ಈ ಬಾಬಿಗೆ ಒಬ್ಬ ಪ್ರತ್ಯೇಕ ಮಂತ್ರಿ ಇರುವುದು ಕಂಡು ಬರುತ್ತದೆ. ನಮ್ಮ ರಾಜ್ಯದಲ್ಲಿಯೂ ಸಹ ಏಕೆ ಹಾಗೆ ಮಾಡಬಾರದು ಎಂದು ಕೇಳುತ್ತೇನೆ.

ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿಯ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ನಮ್ಮ ತರೀಕೆರೆ ತಾಲ್ಲೂಕಿನಲ್ಲಿ artificial insemination ಸೌಕರ್ಯ ಒದಗಿಸಿಕೊಡಬೇಕೆಂದು ಸುಮಾರು ಒಂದು ವರ್ಷಕ್ಕೆ ಮೇಲ್ಪಟ್ಟು ನಾವು ಕೇಳಿಕೊಳ್ಳುತ್ತಾ ಇದ್ದೇವೆ. ಈ ವಿಷಯ ತಾಲ್ಲೂಕ್ ಕಮಿಟಿಯಲ್ಲಿ ತೀರ್ಮಾನವಾಗಿ ಒತ್ತಾಯ ಮಾಡಿದ್ದರೂ ಇದುವರೆಗೆ ದಯಪಾಲಿಸಿಲ್ಲ. ಆದುದರಿಂದ ಸಂಬಂಧ ಪಟ್ಟ ಮಂತ್ರಿಗಳು ಈ ಬಗ್ಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಶಿವಣಿ ಗ್ರಾಮದಲ್ಲಿ ಒಂದು ವೆಟೆರಿನರಿ ಆಸ್ಪತ್ರೆ ಕೊಡಬೇಕೆಂದು ಕೇಳಿ ಕೊಂಡಿದ್ದೇವೆ. ಅಲ್ಲಿ ಸಾಕಷ್ಟು ಜಾನುವಾರುಗಳಿವೆ. ಈ ಆಸ್ಪತ್ರೆ ಕೊಡುವ ಬಗ್ಗೆ ಸಂಬಂಧ ಪಟ್ಟ ಮಂತ್ರಿಗಳು ಯೋಜನೆ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಕಂದಾಯ ವಸೂಲಿಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಕಂದಾಯವನ್ನು ಸರಿಯಾಗಿ ವಸೂಲು ಮಾಡಿದರೆ ಹೆಚ್ಚಿನ ಆದಾಯ ಬರಲಿಕ್ಕೆ ಸಾಧ್ಯವಿದೆ. ಈ ಬಗ್ಗೆ ಗಮನ ಕೊಡಬೇಕು. ಸರ್ವೆ ಅಹವಾಲಿನ ಬಗ್ಗೆ ಹೆಚ್ಚಿನ ಗಮನ ಕೊಡಬೇಕು, ಏಕೆಂದರೆ ರೈತರಿಗೆ ಬಹಳ ಅನಾನುಕೂಲವಾಗಿದೆ.

ನಮ್ಮ ತರೀಕೆರೆ ತಾಲ್ಲೂಕಿನಲ್ಲಿ ಇನಾಂದಾರಿ ಜಮೀನುಗಳಿವೆ. ಸರ್ಕಾರದವರು ಕೊಡತಕ್ಕ ಎಲ್ಲ ಸೌಲಭ್ಯಗಳನ್ನು ರೈತರು ಪಡೆಯದೆ ಇನಾಮದಾರರು ಪಡೆಯುತ್ತಿದ್ದಾರೆ ಎಂದು ಈ ಸಂಧರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಸಹ ಹೋಗುತ್ತಿದೆಂದು ಹೇಳ ಬೇಕಾಗಿದೆ. ಇನ್ನೊಂದು ವಿಷಯ. ಇನಾಮದಾರರು ಜಮೀನುಗಳನ್ನು ಇತರರಿಗೆ ಕೊಟ್ಟು ಬಿಟ್ಟು, ಉಳುವರಿ ಮಾಡುವುದಕ್ಕೆ ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಈ ಮೂಲಕ litigation ಗೆ ಕಾರಣವಾಗಿದೆ. ಈ litigation ಮೂಲಕ ರೈತರಿಗೆ ಬಹಳ ತೊಂದರೆಯಾಗಿದೆ. ಕೋರ್ಟಿಗೆ ಹೋಗ ಬೇಕಾಗುತ್ತದೆ. ಆದುದರಿಂದ ಸಂಬಂಧಪಟ್ಟ ಇಲಾಖೆಯವರಿಗೆ ಸರ್ಕಾರದವರು ನೇರವಾಗಿ ನಿರ್ದೇಶ ಕೊಡಬೇಕಾರದೆಂದು ಕೇಳಿಕೊಳ್ಳುತ್ತೇನೆ ಈ ವಿಷಯದಲ್ಲಿ ಮಾನ್ಯ ರೆವಿನ್ಯೂ ಸಚಿವರು ಸ್ವಲ್ಪ ಉಪಕಾರ ಮಾಡುತ್ತಾರೆಂಬ ಭರವಸೆಯಿದೆ.

ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ದಿವಸ ಹರಿಜನರಿಗೆ ಜಮೀನು ಕೊಡುತ್ತಾರೆ. ಆ ಜಮೀನುಗಳನ್ನು ಹರಿಜನರ ಹೆಸರಿನಲ್ಲಿ ತೆಗೆದುಕೊಂಡು ಕೆಲವು ಶ್ರೀಮಂತರು ಅನುಭವಿಸುತ್ತಿದ್ದಾರೆ. ಹೆಚ್ಚು ಆಹಾರ ಬೆಳೆಯುವ ಯೋಜನೆಯ ಪ್ರಕಾರ ಅಥವಾ ಬೇರೆ ರೀತಿಯಲ್ಲಿ ಹರಿ ಜನರಿಗೆ ಕೊಟ್ಟಿರುವ ಜಮೀನು ಇತರರ ಕೈಸೇರುತ್ತಿದೆ. ಇಷ್ಟು ಕಾಲ ಪರಭಾರೆ ಕೊಡಬಾರದೆಂದು ಕಡ್ಡಾಯವಿದ್ದರೂ ಹರಿಜನರು ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಯಾವ ಬೆಂಬಲವಿದೆ ಎಂಬುದು ಸರ್ಕಾರದವರು ಪರಿಶೀಲಿಸ ಬೇಕಾದ ವಿಷಯ. ಈ ತರಹ ಪರಭಾರೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಜನರಲ್ಲಿ ಹೆಚ್ಚಿನ ಅಸಮಾಧಾನ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಹೀಗೆ ಮಾರಾಟವಾದರೆ ಕೊಂಡವರಿಂದ ವಾಪಸು ಪಡೆಯಬೇಕು ಮತ್ತು ಮಾರಾಟ ಮಾಡುವವರಿಗೆ ಇನ್ನು ಮುಂದೆ ಜಮೀನು ಕೊಡದಂತೆ ವ್ಯವಸ್ಥೆ ಮಾಡಬೇಕು. ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಜಿ. ಎಂ. ಚಿನ್ನಸ್ವಾಮಿ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೆ, ಈ ಡಿಮ್ಯಾಂಡಿನ ಮೇಲೆ ಕೆಲವು ವಿಷಯಗಳನ್ನು ಹೇಳ ಬೇಕೆಂದು ಇಚ್ಛೆಪಟ್ಟು ನಿಂತಿದ್ದೇನೆ. ಈಗ ಭೂಮಿ ಇಲ್ಲದಿರುವವರಿಗೆ ಹಂಚಿದರೂ ಅದರಿಂದ ಅನುಕೂಲವಾಗುವುದಕ್ಕಿಂತ ತೊಂದರೆಯೇ ಹೆಚ್ಚಾಗಿದೆ. ಆದುದರಿಂದ ತಹಸೀಲುದಾರರು ಕೊನೆಯ ಪಕ್ಷ 5 ಎಕರೆಗಳನ್ನಾದರೂ ಹಂಚಬಹುದೆಂದು ಆಜ್ಞೆ ಹೊರಡಿಸಬೇಕು. ಹಾಗೆ ಮಾಡಿದರೆ ಬಡವರಿಗೆ ಬಹಳ ಅನುಕೂಲವಾಗುತ್ತದೆ.

ಈಗ ತಹಸೀಲ್ದಾರರು ಒಂದು ಸಾವಿರ ರೂಪಾಯಿಗಳಷ್ಟು ಸಾಲ ಕೊಡಬಹುದು. ಅದು ಏತಕ್ಕೂ ಸಾಲುವುದಿಲ್ಲ. ಆದುದರಿಂದ ಅವರು 3 ಸಾವಿರ ರೂಪಾಯಿಗಳ ಸಾಲವನ್ನಾದರೂ ರೈತರಿಗೆ ಕೊಡಲು ಅವಕಾಶ ಕೊಡಬೇಕು. ಇಲ್ಲದಿದ್ದರೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿಗೆ ಬಂದು ಪಡೆಯಲು ರೈತರಿಗೆ ಕಷ್ಟವಾಗುತ್ತದೆ.

ಆ ಮೇಲೆ ನಿಮ್ಮ ಇಲಾಖೆಗಳಲ್ಲಿ ಬಿಳಿ ಆನೆಗಳೇಕೆ ಇವೆ ? ಡಿವಿಜನಲ್ ಕಮಿಷನರ್ ಮತ್ತು ಸಬ್‌ಡಿವಿಜನ್ ಆಫೀಸರ್—ಇವರಿಗೇನೂ ಕೆಲಸವಿಲ್ಲ. ಇವರಿಬ್ಬರನ್ನೂ ಏಕೆ ತೆಗೆದು ಹಾಕಬಾರದು ? ಈ ಹುದ್ದೆಗಳನ್ನು ರದ್ದು ಮಾಡಿದರೆ ಸರ್ಕಾರಕ್ಕೆ ಉಳಿತಾಯವಾಗುವುದಿಲ್ಲವೆ ? ಪೋಸ್ಟ್ ಆಫೀಸಿನಲ್ಲಿ ಒಂದು ಸೀಲು ಹಾಕುವಂತೆ ಬೆಂಗಳೂರಿನಿಂದ ಬಂದ ಕಾಗದಕ್ಕೆ ಮೈಸೂರಿನಲ್ಲಿ ಒಂದು ಸೀಲು ಹೊಡೆದು ನಂಜನಗೂಡಿಗೆ ಕಳುಹಿಸುವುದು ಅವರ ಕೆಲಸವಾಗಿದೆ. ಅವರಿಗೆ ಒಂದು ದಿನವೂ ಕೂಡ ಒಂದು ಗಂಟೆ ಕೆಲಸ ಸಹ ಇರುವುದಿಲ್ಲ.

ಗ್ರಾಮಾಧಿಕಾರಿಗಳ ಹುದ್ದೆ ರದ್ದು ಮಾಡಬೇಕೆಂದು ಹೇಳುತ್ತಿದ್ದರೂ ಆ ಬಿಲ್ ಇನ್ನೂ ಈ ಸಾರಿಯೂ ಬರಲಿಲ್ಲ. ಇನ್ನೂ ಅವರಿರಬೇಕೆಂಬ ಇಷ್ಟವಿದೆಯೋ ಏನೋ ; ಗ್ರಾಮಾಧಿಕಾರಿಗಳಿಂದ ಬಹಳ ತೊಂದರೆಯಾಗುತ್ತಿದೆಯೆಂಬ ಕೂಗಿರುವಾಗ ಮುಂದಿನ ಅಧಿವೇಶನದಲ್ಲಾದರೂ ಈ ಬಿಲ್ಲನ್ನು ತಂದು ಅವರನ್ನು ರದ್ದು ಮಾಡಿ ಅವರಿಗೆ ಕೊಡಬೇಕಾದುದನ್ನು ಕೊಟ್ಟು

ಬಿಡಿ. ಈ ಸಣ್ಣ ವಿಷಯಕ್ಕೇಕೆ ಇಷ್ಟು ನಿಧಾನ? ಚರ್ಚೆ ಇಲ್ಲದೆ ಸಭೆ ಒಪ್ಪುತ್ತದೆ. ಈಗಲೇ ತಂದು ಅಂಗೀಕಾರ ಪಡೆದರೆ ಬಹಳ ಅನುಕೂಲವೆಂದು ಕಾಣುತ್ತದೆ.

ತಾಲ್ಲೂಕುಗಳನ್ನು ಹಂಚಿದ್ದಾರೆ. ಎಳಂದೂರು ತಾಲ್ಲೂಕಿನಲ್ಲಿ 40 ಸಾವಿರ ಜನಸಂಖ್ಯೆ, ಕೊಳ್ಳೆಗಾಲದಲ್ಲಿ 2 ಲಕ್ಷ, ನಂಜನಗೂಡಿನಲ್ಲಿ 2 ಲಕ್ಷ ಇದೆ. ಜನಸಂಖ್ಯೆ ಸ್ವಲ್ಪ ಹೆಚ್ಚು ಕಡಮೆ ಸಮನಾಗಿರುವಂತೆ ತಾಲ್ಲೂಕುಗಳನ್ನು ವಿಂಗಡಿಸಬೇಕು. 20-25 ಸಾವಿರ ಹೆಚ್ಚು ಕಡಮೆ ಯಿದ್ದರೆ ಪರವಾಗಿಲ್ಲ. ಜಾಸ್ತಿಯಾದರೆ ಸಹ ತಹಸೀಲ್ದಾರರು ತಾಲ್ಲೂಕ್ಕೆಲ್ಲಾ ಸುತ್ತಿ ಕೆಲಸ ಮಾಡುವುದಕ್ಕಾಗುವುದಿಲ್ಲ. 2 ಲಕ್ಷ ಇರುವುದನ್ನು ಕಡಮೆ ಮಾಡಿ. ಹಾಗೆ ಮಾಡದಿದ್ದರೆ ಕಾಂಗ್ರೆಸ್ ಪಕ್ಷದ ಸದಸ್ಯರೇ ಹೇಳಿದಂತೆ ಹೆಡ್ ಕ್ವಾರ್ಟರಿನಲ್ಲೇ ಇದ್ದು ಟಿ. ಎ. ತೆಗೆದು ಕೊಳ್ಳುತ್ತಾರೆ. ಆದುದರಿಂದ ಸಮನಾಗಿ ತಾಲ್ಲೂಕುಗಳನ್ನು ಯೂನಿಟ್ ಮಾಡಿ.

ಈಗ ಮುಜರಾಯಿ ದೇವಸ್ಥಾನಗಳಿಂದ ಖಜಾನೆಗೆ ಹಣ ತುಂಬಿಕೊಳ್ಳುತ್ತಿದ್ದಾರೆ. ಆದರೆ ಅವುಗಳ ಮೇಲೆ ಸರ್ಕಾರ ಸಾಕಷ್ಟು ಗಮನ ಕೊಡುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ದೇವಸ್ಥಾನಗಳಿಂದ ಖಜಾನೆಗೆ ಹಣ ಬರುವುದಿಲ್ಲ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಒಂದು ವರ್ಷಕ್ಕೆ ಒಂದು ದೇವಸ್ಥಾನದಲ್ಲಿ 10-12 ಸಾವಿರ ರೂಪಾಯಿ ಉತ್ಪತ್ತಿಯಾದರೆ ಅದನ್ನೇನು ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಆ ದೇವಸ್ಥಾನದ ಖರ್ಚಿಗೆ ಬಿಟ್ಟು ಉಳಿದುದನ್ನು ಅದರ ಹೆಸರಿನಲ್ಲಿ ಡಿಪಾಜಿಟ್ ಇಟ್ಟಿರುತ್ತದೆ. ಅದನ್ನು ಜನರಲ್ ರೆವಿನ್ಯೂಗೆ ತೆಗೆದು ಕೊಳ್ಳುವುದಿಲ್ಲ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಆ ದುಡ್ಡಿನಿಂದ ದೇವಸ್ಥಾನದ ರಿಪೇರಿ ಮಾಡಿಸಬೇಡವೆ? ಇಲ್ಲದಿದ್ದರೆ ದೇವಸ್ಥಾನವೇ ಬೇಡ, ತೆಗೆಸಿಬಿಡಿ, ಶ್ರೀರಂಗಪಟ್ಟಣದ ದೇವಸ್ಥಾನದ ವಿಚಾರ ಏನಾಯಿತು?

*ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ದೇವಸ್ಥಾನಗಳು ಏನ್‌ಷಂಟ್ ಮಾನ್ಯುಮೆಂಟ್ ಲಿಸ್ಟಿಗೆ ಸೇರಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀರಂಗಪಟ್ಟಣದ ದೇವಸ್ಥಾನದಲ್ಲಿ ಕಳವಾಗಿರುವ ವಿಚಾರ ಅವರು ಕೇಳುತ್ತಿರುವುದು.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಈಗ ಎಸ್. ಎಸ್. ಎಲ್. ಸಿ. ಆಗಿರುವವರು ತಹಸೀಲ್ದಾರರಾಗಬಹುದೆಂದು ಆಜ್ಞೆಯಾಗಿದೆ. ಅವರೇನು ಮಾಡಬಲ್ಲರು! ದಕ್ಷತೆ ಬೇಡವೆ? ಅದು ಸಾಲುವುದಿಲ್ಲ. ಕೊನೆಯ ಪಕ್ಷ B. A. ಆದರೂ ಆಗಿರ ಬೇಕು. ತಹಸೀಲ್ದಾರರಿಗೆ ಬಹಳ ಕೆಲಸವಿದೆ. ಟೆನೆನ್ಸಿ ಕೇಸುಗಳು ಸಹ ಅವರಿಗೇ ಸೇರಿವೆ. ತಿಂಗಳಲ್ಲಿ 15 ದಿವಸ ಆ ಕೇಸುಗಳನ್ನು ನಡೆಸುತ್ತಾರೆ. ಇನ್ನು ಬಾಕಿ ದಿವಸ ಸಾಕಷ್ಟು ಪ್ರವಾಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಟೆನಿನ್ಸಿ ಕೇಸುಗಳಿಗೆ ಒಬ್ಬ ಸ್ಪೆಷಲ್ ಆಫೀಸರನ್ನಾದರೂ ನೇಮಿಸಿ. ಇಷ್ಟು ಹೇಳಿ ಅಧ್ಯಕ್ಷರಿಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ.

*ಶ್ರೀ ಮಂಜಪ್ಪ ಉಳ್ಳಾಲ್ (ಕಾರ್ಕಳ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಇವೊತ್ತಿನ ಡಿಮೂಂಡ್‌ಗಳನ್ನು ಅನುಮೋದಿಸುತ್ತ ಒಂದೆರಡು ಮಾತನ್ನು ಹೇಳುತ್ತೇನೆ. ಮೊದಲನೆಯದಾಗಿ ಹಳ್ಳಿಯ ಪ್ರದೇಶವಲ್ಲಿ ಗೋಮಾಳ ಜಮೀನು ಎಂದು ಏನಿದೆ ಅದರ ವಿಷಯದಲ್ಲಿ ಒಂದೆರಡು ಮಾತನ್ನು ನಾನು ಸರ್ಕಾರಕ್ಕೆ ಹೇಳ ಬಯಸುತ್ತೇನೆ. Gomal-land ಅಥವಾ grazing land ಪ್ರತಿಯೊಂದುಹಳ್ಳಿಯಲ್ಲಿಯೂ ಆಯಾ ಹಳ್ಳಿಯ ಆವಶ್ಯಕತೆ ಇರುವಷ್ಟು ಮತ್ತು ಅಲ್ಲಿಯ ದನಕರುಗಳಿಗೆ ಸರಿಯಾದ ಮೇವು ಸಿಕ್ಕುವಂಥ ರೀತಿಯಲ್ಲಿ ಮೀಸಲಿಟ್ಟಿರುವುದು ಅತ್ಯಾವಶ್ಯಕವಿದೆ. ಆದರೆ ಕೆಲವೊಂದು ಕಡೆಗಳಲ್ಲಿ ಯಾವೊಂದು ಆವಶ್ಯಕತೆ ಇಲ್ಲದೆ, ಮತ್ತೆ ಮೇವೂ ಇಲ್ಲದ ಸ್ಥಳಗಳನ್ನು ಬರೀ ಗುಡ್ಡ ಬೆಟ್ಟಗಳನ್ನು grazing land ಎಂದು ರಾಜಕೀಯಕ್ಕಾಗಿ ಕೆಲವು ಜನಗಳಿಗೆ ಜಮೀನು ಕೊಡುವ ಉದ್ದೇಶದಿಂದ ರಿಸರ್ವ್‌ಮಾಡಿರುವುದು ಬಹಳ ವ್ಯಸನಕರವಾದ ಸಂಗತಿ. ದಯಮಾಡಿ ಮಾನ್ಯ ರೆವಿನ್ಯೂ ಸಚಿವರು ಈ ಪ್ರಶ್ನೆಗೆ ಬಹಳ ಗಮನ ಕೊಡುತ್ತಾರೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಾಧ್ಯವಿದ್ದರೆ ಗೋಮಾಳ ಭೂಮಿಯ ಯಾವ ಹಳ್ಳಿಗಳಲ್ಲಿ ಎಷ್ಟೆಷ್ಟು ಎಕರೆ ಇದೆ, ಆ ಜಮೀನು ದನಗಳ ಮೇವಿಗೆ ಆವಶ್ಯವಾಗಿರುವಷ್ಟಿದೆಯೇ, ಅಲ್ಲಿ ಸರಿಯಾಗಿ ಮೇವು ಸಿಕ್ಕುತ್ತದೆಯೇ, ಗ್ರಾಮಗಳಲ್ಲಿ ಸಾಕಷ್ಟು ದನಗಳಿವೆಯೇ ಎಂಬುದನ್ನು ವಿಚಾರಿಸಲಿಕ್ಕೆ ಒಂದು ಸಣ್ಣ ಕಮಿಟಿಯನ್ನು ಮಾಡಬೇಕು ಅಥವಾ ಒಬ್ಬ ಅಧಿಕಾರಿಯನ್ನಾದರೂ ನೇಮಿಸಬೇಕು. ಇದು ಸಣ್ಣ ಪ್ರಶ್ನೆಯಲ್ಲ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಗಳು ಹೇಳಿದ ಹಾಗೆ ದನಗಳಿದ್ದರೂ ಮೇವು ಸಿಕ್ಕುತ್ತದೆ. ಆದರೆ ಜನಗಳಿಗೆ ಉಳಕೊಳ್ಳಲಿಕ್ಕೆ ಸ್ಥಳ ಸಿಕ್ಕುವುದಿಲ್ಲವೆಂದರೆ ಪ್ರಜಾಪ್ರಭುತ್ವದಲ್ಲಿ ಅದರಲ್ಲಿಯೂ ಸ್ವಾತಂತ್ರ್ಯ ಸಿಕ್ಕಿ ಇಷ್ಟುವರ್ಷವಾದರೂ ಕೂಡ ಅದನ್ನು ನಿವಾರಿಸಲಿಕ್ಕೆ ಆಗಲಿಲ್ಲವೆಂದರೆ ಬಹಳ ಪಶ್ಚಾತ್ತಾಪದಿಂದ ಈ ಮಾತನ್ನು ನಾನು ಹೇಳಬೇಕಾಗಿದೆ.

ಭೂಮಿಯನ್ನು ವಿತರಣೆ ಮಾಡುವಾಗ ಹಳ್ಳಿಯ ಪ್ರದೇಶದಲ್ಲಿ ನ್ಯಾಯವಾಗಿ wet land ಇಷ್ಟು ಕೊಡಬೇಕು, dry land ಇಷ್ಟು ಕೊಡ ಬೇಕು ಎಂದು ಸರ್ಕಾರದವರೇ ಬೇಕಾದಷ್ಟು ಕಾರ್ಯಕ್ರಮವನು ತೆಗೆದುಕೊಂಡು ಬೇಕಾದ ಕಾನೂನುಗಳನ್ನು ಮಾಡಿದರೂ ಕೂಡ ಕೆಳ ಮಟ್ಟಕ್ಕೆ ಹೋಗುವಾಗ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಜಾರಿಗೆ ತರುವುದಿಲ್ಲವೆಂದರೆ ಸರ್ಕಾರದ ಮೇಲೆ ಈ ಅಧಿಕಾರಿಗಳು ಒಂದು ರೀತಿಯ ವಿರೋಧ ಚಳವಳಿಯನ್ನು ಮಾಡುತ್ತಿದ್ದಾರೆಂದು ನಾನಂತೂನೆನಸಿ ಕೊಳ್ಳಬೇಕಾಗಿದೆ. ಯಾವ ಯಾವ ಅಧಿಕಾರಿಗಳು ಎಷ್ಟೆಷ್ಟು ಭೂಮಿಯನ್ನು ಕಳೆದ ಮೂರು ವರ್ಷಗಳಿಂದ ಕೊಟ್ಟಿದ್ದಾರೆ, ಕೊಡದೆ ಇದ್ದರೆ ಅದಕ್ಕೆ ಕಾರಣವೇನು, ಮತ್ತು ಕೊಡಲಿಕ್ಕೆ ಏನು ತೊಂದರೆಯಾಗಿದೆ ಎಂಬುದನ್ನು ದಯಮಾಡಿ ವಿಚಾರಿಸುತ್ತೀರೆಂದು ನಂಬುತ್ತೇನೆ.

ತಾಲ್ಲೂಕಾಫೀಸಿಗೆ ಹೋದರೆ ಭೂಮಿಗೆ ಅರ್ಜಿ ಹಾಕಿ ಕೊಳ್ಳುವುದಕ್ಕೆ ಬೇಕಾದ ಫಾರಂಗಳು ಸಿಕ್ಕುವುದಿಲ್ಲ. ಕೆಲವು ಜನರು ತಮ್ಮ ಕೈ ಬರಹ ಅಥವಾ ಬೇರೆಯವರ ಕೈ ಬರಹದಿಂದ ಬರೆಸಿ ಅದಕ್ಕೆ ಬೇಕಾದ ಸ್ಟಾಂಪ್ ಹಚ್ಚಿ, ಕ್ರಮವಾದ ರೀತಿಯಲ್ಲಿ ಬರೆದರೂ ಕೂಡ ಅದನ್ನು ವಾಪಸ್ಸು ಕಳುಹಿಸಿದ್ದಾರೆ.

ಕಳೆದಸಾರಿ ಸಹ ನಾನು ಮಾತನಾಡುತ್ತ ತಾಲ್ಲೂಕಾಫೀಸ್‌ಗಳಲ್ಲಿ ಸರ್ವೆನಂಬರ್‌ಗಳು ಸಿಕ್ಕುವುದಿಲ್ಲ, ಎಲ್ಲೆಲ್ಲಿ ಜಮೀನಿದೆ ಎಂಬುದು ಸಿಕ್ಕುವುದಿಲ್ಲವೆಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಅವರು ಈ ಬಗ್ಗೆ ತಿಳಿವಳಿಕೆಯನ್ನೂ ತಾಲ್ಲೂಕಾಫೀಸುಗಳಿಗೆ ಮತ್ತು ಜಿಲ್ಲಾಧಿಕಾರಿಗೆ ಕೊಟ್ಟಿರಬಹುದು. ಭೂಮಿ ಇಲ್ಲದವರೂ, ಬಡವರೂ ಹೋಗಿ ಒಂದುಕಡೆ ಕುಳಿತುಕೊಂಡರೆ ಅವನಮೇಲೆ ಆಕ್ರಮಣದ ಕೇಸ್

(ಶ್ರೀ ಮಂಜಪ್ಪ ಉಳ್ಳಾಲ್)

ಹಾಕುತ್ತಾರೆ ಮತ್ತು ಅವರನ್ನೂ ಬೇಕಾದ ರೀತಿಯಲ್ಲಿ ಶಿಕ್ಷೆ ಮಾಡುತ್ತಾರೆ. ಇದನ್ನು ಆದಷ್ಟು ಮುತುವರ್ಜಿಯಿಂದ ವಿಚಾರಿಸುತ್ತಾರೆಂದು ನಾನು ನಂಬುತ್ತೇನೆ.

ಕೆಲವು ಭೂಮಿಗಳಲ್ಲಿ ಕೆಲವು ಬಡರೈತರು ಹಿಂದುಳಿದವರು, ನಿಮ್ಮ ವರ್ಗದವರು ಮತ್ತು ಎಲ್ಲ ಜಾತಿಯವರು ಕುಳಿತುಕೊಂಡು ಹತ್ತಿಪ್ಪತ್ತು ವರ್ಷಗಳಾದರೂ ಕೂಡ ಆ ಭೂಮಿ ಅವರಸ್ವಾಧೀನಕ್ಕೆ ಸಿಕ್ಕುತ್ತಿಲ್ಲ. ಅದಕ್ಕೆ ಸಂಬಂಧಪಟ್ಟ 'ಡಿ' ನೋಟೀಸ್ ಅಥವಾ ಪಟ್ಟಿ ಕೊಡುವ ಒಂದು ಪದ್ಧತಿ ಇದೆ. ಅದನ್ನೂ ಕೊಟ್ಟಿಲ್ಲ ಮತ್ತು ಭೂಮಿಯ ಸ್ವಾಧೀನ ಸಿಕ್ಕಿಲ್ಲ. ಆ ಭೂಮಿಗೆ ಇನ್ನು ಯಾರಾದರೂ ಅರ್ಜಿ ಹಾಕಿದರೆ, ಅವರಿಗೆ influence ಇದ್ದರೆ, ಅವರು ದೊಡ್ಡವರಿದ್ದರೆ, ಅವರಿಗೆ ಭೂಮಿ ಸಿಕ್ಕುತ್ತದೆ. ಇಂಥ ಪರಿಸ್ಥಿತಿಯಲ್ಲಿ ಬಡ ಜನರಿಗೆ ಭೂಮಿ ಸಿಗದೆ ಹೋಗುವ ಸಂದರ್ಭವಿದೆ. ಇಂಥ ಎಷ್ಟೋ ಕೇಸುಗಳು ಅಲ್ಲಲ್ಲಿ ನಡೆಯುತ್ತಿವೆ. ನಮ್ಮ ಜಿಲ್ಲೆಯಲ್ಲಿಯೂ ನಡೆಯುತ್ತಿವೆ. ಆದುದರಿಂದ ಭೂಮಿಯನ್ನು ವಿತರಣೆ ಮಾಡುವಾಗ ಅದಕ್ಕೆ ಸಂಬಂಧಪಟ್ಟ ಎಲ್ಲ ಕಾರ್ಯಕ್ರಮಗಳನ್ನೂ, ಅದರಲ್ಲಿಯೂ ಬಡವರಿಗೆ ಹೆಚ್ಚು ಭೂಮಿ ಸಿಕ್ಕುವಹಾಗೆ, ಸ್ವಲ್ಪ ಮನಸ್ಸು ದೊಡ್ಡದು ಮಾಡಬೇಕು ಎಂದು ನಾನು ತಮ್ಮಲ್ಲಿ ವೈಯಕ್ತಿಕವಾಗಿ, ಈ ಸಭೆಯ ಎಲ್ಲ ಸದಸ್ಯರ ಪರವಾಗಿ ಮತ್ತು ಬಡಜನರ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ.

ಸಮಾಜ ವಿಕಾಸ ಯೋಜನೆಯ ವಿಷಯದಲ್ಲಿ ಎರಡು ಮಾತನ್ನು ಹೇಳುತ್ತೇನೆ. ಸಮಾಜ ವಿಕಾಸ ಯೋಜನೆ ಎಂದರೆ ಸರ್ವ ಸಾಧಾರಣವಾಗಿ ಜನರ ವಿಕಾಸವಾಗದೆ ಯಾವುದೇ ಅಭಿವೃದ್ಧಿ ಕಾರ್ಯವಾಗಲೀ, ಇನ್ನು ಯಾವುದೇ ಕಾರ್ಯವಾಗಲಿ ಮಾಡಿದರೂ ಕೂಡ ಅದನ್ನು ಜನರು ಸರ್ವ ಸಾಧಾರಣವಾಗಿ ಒಪ್ಪಿಕೊಳ್ಳುವುದಿಲ್ಲ. ಆದುದರಿಂದ ಮೊದಲಾಗಿ ಜನರ ಮನಸ್ಸಿನ ಪರಿವರ್ತನೆ ಸಾಮೂಹಿಕವಾಗಿ ನಡೆಯ ನಡೆಯಬೇಕಾಗಿದೆ. ಇದಕ್ಕೆ ನಮ್ಮ ಮಂತ್ರಿವರ್ಯರು ಎಲ್ಲ ರೀತಿಯ ಕಾರ್ಯಕ್ರಮವನ್ನೂ ತೆಗೆದುಕೊಂಡಿದ್ದಾರೆ. ತಮ್ಮ ಶಕ್ತಿಮೀರಿ ಅಲ್ಲಲ್ಲಿ ಪ್ರವಾಸಮಾಡಿ ಬಹಳ ಉತ್ಸಾಹದಿಂದ, ಮುತುವರ್ಜಿಯಿಂದ ಕೆಲಸ ಮಾಡಿ ಸಮಾಜ ವಿಕಾಸ ಯೋಜನೆ ಏನೆಂಬುದನ್ನು ಜನರಿಗೆಲ್ಲ ತಿಳಿಸಿದ್ದಾರೆ. ಇದರಿಂದಾಗಿ ಜನರ ಕಾಂಟ್ರಿಬ್ಯೂಷನ್ ಏನಿದೆ ಅದನ್ನೂ ಶ್ರಮದಾನ ಇಂಥವುಗಳ ಮೂಲಕ ಅಭಿವೃದ್ಧಿ ಯೋಜನೆಗಳಿಗೆ ಕೊಟ್ಟು ಸಹಕರಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಬೇಕಾದ ಶಾಲೆಗಳನ್ನೂ ಮಾರ್ಗಗಳನ್ನೂ ಇತರ ಯಾವುದೇ ಕಟ್ಟಡಗಳನ್ನು ಮಾಡಲು ಜನರು ತಮ್ಮ ಕಾಂಟ್ರಿಬ್ಯೂಷನನ್ನೂ ಕೆಲಸದ ಮೂಲಕ ಅಥವಾ ಹಣದ ಮೂಲಕ ಅಥವಾ ಇನ್ನು ಯಾವುದಾದರೂ ರೀತಿಯಲ್ಲಿ ಕೊಟ್ಟು ಹೆಚ್ಚಾಗಿ ಸಹಕರಿಸುತ್ತಿದ್ದಾರೆ. ಆದರೆ ಕೆಲವು ಊರುಗಳಲ್ಲಿ ಎಲ್ಲಿ ನಿಮ್ಮ ವರ್ಗದ ಜನರು ಮತ್ತು ಬಡಜನರು ಇರುತ್ತಾರೆಯೋ ಅಲ್ಲಿ ಯಾವ ಯೋಜನೆಯನ್ನೂ ತೆಗೆದುಕೊಂಡಿಲ್ಲ ಅಲ್ಲಿಗೆ ಏನು ಬೇಕೆಂಬುದು ಯೋಜನೆಯಲ್ಲಿ ಅಡಕವಾಗಿಲ್ಲ. ಆದುದರಿಂದ ಸಮಾಜ ವಿಕಾಸ ಯೋಜನೆ ಹಳ್ಳಿಯ ಮಟ್ಟದಿಂದ ಮೇಲೆ ಬರುವಾಗ ಎಲ್ಲೆಲ್ಲಿ ಎಷ್ಟೆಷ್ಟು ಬಡವರಿದ್ದಾರೆ, ಎಷ್ಟು ಭೂಮಿ ಇದೆ, ಅವರಿಗೆ ಏನೇನು ಬೇಕು, ಈ ವರ್ಗದ ಜನರಿರುವ ಕಡೆಗಳಲ್ಲಿ ಏನು ಯೋಜನೆ ಬೇಕೆಂಬುದನ್ನು ಸ್ಪಷ್ಟವಾಗಿ ಯೋಜನೆಯಲ್ಲಿ ಹೇಳಿಲ್ಲ. ಇನ್ನಾದರೂ ಸಹ ತಮ್ಮ ಇಲಾಖೆ ಖರ್ಚು ಮಾಡತಕ್ಕ ಹಣವನ್ನೂ ಆದಷ್ಟು ಮಟ್ಟಿಗೂ ಬಡ ಜನರಿರುವ ಕಡೆ, ಅದರಲ್ಲಿಯೂ ಹರಿಜನರಿರುವ ಸ್ಥಳಗಳಲ್ಲಿ ವಿನಿಯೋಗಿಸಬೇಕು. ಅವರು ಶುಚಿಯಾಗಿರಲು ಊರನ್ನೂ ಯಾವ ರೀತಿ ಇಟ್ಟುಕೊಳ್ಳಬೇಕು, ಅವರಿಗೆ ಏನೇನು ಸೌಲಭ್ಯಗಳು ಬೇಕು, ಅಲ್ಲಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾಗಿರುವ ಶಾಲೆ ಮುಂತಾದುವನ್ನು ಒದಗಿಸಿಕೊಡುವ ಮತ್ತು ಆ ಜನರಿಗೆ ಸಾಮೂಹಿಕವಾದ ಮಾನಸಿಕ ಎಚ್ಚರಿಕೆಯನ್ನೂ ಕೊಡುವ ಕಾರ್ಯಕ್ರಮವನ್ನೂ ನಮ್ಮ ಸಮಾಜ ವಿಕಾಸ ಯೋಜನೆಯಲ್ಲಿ ಇಟ್ಟುಕೊಳ್ಳುತ್ತಾರೆಂದು ನಾನು ನಂಬುತ್ತೇನೆ.

ತಮ್ಮಲ್ಲಿ ಬೇಕಾದಷ್ಟು ಅಧಿಕಾರಿಗಳಿದ್ದಾರೆ. ಗ್ರಾಮ ಸೇವಕರು ಮತ್ತು ಗ್ರಾಮ ಸೇವಕಿಯರಿದ್ದಾರೆ. ಇವರೆಲ್ಲ ಇದ್ದರೂ ಕೂಡ ಹಳ್ಳಿಗಳಲ್ಲಿ ಈ ಜನರು ಹರಿಜನರು ಇರುವ ಕಡೆ ಹೋಗಿ ನಿಮಗೆ ಏನು ಬೇಕು, ಭೂಮಿ ಸಿಕ್ಕಿಲ್ಲವೇ, ಶಾಲೆಗೆ ಮಕ್ಕಳು ಹೋಗುವುದಿಲ್ಲವೇ, ಶಾಲೆಗೆ ಏಕೆ ಹೋಗುವುದಿಲ್ಲ, ಹತ್ತಿರದಲ್ಲಿ ಶಾಲೆ ಇದೆಯೇ, ಇಲ್ಲದೆ ಇದ್ದರೆ ರಾತ್ರಿ ಶಾಲೆ (evening school) ತೆರೆಯೋಣ ಎಂದು ಕೇಳುವುದಿಲ್ಲ. ಏನೂ ತಿಳಿಯದ ಜನಾಂಗಕ್ಕೆ ಯಾವುದೇ ಎಲ್ಲ ಗ್ರಾಮ ಸೇವಕರೂ ಎಲ್ಲ ವರ್ಗದ ಜನರ ಹತ್ತಿರ ಹೋಗಿ, ಹತ್ತಿರದ ಸಂಪರ್ಕವನ್ನೂ ಬೆಳಸಿ ಕೊಂಡು, ಸರ್ಕಾರದ ಯೋಜನೆಯನ್ನೂ ಆ ಜನರಿಗೆ ತಿಳಿಸುವಂಥ ಪ್ರಚಾರ ಕಾರ್ಯವನ್ನೂ ಆದಷ್ಟು ಹೆಚ್ಚಿನ ರೀತಿಯಲ್ಲಿ ಗ್ರಾಮ ಗ್ರಾಮದಲ್ಲಿಯೂ ಮಾಡುತ್ತಾರೆಂದು ನಂಬುತ್ತೇನೆ.

ಸಸಿಗಳನ್ನೂ ನೆಡುವ ಕಾರ್ಯವೆಂದರೆ ವನಮಹೋತ್ಸವವೇನಿದೆ ಅದಕ್ಕೆ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ All India level ನಲ್ಲಿ ಬಹುಮಾನಗಳನ್ನೂ ಕೊಡುತ್ತಾರೆ. ಇದೇ ರೀತಿ ಯಾವ ಊರಿನಲ್ಲಿ ಅಸ್ಪೃಶ್ಯತೆ ಕಡಮೆಯಾಗುತ್ತಿದೆಯೋ, ಅಥವಾ ಯಾವ ಗ್ರಾಮದಲ್ಲಿ ಅಸ್ಪೃಶ್ಯತೆ ಇರುವುದಿಲ್ಲವೋ ಅಂಥ ಗ್ರಾಮಗಳಿಗೆ ಬಹುಮಾನಗಳನ್ನೂ ಕೊಡುವ ಒಂದು ಯೋಜನೆಯನ್ನೂ ಸರ್ಕಾರ ಮಾಡಿದರೆ ಸರ್ವಸಾಧಾರಣವಾಗಿ ಮುಂದುವರಿದ ಜನರ ಮಾನಸಿಕ ವಿಕಾಸಕ್ಕೆ ಮನಸ್ಸನ್ನೂ ಬದಲಾಯಿಸಲು ಅದು ಒಳ್ಳೆಯ ಕ್ರಮವೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಸರ್ಕಾರ ಇನ್ನು ಮುಂದೆ ಸಮಾಜ ವಿಕಾಸ ಯೋಜನೆಯಲ್ಲಿ (untouchability) ಅಸ್ಪೃಶ್ಯತೆಯನ್ನೂ ಯಾವ ಗ್ರಾಮದಲ್ಲಿ ಬಿಟ್ಟಿದ್ದಾರೆಯೋ ಆ ಗ್ರಾಮಕ್ಕೆ ಅಥವಾ ಪಂಚಾಯಿತಿಗೆ ಇಂಥ ಒಂದು ಇನಾಂ ಕೊಡುವ ವ್ಯವಸ್ಥೆಯನ್ನು ಮಾಡಿಸಬೇಕು.

ಸಮಾಜ ವಿಕಾಸ ಯೋಜನೆಯಲ್ಲಿ ತಾಲ್ಲೂಕು ಆಫೀಸಿನಲ್ಲಿ ಸಬ್‌ಸಿಡಿಗಳನ್ನೂ ಸಾಲ ಇತ್ಯಾದಿಗಳನ್ನೂ ಹಂಚುವುದಕ್ಕೋಸ್ಕರ ಬೇಕಾದ ವ್ಯವಸ್ಥೆಯನ್ನೂ ಮಾಡಿ ಹಣವನ್ನು ಒದಗಿಸಿ ಕೊಟ್ಟಿದ್ದಾರೆ. ಕೆಲವು ತಾಲ್ಲೂಕು ಆಫೀಸುಗಳಲ್ಲಿ ಹರಿಜನರಿಗೆ ಮನೆ ಕಟ್ಟುವುದಕ್ಕೆ ಇತ್ಯಾದಿಗಳಿಗೆ ಹಣ ಸ್ಯಾಂಕ್ಷನ್ ಕೊಡಲಿಕ್ಕೆ ಬೇಕಾದ ಸಿಬ್ಬಂದಿ ಇಲ್ಲ. ಸಬ್‌ಸಿಡಿಗೋಸ್ಕರ ತಾಲ್ಲೂಕು ಆಫೀಸಿಗೆ ಅನೇಕ ಹರಿಜನರು ಅರ್ಜಿ ಹಾಕಿಕೊಂಡಿದ್ದಾರೆ. ಆದರೆ ಈವರೆಗೂ ಅದರ ಬಗ್ಗೆ ಯಾವ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ತಾಲ್ಲೂಕು ಆಫೀಸುಗಳಲ್ಲಿ ಈ ರೀತಿ ಮನೆ ಕಟ್ಟುವುದಕ್ಕೆ ಬೇಕಾದ ಸಬ್‌ಸಿಡಿಗಳನ್ನೂ ಕೊಡಲು ವ್ಯವಸ್ಥೆ ಮಾಡುವುದಕ್ಕೆ ಬಹಳ ತಡವಾಗುತ್ತದೆ. ಆದುದರಿಂದ ದಯವಿಟ್ಟು ತಾಲ್ಲೂಕು ಆಫೀಸುಗಳಲ್ಲಿ ಸ್ಟಾಫ್

ಕಡಿಮೆ ಆಗದ ರೀತಿಯಲ್ಲಿ ಅವರು ಕೇಳಿರುವ ಕ್ಲಾರ್ಕ್‌ಗಳನ್ನು ಸ್ಯಾಂಕ್ಷನ್ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

6 P.M.

ವನ ಮಹೋತ್ಸವದ ಸಂಬಂಧದಲ್ಲಿ ಸಸಿಗಳನ್ನೂ ಧರ್ಮಾರ್ಥವಾಗಿ ಹಂಚುತ್ತಿದ್ದಾರೆ. ಅದು ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ದುರುಪಯೋಗ ವಾಗುತ್ತಿದೆ. ಮತ್ತು ಸಸಿಗಳ ಜೊತೆಗೆ ಕೃತಕ ಗೊಬ್ಬರ ಮತ್ತು ಇತರೆ ಗೊಬ್ಬರವನ್ನೂ ಸಹ ಹಂಚುತ್ತಾರೆ. ಅದು ಎಲ್ಲಾ ಸರಿಯಾದ ರೀತಿಯಲ್ಲಿ ಯಾರಿಗೆ ಹೋಗಬೇಕೋ ಅವರಿಗೆ ಹೋಗುತ್ತಾ ಇಲ್ಲ. ರೈತರಿಗೆ ಸಿಕ್ಕುವುದಿಲ್ಲ. ಇದನ್ನಾದರೂ ಆದಷ್ಟು ಜಾಗರೂಕತೆಯಿಂದ ಬಡ ರೈತರಿಗೆ ಸಿಕ್ಕುವ ವ್ಯವಸ್ಥೆಯನ್ನು ಮಾಡುತ್ತೀರೆಂದು ನಾನು ನಂಬಿದ್ದೇನೆ.

ಕೈಗಾರಿಕೆಗಳನ್ನು ಸ್ಥಾಪಿಸುವಾಗ ಹೆಚ್ಚಿಗೆ ಪೇಟೆ, ಪಟ್ಟಣಗಳಲ್ಲೇ ಸ್ಥಾಪಿಸುವುದಕ್ಕೆ ಅವಕಾಶವನ್ನು ಕೊಡುತ್ತಾ ಬಂದಿದ್ದೀರಿ. ಹಳ್ಳಿಗಳಲ್ಲಿಯೂ ಕೂಡ ಅನೇಕ ಕಡೆಗಳಲ್ಲಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತಿದೆ. ಆದುದರಿಂದ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಹೆಚ್ಚಿಗೆ ಸ್ಥಾಪಿಸುವಾಗ ಬರಿಯ ಪಟ್ಟಣಗಳ ವರಿಗೇ ಕೊಡದೆ, ಯಾರಾದರೂ ಹಳ್ಳಿಗಳಕಡೆ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸುತ್ತೇವೆಂದು ಮುಂದೆ ಬಂದರೆ ಅಂಥವರಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎನ್. ಜಿ. ನರಸಿಂಹೇಗೌಡ.—ಸ್ವಾಮಿ, ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರ ತಕ್ಕಂಥ ಡಿಮ್ಯಾಂಡಿನ ಮೇಲೆ ಬಹುಶಃ ಎಲ್ಲರೂ ಸಹ ಮಾತನಾಡಿದ್ದಾರೆ. ಮುಖ್ಯವಾಗಿ ರೆವಿನ್ಯೂ ಡಿಮ್ಯಾಂಡ್ ದೇಶದ ಬೆನ್ನುಮೂಳೆ ಯಾದ ರೈತರಿಗೆ ಸಂಬಂಧ ಪಟ್ಟದ್ದು. ರೈತನ ಬೆಳೆವಣಿಗೆಗೆ ಬೇಕಾದ ಕಾಗದ ಪತ್ರಗಳ ಓಡಾಟಕ್ಕೆ ದೇಶದ ಆಡಳಿತದಲ್ಲಿ ಸೂಚನೆಯನ್ನು ನೀಡ ತಕ್ಕಂಥ ಒಂದು ಭಾಗ ಎಂದರೆ ರೆವಿನ್ಯೂ ಇಲಾಖೆ. ಇತರ ಎಲ್ಲಾ ಇಲಾಖೆಗಳಿಗಿಂತಲೂ ತಳಹದಿ ರೆವಿನ್ಯೂ ಇಲಾಖೆ. ಆದರೆ ಇವೊತ್ತಿನ ದಿವಸ ಸೆಕ್ರೆಟೇರಿಯಟ್ ಲೆವೆಲ್‌ನಲ್ಲಿ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ತಾಲ್ಲೂಕು ಲೆವೆಲ್‌ನಲ್ಲಿ ಕಾಗದ ಪತ್ರಗಳ ಓಡಾಟವನ್ನು ನೋಡುವುದಾದರೆ ಸ್ವಪ್ನದಲ್ಲಿ ರಾಜ್ಯವನ್ನು ಆಳುತ್ತಿದ್ದಾರೋ ಏನೋ ಎಂದು ಅನಿಸುತ್ತದೆ. 1947ನೆಯ ಇಸವಿಗಿಂತ ಹಿಂದೆ ಯಾರಾದರೂ ಸದಸ್ಯರು, ಸಾರ್ವಜನಿಕರು ಏನಾದರೂ ಹೇಳಿದರೆ ಕಾಗದಪತ್ರಗಳು ಬಹುಶಃ ನಾನು ತಿಳಿದು ಕೊಂಡಿರುವಹಾಗೆ ಒಂದು ತಿಂಗಳಲ್ಲಿ ಫೈಸಲಾಗುತ್ತಿದ್ದುವು. ಈಗ ಅದೆಲ್ಲವೂ ಬದಲಾವಣೆಯಾಗಿದೆ. ನಿಮ್ಮ ಕೈಯ್ಯಲ್ಲಿ ಆಡಳಿತ ಸಿಕ್ಕಿ ಶಕ್ತಿ ಕುಂದಿ ಹೋಗಿದೆ. ಶ್ರೀ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಅವರು ಈ ವಿಷಯವನ್ನು ತಿಳಿದು ಕೊಳ್ಳಬೇಕು. ಒಟ್ಟು ದೇಶದ ಉತ್ಪತ್ತಿ 62 ಕೋಟಿ ರೂಪಾಯಿಗಳಲ್ಲಿ ಸುಮಾರು 22½ ಕೋಟಿ ರೂಪಾಯಿಗಳನ್ನು ಈ ರೆವಿನ್ಯೂ ಬಾಬಿಗೆ ಖರ್ಚು ಮಾಡುತ್ತಿದ್ದೇವೆ. ಇದರಲ್ಲಿ ರೈತರಿಗೆ ನೇರವಾಗಿ ಕೊಡಬೇಕಾದುದು ನ್ಯಾಯವಾಗಿ ದೊರೆಯುತ್ತಿದೆಯೇ ಎಂದು ನೋಡಿದರೆ ನಮ್ಮ ಆತ್ಮ ನೋಯುತ್ತದೆ. ಬರಿಯ ಪ್ಲಾಟ್‌ಫಾರಮ್‌ಗಳ ಮೇಲೆ ಭಾಷಣ ಮಾಡಿದರೆ, ನೋಟೀಸುಗಳನ್ನು ಹಂಚಿದರೆ ಜನಗಳ ಕುಂದು ಕೊರತೆಗಳನ್ನು ಬಗೆ ಹರಿಸುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿರತಕ್ಕ ಅಧಿಕಾರಿಗಳ ಹೃದಯ ಪರಿವರ್ತನೆಯಾಗಬೇಕು. ಮಂತ್ರಿಗಳ ಹೃದಯ ಪರಿವರ್ತನೆಯಾಗಬೇಕು. ಅಲ್ಲಿಯವರೆಗೆ ದೇಶ ಮುಂದಕ್ಕೆ ಬರುವುದಿಲ್ಲ. ಮಾನ್ಯ ಮಂತ್ರಿಗಳು ಪೆಂಡಿಂಗ್ ಇರುವ ಕಾಗದ ಪತ್ರಗಳನ್ನು ವಿಚಾರಿಸಿ, ಕಾಗದ ಪತ್ರಗಳ ಓಡಾಟವನ್ನು ನಿಲ್ಲಿಸಿ ನಿಷ್ಠೆಯಿಂದ ಎಫಿಸಿಯೆಂಟ್ ಆಗಿ ಕೆಲಸ ಮಾಡುವ ಹಾಗೆ ಮಾಡಿದರೆ ನಿಜವಾಗಿಯೂ, ಇಂಥಾರಾಜ್ಯ, ಇಂಥಾದೇಶ ಮುಂದಕ್ಕೆ ಬರುತ್ತದೆಯೇ ವಿನಾ, ಬರಿಯ ಇವೊತ್ತಿನ ದಿವಸ ಅಸೆಂಬ್ಲಿಯಲ್ಲಿ ಡಿಮ್ಯಾಂಡಿನ ಮೇಲೆ ಮಾತನಾಡಿದುದನ್ನು ಕೇಳಿ ನೋಟು ಹಾಕಿಕೊಂಡು ಹೋಗಿ ಅದು ಸೆಕ್ರೆಟರಿಗೆ ಹೋಗಿ ಪುನಃ ಜವಾಬು ತರಿಸಿ ಕೊಂಡು ಮಾಡುವುದರಿಂದ ನಿಜವಾಗಿಯೂ, ದೇಶಕ್ಕೆ, ಅನುಕೂಲವಾಗುವುದಿಲ್ಲ. ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಹೋಲ್‌ಸೇಲಾಗಿ ರೀಆರ್ಗ್‌ನೈಜ್ ಆಗಬೇಕು. ಆದುದರಿಂದ ಈ ರೆವಿನ್ಯೂ ಡಿಪಾರ್ಟ್‌ಮೆಂಟನ್ನು ರೀಆರ್ಗನೈಜ್ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಟಿ. ಡಿ. ಮಾರಣ್ಣ.—ಯಾವ ರೀತಿ ರೀಆರ್ಗನೈಜ್ ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಎನ್. ಜಿ. ನರಸಿಂಹೇಗೌಡ.—ಒಂದು ಸಲಹಾ ಸಮಿತಿಯನ್ನು ಮಾಡಿ ಅದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ಮಾಡಿ. ಇನ್ನು ಡಿವಿಜನಲ್ ಕಮೀಷನರುಗಳ ಆಫೀಸುಗಳನ್ನು ಕಡಿಮೆಮಾಡುವುದು ಬಹಳ ಸೂಕ್ತ ಎಂದು ನಾನು ಸಲಹೆ ಮಾಡುತ್ತೇನೆ. ಇಬ್ಬರು ರೆವಿನ್ಯೂ ಕಮಿಷನರನ್ನು ನೇಮಕ ಮಾಡಬೇಕು. ನಮ್ಮ ದೇಶ ದೊಡ್ಡದಾಗಿರುವುದರಿಂದ ಅದನ್ನು ಎರಡು ಭಾಗ ಮಾಡಿ ಒಂದೊಂದು ಭಾಗಕ್ಕೆ ಒಬ್ಬೊಬ್ಬರು ರೆವಿನ್ಯೂ ಕಮಿಷನರಂತೆ ಇಬ್ಬರು ರೆವಿನ್ಯೂ ಕಮಿಷನರನ್ನು ಇಟ್ಟುಕೊಂಡರೆ ಸಾಕು ಎಂದು ನಾನು ಹೇಳುತ್ತೇನೆ. ಆ ರೀತಿ ಮಾಡಿದರೆ ಎಲ್ಲಾ ಕೆಲಸ ಕಾರ್ಯಗಳೂ ನೇರವಾಗಿ ನಡೆಯುತ್ತವೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ಗೇರು ಬೀಜದ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟಿಲ್ಲ. ಇದನ್ನು ನಾನು ಆಗಿಂದಾಗ್ಯೆ ಹೇಳುತ್ತಲೇ ಬಂದಿದ್ದೇನೆ. ಇದಕ್ಕೆ 20—30 ವರ್ಷ ಭೂಮಿಯನ್ನು ಲೀಜ್ ಕೊಡುತ್ತಾರೆ. ಈ ಗೇರುಬೀಜದ ವ್ಯವಸಾಯಕ್ಕಾಗಿ ಜಮೀನು ಕೊಡಬೇಕೆಂದು ಹಾಕಿದ ಅಪ್ಲಿಕೇಷನ್‌ಗಳು ಬಹಳ ದಿವಸಗಳಿಂದ ಪೆಂಡಿಂಗ್ ಆಗಿ ಇರುತ್ತವೆ. ಇವನ್ನು ಬೇಗನೆ ಇತ್ಯರ್ಥ ಮಾಡಬೇಕು. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ, ಗೇರು ಬೀಜದ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕು. ಉದಾಹರಣೆಗೆ ಹಾಸನ ಡಿಸ್ಟ್ರಿಕ್ಟಿನ ವಿಷಯದಲ್ಲಿ ಹೇಳುವುದಾದರೆ ನಾನು ಗೇರು ಬೀಜದ ವ್ಯವಸಾಯವನ್ನು ಮಾಡಬೇಕು ಎಂದು ಸರ್ಕಾರಕ್ಕೆ ಅರ್ಜಿಕೊಟ್ಟು ಎರಡು ವರ್ಷಗಳಾದುದು ಇವೊತ್ತಿನ ವರೆಗೂ 10 ಸಾರಿ ರೆಫರೆನ್ಸ್ ಮಾಡಿದ್ದೇನೆ. ತಹಶೀಲ್‌ದಾರರಿಗೆ ಹೇಳಿದ್ದೇನೆ. ನಾಲ್ಕು ಸಾರಿ ಡೆಪ್ಯುಟಿ ಕಮಿಷನರಿಗೆ ಹೇಳಿದ್ದೇನೆ. ಎರಡು ವರ್ಷಗಳಾದರೂ ನನ್ನ ಕಾಗದ ಈಚೆಗೆ ಬಂದಿಲ್ಲ. ನನ್ನ ಕಾಗದವೇ ಇಷ್ಟು ಡಿಲೇ ಆಗಬೇಕಾದರೆ ಬಾಕಿಯವರ ಪರಿಸ್ಥಿತಿ ಏನು? ಇದನ್ನು ಸ್ವಲ್ಪ ಗಮನದಲ್ಲಿ ಇಟ್ಟುಕೊಳ್ಳಬೇಕು.

ಸ್ವಾಮಿ, ನಮ್ಮ ಇಂಡಿಯಾ ದೇಶದಲ್ಲಿ ರೈತರಿಗೆ ಬಹು ಮುಖ್ಯವಾಗಿ ಬೇಕಾಗಿರುವುದು ಜಮೀನು. ಜಮೀನಿನಿಂದಲೇ ರೈತನು ಜೀವಿಸಬೇಕು. ರೈತನಿಗೆ

(ಶ್ರೀ ಎನ್. ಜಿ. ನರಸಿಂಹೇಗೌಡ)

ಸಹಾಯ ಮಾಡುವಾಗ ಬಾಕೀಮಧ್ಯಸ್ಥಗಾರರ, ಬಂಡವಾಳ ಶಾಹಿಗಳ ಅಥವಾ ನನ್ನಂತಹ ಎಂ. ಎಲ್ ಎ. ಗಳ ವಿಚಾರವನ್ನು ಬಿಟ್ಟು ಬಿಡಿ. ರೈತನ ಸ್ಥಿತಿಯನ್ನು ನೋಡಿ ಅವನಿಗೆ ಜಮೀನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳು ತ್ತಿದ್ದೇನೆ. ಹೀಗೆ ಹೇಳುತ್ತಿದ್ದರೂ ಸಾಮಾನ್ಯವಾಗಿ ಅನೇಕ ಬಡಜನಗಳಿಗೆ ಜಮೀನು ಸಿಕ್ಕುತ್ತಿಲ್ಲ. ಜಮೀನುಗಳಿಲ್ಲದೇ ಇರುವಂತಹ ಹಳ್ಳಿಗಳನ್ನು, ಜಮೀನಿರುವ ಹಳ್ಳಿಗಳನ್ನು ಸರ್ವೇಮಾಡಿ ಎಷ್ಟು ಜನ ಜಮೀನಿಲ್ಲದವರಿದ್ದಾರೆ, ಎಷ್ಟು ಸರ್ ಪ್ಲಸ್ಸು ಗೋಮಾಳವಿದೆ, ಎಷ್ಟು ರಿಲೀಸ್ ಆಗಿದೆ ಎಷ್ಟು ಭೂಮಿಯನ್ನು ರಿಲೀಸು ಮಾಡುವುದ ರಲ್ಲಿದೆ ಎನ್ನುವುದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು, ಒಂದು ಪ್ರೋಗ್ರಾಂ ಹಾಕಿಕೊಂಡು, ಎಷ್ಟು ಸಂಸಾರ ಗಳಿವೆ, ಎನ್ನುವುದನ್ನು ನೋಡಿ ಕನಿಷ್ಟಪಕ್ಷ ಐದು ಎಕರೆ ಯಷ್ಟು ಭೂಮಿಯನ್ನಾದರೂ ಹಂಚುವ ವ್ಯವಸ್ಥೆಮಾಡಿ ಎಲ್ಲರಿಗೂ ಜಮೀನು ಸಿಕ್ಕುವಂತೆ ಹಂಚಬೇಕು. ಈ ರೀತಿಯಾದ ಒಂದು ರೆಗ್ಯುಲರಾದ ಪ್ರೋಗ್ರಾಂಹಾಕಿ ಕೊಂಡು ಜಮೀನುಗಳಿರುವಕಡೆ ಜನಗಳಿಗೆ ವಿಲೇಮಾ ಡುವ ಕಾರ್ಯವನ್ನು ಸರಕಾರ ಕೈಗೊಳ್ಳಬೇಕು.

ನಮ್ಮ ರೆವಿನ್ಯೂ ಸರ್ವೇನಂಬರುಗಳನ್ನು ನೋಡಿ ರೈತನ ಆಸ್ತಿ ಎಷ್ಟಿದೆ ಎನ್ನುವುದು ಸಾಮಾನ್ಯವಾದ ವಿದ್ಯಾವಂತರಿಗೂ ಗೊತ್ತಾಗುವುದಿಲ್ಲ. ಎಷ್ಟು ಎಕರೆ ಜಮೀನಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸರಿ ಯಾಗಿ ಕಲ್ಲುಬಾಂದುಹಾಕದೆ ಹೇಳುವುದಕ್ಕೆ ಸಾಧ್ಯವಿಲ್ಲ. ರಿಜಿಸ್ಟರು ಮಾಡುವಕಾಲದಲ್ಲಿ ಖಾತೆದಾರನು ತಕ ರಾರು ಹಾಕುವುದಕ್ಕೆ ಅವಕಾಶವಿಲ್ಲದಂತೆ Re-survey ನಂಬರನ್ನು ಕೊಟ್ಟು ಬಾಂದು ಕಲ್ಲು ಹಾಕಬೇಕು. ಹೀಗೆಹಾಕಲು ಸ್ವಲ್ಪ ದುಡ್ಡುಬೇಕಾದರೆ, ಆ ಕರ್ಚನ್ನು ಖಾತೇದಾರನ ಮೇಲೆ ಹಾಕಿದರೂ ಚಿಂತೆಇಲ್ಲ. ಮದರಾ ಸಿನಲ್ಲಿ ಈರೀತಿಯಾದ ಸಿಸ್ಟಂ ಇದೆ. ಅಲ್ಲಿ ಸರ್ವೆ ನಂಬರು ಹಾಕಿರುವ ಕಲ್ಲುಗಳು ಪ್ರತಿಜಮೀನಿನ ಹತ್ತಿರವೂ ಹಾಕಲಾಗಿದೆ. ಹಾಗೆಬಾಂದು ಕಲ್ಲು ಹಾಕಿದಮೇಲೆ ಇತರರು ತಕರಾರು ಮಾಡಲು ಹಕ್ಕಿರುವುದಿಲ್ಲ. ಹೀಗೆ ಬಾಂದುಕಲ್ಲುಗಳನ್ನು ಹಾಕಿ ನಮ್ಮ ಜಮೀನಿನ ಹದ್ದು ಬಸ್ತುಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಕಾಗದ ಪತ್ರಗಳು ರಿಜಿಸ್ಟರಾದಮೇಲೆ ಖಾತೆಮಾಡು ವಾಗ Record of Rights ನಲ್ಲಿ ನಿಧಾನಮಾಡು ತ್ತಾರೆ. ಒಂದು ಖಾತೆ ರಿಜಿಸ್ಟರಾದ ಮೇಲೆ ಆಗಾಲೇ ಅವನ ಹೆಸರಿಗೆ ಆ ಖಾತೆಯಾಗಬೇಕು. ಹಾಗೆ ಖಾತೆ ಯಾಗಿರುವುದನ್ನು ಆ ಕೂಡಲೇ ಖಾತೇದಾರನಿಗೆ ತಿಳಿ ಸುವಂತೆ ಏರ್ಪಾಡು ಮಾಡಬೇಕು. ರಿಕಾರ್ಡುಗಳಲ್ಲಿ ಖಾತೆದಾರ ಪೌತಿಯಾಗಿ ಇಪ್ಪತ್ತು ವರ್ಷವಾಗಿದ್ದರೂ ಆ ಖಾತೆ ಹಿಂದೆ ಯಾವ ಹೆಸರಿನಲ್ಲಿತ್ತೊ ಅದೇ ಹೆಸರಿನಲ್ಲಿ ರುತ್ತದೆ. ಆದಕ್ಕಾಗಿ ಈ ರಿಕಾರ್ಡ್ ಆಫ್‌ರೈಟ್ಸ್ ಸೆಕ್ಷನ್ನಿಗೆ ಇನ್ನೂ ಒಬ್ಬಿಬ್ಬರು ಕ್ಲಾರ್ಕ್‌ಗಳು ಬೇಕಾದ ರೂ ನೇಮಿಸಿ ಕಾಗದಗಳು ರಿಜಿಸ್ಟರಾದ ತಕ್ಷಣವೇ ಖಾತೆಯನ್ನು ಅವನ ಹೆಸರಿಗೆ ವರ್ಗಮಾಡಬೇಕು. ಇದ ರಿಂದ ಎಷ್ಟೋ ಸಿವಿಲ್ ಲಿಟಿಗೇಷನ್ನುಗಳು ಕಡಿಮೆ ಯಾಗುತ್ತದೆ ಖಾತೆದಾರನು ಸತ್ತುಹೋದ ತಕ್ಷಣ ಅವನ ವಾರುಸುದಾರ ಯಾರಿರುವರೋ ಅಂತಹವರ ಹೆಸರಿಗೆ ಖಾತೆ ಇರುವ ಹಾಗೆ ನಾವು ಮಾಡಬೇಕು. ಒಂದು ಸಂಸಾರದಲ್ಲಿ ಇರುವ ಜ್ಯೇಷ್ಟಮಗನ ಹೆಸರಿಗೆ ತಕ್ಷಣ ಖಾತೆಯಾಗುವ ಹಾಗೆ ಮಾಡಬೇಕು. ಇನ್ನು ಪಟೇಲ ಶ್ಯಾನುಭೋಗರುಗಳ ಹಕ್ಕು ಬಾಧ್ಯತೆಗಳನ್ನು ತೆಗೆಯಬೇಕೆಂದು ಅನೇಕಸಾರಿ ಈ ಸಭೆಯಲ್ಲಿ ಚರ್ಚೆಗೆ ಬಂದು ಒಂದು ತೀರ್ಮಾನಕ್ಕೂ ಸಹ ಬಂದಿದ್ದಾರೆ. ಅವರ ಹಕ್ಕು ಬಾಧ್ಯತೆಗಳನ್ನು ತೆಗೆಯಬೇಕು ಎನ್ನುವ ಬಿಲ್ಲನ್ನು ತರುವುದರಲ್ಲಿ ರೆವಿನ್ಯೂ ಮಂತ್ರಿಗಳು ಬಹಳ ನಿಧಾನ ಮಾಡುತ್ತಿದ್ದಾರೆ.

ಶ್ರೀ ಕಡಿದಾಳ್‌ಮಂಜಪ್ಪ.—ಅಸೆಂಬ್ಲಿಯಲ್ಲಿ ಈಗಾ ಗಲೇ ಇಂಟ್ರೊಡ್ಯೂಸು ಮಾಡಲಾಗಿದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಇಂಟ್ರೊಡ್ಯೂಸು ಮಾಡುವುದಲ್ಲ. ಅದನ್ನು ಜಾಗ್ರತೆ ತರಬೇಕೆಂದು ಹೇಳುತ್ತೇನೆ. ಈಗಾಗಲೇ ರಿಕಾರ್ಡಆಫ್‌ರೈಟ್ಸ ನಂತೆ ಖಾತೆಮಾಡುವುದು ಮತ್ತಿತರ ಕೆಲಸಗಳನ್ನೆಲ್ಲ ಪಟೇಲ ಶ್ಯಾನುಭೋಗರುಗಳು ಮಾಮೂಲಾಗಿ ಮಾಡುವುದನ್ನು ತಾಲ್ಲೂಕು ಆಫೀಸಿಗೆ ಬಿಟ್ಟಿದ್ದಾರೆ ಗ್ರಾಮ ನೌಕರರು ಬದಲಾವಣೆಯಾಗುತ್ತಾರೆಂದು ತಿಳಿದು ಈಗಾಗಲೇ ಕೆಲಸಕಾರ್ಯಗಳು ಬಹಳ ನಿಧಾನವಾಗಿಆಗುತ್ತಿವೆ. ಪಟೇಲ ಶ್ಯಾನುಭೋಗರು ಗಳಿಗೆ ಮುಂದೆ ಇದರಿಂದ ತೊಂದರೆಯಾಗಬಹುದು ಎಂದು ಹೇಳಿದುದಕ್ಕೆ ತೊಂದರೆಯಾಗುವುದಿಲ್ಲ ಎನ್ನುವ ಬಗೆಗೆ ಒಂದು ಸ್ಟೇಟುಮೆಂಟನ್ನು ಎಲ್. ಎಸ್. ಜಿ. ಮಿನಿಸ್ಟರು ಕೊಟ್ಟು ಇವರಿಗೆ ತೊಂದರೆಯಾಗುವುದಿಲ್ಲ, ಗ್ರಾಮನೌಕರರುಗಳನ್ನು ಗ್ರಾಮಪಂಚಾಯತಿಗಳಲ್ಲಿ ಸೆಕ್ರೆಟರಿಗಳಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಇದರಲ್ಲೂಕೂಡ ಪಟೇಲರಿರುವವರು qualify ಆಗಿ ದ್ದರೆ ಇವರನ್ನು ಗ್ರಾಮಪಂಚಾಯತಿಗಳಲ್ಲಿ ಸೆಕ್ರೆಟರಿ ಯಾಗಿರಲು ಅವಕಾಶ ಕಲ್ಪಿಸಿ ಕೊಡಬೇಕು. ಈಗಾಗ ಲೇ ಸರ್‌ಕ್ಯೂಲರ್ ಕೂಡಕಳುಹಿಸಿದ್ದಾರೆ. ಗ್ರೂಪು ಪಂಚಾಯತಿಗಳಿಗೆ ಶ್ಯಾನುಭೋಗರುಗಳನ್ನು ಪಂಚಾಯತಿ ಸೆಕ್ರೆಟರಿಗಳಾಗಿ ನೇಮಿಸುತ್ತಾರೆ. ಅದೇರೀತಿ ಪಟೇಲರುಗಳಲ್ಲಿ qualified hands ಗಳಿದ್ದರೆ ಅಂತಹವರನ್ನು ಸೆಕ್ರೆಟರಿಗಳ ಕೆಲಸಕ್ಕೆ ನೇಮಿಸಲು ಅವಕಾಶಕೊಡಬೇಕೆಂದು ಹೇಳುತ್ತೇನೆ.

ಟೆನೆನ್ಸಿ ಕೇಸುಗಳಲ್ಲಿ ನಮಗೆ ನ್ಯಾಯ ದೊರೆಯು ತ್ತಿಲ್ಲ. ಈ ಕೇಸನ್ನು ವಹಿಸಿರುವವರು ನಿಜವಾಗಿಯೂ BA. L. L. B. ಮಾಡಿರುವವರಾಗಿದ್ದರೂ ಕಾನೂ ನಿನಂತೆ ಆರ್ಗ್ಯುಮೆಂಟು ಮಾಡುವಾಗ ಎವಿಡೆನ್ಸ್. ಕೊಡುವಾಗ ಸರಿಯಾಗಿ ಕೊಡುತ್ತಿಲ್ಲ. ಕೋರ್ಟಿ ನಲ್ಲಿರುವ ಮುನ್ಸೀಫರು ಲಾಯರುಗಳು L.L.B. ಮಾಡಿರುತ್ತಾರೆ. ಆದರೆ ಅವರು ಸಿವಿಲ್ ಲಿಟಿಗೇಷನ್ನಿನಲ್ಲಿ ಹೇಳುವ ವಿಷಯಗಳಲ್ಲಿ ಬಹಳ ವ್ಯತ್ಯಾಸಗಳಿರುತ್ತವೆ. ಅವರಿಗೆ LL. B. ಆಗಿ ದ್ದರೂ ರೆವಿನ್ಯೂ ಕೇಸುಗಳ touch ಇರುವುದಿಲ್ಲ. ಬೇರೆ ಟೆನೆನ್ಸಿ ಫೈಲುಗಳಲ್ಲಿ ರೈತರಿಗೆ ನಿಜವಾಗಿಯೂ ಇದ ರಿಂದ ತೊಂದರೆಯಾಗುತ್ತದೆ. ಸರಿಯಾಗಿ ರೆವಿನ್ಯೂ ಕೇಸುಗಳನ್ನು ತಿಳಿದಿರುವವರನ್ನು ಕನಿಷ್ಟಪಕ್ಷ ಸ್ಪೆಷಲ್ ಮುನ್ಸೀಫರುಗಳಾಗಿರುವವರನ್ನು ನೇಮಕ ಮಾಡಿ ಈ ಟೆನೆನ್ಸಿ ಕೇಸುಗಳು ಅವರ ಮುಂದೆ ಹೋಗುವಂತೆ ಏರ್ಪಾಡು ಮಾಡಬೇಕೆಂದು ನಾನು ಕೇಳುತ್ತೇನೆ. ಈ ರೆವಿನ್ಯೂ ಇಲಾಖೆಯಲ್ಲಿ ಅಕ್ವೈರು ಮಾಡಿಕೊಂಡ ಜಾಗಕ್ಕೆ ಸರಕಾರದವರು ಹತ್ತಿಪ್ಪತ್ತು ವರ್ಷಗಳಾದ ರೂ ಇದರ ಕಾಂಪೆನ್‌ಸೇಷನ್ನಿನ ಪೇಮೆಂಟು ಇಲ್ಲಿಯ ವರೆಗೂ ಮಾಡಿರುವುದಿಲ್ಲ. ನಾನು ತಿಳಿದುಕೊಂಡ ಮಟ್ಟಿಗೆ ಸುಮಾರು ಹತ್ತು ಕೋಟಿರೂಪಾಯಿಗಳಷ್ಟು ಕಾಂಪೆನ್‌ಸೇಷನ್ ರೈತರಿಗೆ ಕೊಡಬೇಕಾಗಿ ಬರ ಬಹುದು.

ಲೇಟ್ ಶ್ರೀಮಾನ್ ಎನ್. ಎನ್. ಅಯ್ಯಂಗಾರ್ಯರು ನಮ್ಮಕಡೆಯಲ್ಲಿ ಎಂದರೆ ನುಗ್ಗೆಹಳ್ಳಿಬಳಿ, ಚನ್ನರಾಯ ಪಟ್ಟಣದ ತಾಲ್ಲೂಕನಲ್ಲಿ ಕಟ್ಟೆ, ಕಾಲುವೆಗಳನ್ನು

ಮಾಡಿದರು. ಈಗ ಹದಿನೈದು ವರ್ಷಗಳ ಮೇಲಾಯಿತು. ಆದರೂ ಕಾಂಪೆನ್‌ಸೇಷನನ್ನು ಇನ್ನೂ ಕೊಡಲ್ಲಿಲ್ಲ. ಅನೇಕ ರೆಫರೆನ್ಸುಗಳನ್ನು ನಾನು ಮಾಡಿದೆ. ಬೇಕಾದರೆ ಹತ್ತು ಹದಿನೈದು ಕಾಗದಗಳ ವಿವರ ಕೊಡುತ್ತೇನೆ. ಹಾಗೆ ಶ್ರವಣಬೆಳಗೊಳದ ಚಳ್ಯದಬಳಿ ಅಲ್ಲಿನ ರೈತರು ಸರಕಾರಕ್ಕೆ ಸುಮಾರು 75 ಪಿಟಿಷನ್ನುಗಳನ್ನು ಕೊಟ್ಟಿದ್ದಾರೆ ಸರಕಾರದ P.W.D. ಶಾಖೆಗೆ ಬಂದ ಮಂತ್ರಿಗಳಲ್ಲಿ 10–12 ಅರ್ಜಿಗಳನ್ನು ಕೊಟ್ಟಿದ್ದಾರೆ. ಇವತ್ತಿನವರೆಗೂ ಅಲ್ಲಿನ ರೈತರು ಅವರಿಗೇನೂ ಕಾಂಪೆನ್‌ಸೇಷನ್ನು ಬರಬೇಕಾಗಿತ್ತೋ ಅಷ್ಟು ದುಡ್ಡನ್ನು ನಿಜವಾಗಿಯೂ ಬರೀ ತಿರುಗಾಟಕ್ಕೇನೇ ಖರ್ಚುಮಾಡಿದ್ದಾರೆ. ಬೇಕಾದರೆ ಅಂಕಿ ಅಂಶಗಳನ್ನು ಕೊಡುತ್ತೇನೆ. ಚಳ್ಯದ ಬಳಿ ಮುಳುಗಡೆಯಾಗಿರುವ ಗ್ರಾಮಗಳಿಗೆ ಇನ್ನೂ ಕಾಂಪೆನ್‌ಸೇಷನ್ನನ್ನು ಕೊಟ್ಟಿಲ್ಲ. ಹೀಗೆ ದೇಶದಲ್ಲಿ ಎಷ್ಟೋ ವರ್ಷಗಳಿಂದ ಇದ್ದು ದೇಶಕ್ಕಾಗಿ ಜಮೀನು ಬಿಟ್ಟು ಕೊಟ್ಟ ರೈತರಿಗೆ ಸಕಾಲದಲ್ಲಿ ಕಾಂಪೆನ್ಸೇಷನ್ ಸಿಕ್ಕದೆ ಹೋಗಿ ಹಣ ಕೈ ಸೇರುವುದು ತಡವಾದರೆ ಆ ರೈತರಿಗೆ ಏನು ಸಹಾಯ ಮಾಡಿದಂತಾಯಿತೆಂದು ನಾನು ಕೇಳುತ್ತೇನೆ. ಈ ಅನ್ಯಾಯವನ್ನು ತಪ್ಪಿಸಲು ಯಾವುದೇ ಜಮೀನನ್ನು ರಸ್ತೆಗೋಸ್ಕರ ವಾಗಲಿ ಕಾಲುವೆಗಾಗಲಿ ತೆಗೆದುಕೊಂಡಲ್ಲಿ ಅದಕ್ಕೆ ಕೊಡುವ ಕಾಂಪೆನ್‌ಸೇಷನನ್ನು ಒಂದು ವರ್ಷದೊಳಗಾಗ ಬೇಕಾಗಿಯೇ ಕಡ್ಡಾಯವಾಗಿ ಇತ್ಯರ್ಥ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಕಾಂಪೆನ್‌ಸೇಷನ್ ತೆಗೆದುಕೊಳ್ಳುವುದಕ್ಕೆ ಈಗ ಆ ಜನರು ಇದ್ದಾರೆಯೇ ?

ಶ್ರೀ ಎನ್. ಜಿ. ನರಸಿಂಹೇಗೌಡ.—ಕೆಲವರು ಇದ್ದಾರೆ. ಕೆಲವರು ಆಗಲೇ ಸತ್ತು ಹೋಗಿದ್ದಾರೆ. ಆದುದರಿಂದ ಬೇಗ ಇಂಥ ಕಾಂಪೆನ್‌ಸೇಷನ್‌ಗಳನ್ನು ಇತ್ಯರ್ಥಮಾಡುವ ಬಗ್ಗೆ ಡೆಪ್ಯುಟೀ ಕಮೀಷನರವರಿಗೆ ಅಧಿಕಾರವನ್ನು ಕೊಡಿ. ಸರ್ಕಾರಕ್ಕೆ ಬರುವುದು ಬೇಡ ಎಂದು ನಾನು ಬೇಡಿಕೊಳ್ಳುತ್ತೇನೆ. ಆಮೇಲೆ ಜಮೀನುಗಳನ್ನು ಆಕ್ವೈರ್ ಮಾಡಿಕೊಳ್ಳುವಾಗ ಅಕ್ವಿಜಿಷನ್ ಆಕ್ಟಿನ ಸಾಮಾನ್ಯ ನಿಯಮಗಳಂತೆ ತಾವು ಹೋಗುವುದಾದರೆ ಒಂದೊಂದು ಕೇಸಿಗೂ 1 ರಿಂದ 20 ವರ್ಷಗಳವರೆಗೂ ತೆಗೆದುಕೊಳ್ಳುತ್ತದೆ. ತಮಗೆ 17 ನೆಯ ಸೆಕ್ಷನ್ ಪ್ರಕಾರ ಅಧಿಕಾರವಿದ್ದರೂ ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಒಂದು ರಸ್ತೆ ಮಾಡಿಸುವುದರಲ್ಲಿ ಕಾಲುವೆ ಮಾಡಿಸುವುದರಲ್ಲಿ ಹೀಗೆ ನಿಧಾನವಾಗಿ ಹೋಗುವುದಾದರೆ ಕಾರ್ಯ ಎಂದಿಗೆ ಸಾಧನೆಯಾದೀತು? ಈ ರೀತಿಯಾದರೆ ಹೊಸದಾಗಿ ಮನೇಕಟ್ಟಿಕೊಂಡು ಹೋಗಬೇಕೆನ್ನುವ ಬಡರೈತರಿಗೆ ಬಹಳಕಷ್ಟವಾಗುತ್ತದೆ. ಆದುದರಿಂದ ಅಧಿಕಾರಿಗಳು ಕಡ್ಡಾಯವಾಗಿ 17ನೆಯ ಸೆಕ್ಷನ್‌ಪ್ರಕಾರ ಕಾರ್ಯಕ್ರಮವನ್ನು ಕೈಕೊಳ್ಳ ಬೇಕೆಂದು ನಾನು ಸೂಚಿಸ ಬಯಸುತ್ತೇನೆ.

ದೇವಸ್ಥಾನಗಳ ವಿಷಯದಲ್ಲಿ ನಾನು ವಿಷಾದದಿಂದ ಒಂದು ಮಾತನ್ನು ಹೇಳಬೇಕಾಗಿದೆ. ನೀವು ಸರ್ಕಾರವನ್ನು ರಚಿಸಲುಹೊರಟಾಗ ನಾವು ದೇವರಮೇಲೆ ಭಾರಹಾಕಿ ಕೆಲಸಮಾಡುತ್ತೇವೆ ಎಂದುಹೇಳಿಕೊಂಡಿರಿ. ಅಧಿಕಾರವನ್ನು ಸ್ವೀಕಾರ ಮಾಡಬೇಕಾದರೂ ಅಮ್ಮ ತಘುಳಿಗೆಯಲ್ಲಿ ಸ್ವೀಕಾರಮಾಡಬೇಕು. ಮನೆಯಲ್ಲಿ ಹಿರಿಯರ ತಾಯಿಯರ ಪೂಜೆಮಾಡಿ ಅವರ ಆಶೀರ್ವಾದವನ್ನು ಪಡೆದು ಅಧಿಕಾರ ಕೈಕೊಳ್ಳುತ್ತೇವೆ ಎಂದೆಲ್ಲಾ ಹೇಳಿಕೊಂಡಿರಿ. ಅಂಥವರು ಇಂದುನೋಡಿದರೆ ದೇವರನ್ನು ಮರೆತಿರುವಂತೆ ಕಾಣುತ್ತದೆ. ನಿಮ್ಮ ಅಧಿಕಾರದಲ್ಲಿ ದೇವಸ್ಥಾನಗಳು ಶಿಥಿಲಗೊಳ್ಳುತ್ತಿವೆ. ದೇವಸ್ಥಾನಗಳಿಗೆ ಸಾಕಾದಷ್ಟು ಗ್ರಾಂಟು ಕೊಡುತ್ತಿಲ್ಲ. ಅಲ್ಲಿ ಪೂಜೆಪುನಸ್ಕಾರಗಳು ಸರಿಯಾಗಿ ನಡೆಯುತ್ತಿವೆಯೇ ಇಲ್ಲವೇ ಎಂದು ನೋಡಬೇಕಾದುದು ಆಡಳಿತದ ಕರ್ತವ್ಯ. ದೇವಸ್ಥಾನಗಳ ಜಮೀನುಗಳನ್ನು ಹರಾಜುಮಾಡಿ ಟೆನೆಂಟುಗಳಿಂದ ಬರತಕ್ಕ ಹಣವನ್ನು ಒಂದು ಫಂಡಾಗಿ ಏರ್ಪಡಿಸಿ ಡಿಪಾಜಿಟ್ಟು ಇಟ್ಟು ಬಂದ ಬಡ್ಡಿಯಿಂದ ದೇವರ ಕೆಲಸಗಳು ಸಾಂಗೋಪಾಂಗವಾಗಿ ನಡೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ಆಮೇಲೆ ಕೇಂದ್ರ ಸರ್ಕಾರದ ಹತೋಟಿಯಲ್ಲಿರುವ ದೇವಸ್ಥಾನಗಳ ವಿಷಯದಲ್ಲಿ ಆಗಾಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ಜಾಗ್ರತೆ ಧನಸಹಾಯ ಬರಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಆಮೇಲೆ ಎನ್.ಇ.ಎಸ್. ವಿಷಯದಲ್ಲಿ 4 ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಬಹಳ ಅನುಭವಸ್ಥರು. ಬಹಳ ದಿವಸಗಳಿಂದ ರಾಜಕೀಯದಲ್ಲಿದ್ದವರು. ಕೌನ್ಸಿಲ್ ಮೆಂಬರಾಗಿ ಕೂಡ ಇದ್ದು ಹಳ್ಳಿಗಳವರ ಕಷ್ಟಗಳನ್ನು ತಿಳಿದುಕೊಂಡಿದ್ದಾರೆ. ಎನ್.ಇ.ಎಸ್. ಬ್ಲಾಕುಗಳಲ್ಲಿ ತಹಸೀಲ್ದಾರರು ಮತ್ತು ರೂರಲ್ ಡೆವಲಪ್‌ಮೆಂಟ್ ಅಧಿಕಾರಿಗಳು ಎಂದು ಇಬ್ಬರು ಅಧಿಕಾರಿಗಳಿದ್ದರೆ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಜಾಸ್ತಿಯಾಗುತ್ತದೆ. ಇದನ್ನು ತಗ್ಗಿಸುವ ದೃಷ್ಟಿಯಿಂದ 25,000ಕ್ಕಿಂತ ಜಾಸ್ತಿಯಿರುವ ತಾಲ್ಲೂಕುಗಳನ್ನು ಎರಡು ವಿಭಾಗ ಮಾಡಬೇಕೆಂದು ಹೇಳುತ್ತೇನೆ. ಮತ್ತು ಎನ್.ಇ.ಎಸ್.ಗಳಲ್ಲಿ ಈಗ ಶೇಕಡವಾರು ಕೊಡುತ್ತಿರುವುದು ಕಡಮೆ. 75 ಭಾಗವನ್ನು ಸರ್ಕಾರದವರು ಕೊಡುವಂತೆ ನೇಮಕಮಾಡಬೇಕೆಂದು ಹೇಳುತ್ತೇನೆ.

ಇನ್ನು ಫ್ಯಾಮಿನ್ ರಿಲೀಫ್ ವಿಷಯಕ್ಕೆ ಬರುತ್ತೇನೆ. ಈಗ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಮಳೆನಾಡನ್ನು ಬಿಟ್ಟರೆ, ಮಿಕ್ಕ ಡಿಸ್ಟ್ರಿಕ್ಟ್‌ಗಳಲ್ಲಿ ಅಂದರೆ ಕೋಲಾರ, ಹಾಸನ, ಚಿತ್ರದುರ್ಗ ಮುಂತಾದ ಕಡೆಗಳಲ್ಲಿ ಆಗಾಗ್ಗೆ ಕ್ಷಾಮ ಬರುತ್ತಿದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಒಂದು ಆಕ್ಟನ್ನೇ ಬೇಕಾದರೂ ತರಬಹುದು. ಡಿಸ್ಟ್ರಿಕ್ಟ್‌ವಾರು ಒಂದು ಕಮಿಟಿ ಮಾಡಿ ಅದರ ಅಧೀನದಲ್ಲಿ ಒಂದು ಫಂಡನ್ನು ಮಾಡಿ ವರ್ಷಕ್ಕೆ 2 ಕೋಟಿ ರೂಪಾಯಿಗಳನ್ನು ಈಬಗ್ಗೆ ಪ್ರೊವೈಡ್‌ಮಾಡಿ ಈ ರೀತಿ ಡಿಸ್ಟ್ರಿಕ್ಟ್‌ವಾರು ಕಮಿಟಿ ಮಾಡಿದರೆ ದೇಶದಾದ್ಯಂತ ಮಳೆಬಾರದೆ ಹೋದರೂ ಕ್ಷಾಮ ಬರದಂತಾಗುತ್ತದೆಂದು ನಾನು ಹೇಳುತ್ತೇನೆ.

Mr. SPEAKER.—Now the House rises and will meet to-morrow at 12 NOON.

The House adjourned at Thirty Minutes past Six of the Clock to meet again at Twelve of the Clock on Friday, the 15th April 1960.

WD.3002—GPB—900—15-6-1962